
ಐಕ್ಯ...
ನಂ. 12, 18ನೇ ಕ್ರಾಸ್,
- 560 027.

ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 26 ಸಂಚಿಕೆ 1
ಜನವರಿ 5, 2003 ಬೆಲೆ ರೂ. 3.00




ಬಿಕ್ಕಟ್ಟಿನಲ್ಲಿ ಪ್ಲಾಂಟೇಶನ್ ಉದ್ದಿಮೆ
ಬೀದಿ ಪಾಲಾದ ಕಾರ್ಮಿಕರು




ಪ್ಲಾಂಟೇಶನ್ ಉಳಿಸಿ
ಕಾರ್ಮಿಕರನ್ನು ರಕ್ಷಿಸಿ

ಚಿಕ್ಕಮಗಳೂರಿನಲ್ಲಿ
ಅಖಿಲ ಭಾರತ ಕಾರ್ಮಿಕರ ಸಮ್ಮೇಳನ



ಜನರ
ಪ್ರಾಣ ಸಂಕಟ
ಕಾಂಗ್ರೆಸ್-ಬಿಜೆಪಿ ಚೆಲ್ಲಾಟ




ಮತ ಮೌಢ್ಯದ ನಿತ್ಯರೋಗ

ಕುವೆಂಪು ವಿಚಾರ ಧಾರೆಗಳು


ಬಾಬಾಬುಡನ್‌ಗಿರಿ: ಹುರುಳಿಲ್ಲದ ವಿವಾದಗಳು

- ಎ.ಕೆ. ಸುಬ್ಬಯ್ಯ



ಬಾಬ್ ಕಟ್ ಚಿನಾಲಿ.....!

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

10

ಆಂಗ್ಲೋ ಇಂಡಿಯನ್ನರನ್ನು ಹಿಗ್ಗಾಮುಗ್ಗಾ ಬಡಿಯಲು ರೂಪಿಸಿದ ಯೋಜನೆ, ತರುಣ ಸ್ಮರಣಸಿಂಗ್ ಸಿಟ್ಟಿನಿಂದ ಆಂಗ್ಲ-ಅಧಿಕಾರಿಯ ಗ್ಲಾಸಿಗೆ ಮಧ್ಯಸುರಿಯುತ್ತಲೇ ಜೊತೆಗೆ ಭಾರತದ ಸ್ವಾತಂತ್ರ್ಯದ ಬೇಡಿಕೆಯನ್ನು ಕಿವಿಗೆ ಸುರಿಸುತ್ತಿದ್ದದ್ದು, ನೀವು ದರಿದ್ರ ಭಾರತೀಯರು ನಮ್ಮ ಬೆನ್ನಿಗೆಚೂರಿ ಹಾಕುತ್ತಿದ್ದೀರಿ.... ರಾಷ್ಟ್ರೀಯ ಆಂದೋಲನವೊಂದರ ಆರಂಭ ಮತ್ತು ಆಂಗ್ಲರು ಭಾರತದ ಜನತೆಗೆ ನೀಡಿದ ಆಶ್ವಾಸನೆಗಳ ಪೊಳ್ಳುತನಗಳ ಬಗ್ಗೆ ಓದಿರುವಿರಿ.... ಮುಂದೆ...



ಕನ್ನಡಕ್ಕೆ: **ವಿಶ್ವ ಕುಂದಾಪುರ**

ಬ್ರಿಟೀಷರ ಅಂತರ್ಯ

30ರ ದಶಕದ ಕೊನೆ ಭಾಗದ ಪ್ರಾಂತೀಯ ಸ್ವಾಯತ್ತ (ಅಸಹಜ ಮತ್ತು ಔಪಚಾರಿಕ) ಯುದ್ಧದ ನಂತರ ಸ್ವಾತಂತ್ರ್ಯ ಕೊಡುತ್ತೇವೆ ಎಂಬ ಕ್ರಿಪ್ಸ್ ಭರವಸೆಗಳು ಇವೆಲ್ಲವೂ ಜನರಿಗೆ ಮೋಸ ಮಾಡುವ ಕ್ರಮಗಳಾಗಿದ್ದವು. ಭಾರತಕ್ಕೆ ಸ್ವಾತಂತ್ರ್ಯ ನೀಡದಿರುವ ಅವರ ದೃಢಮನಸ್ಸಿನ ದ್ಯೋತಕವಾಗಿದ್ದವು. 'ನಾನು ಬ್ರಿಟಿಷ್ ಸಾಮ್ರಾಜ್ಯದ ಅವನತಿಯ ನೇತೃತ್ವ ವಹಿಸಲು ಗ್ರೇಟ್ ಬ್ರಿಟನ್ನಿನ ಪ್ರಧಾನಿಯಾಗಿಲ್ಲ' ಎಂದು ವಿನ್ಸಂಟ್ ಚರ್ಚಿಲ್ ಹೇಳಿದ್ದರಲ್ಲಿ ಇದು ವ್ಯಕ್ತವಾಗುತ್ತದೆ. ವಾಗ್ವಾದದ ವೇಳೆ ಬ್ರಿಟೀಷ್ ಅಧಿಕಾರಿ ಬಾಯಿತಪ್ಪಿ ಆಡಿದ ಮಾತು ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ಅಂತರ್ಯದಲ್ಲಿರುವ ಗುಟ್ಟನ್ನು ಹೊರಗೆಡಹಿತ್ತು ಅಷ್ಟೆ.

ಸಾಮ್ರಾಜ್ಯಶಾಹಿಗಳ ಈ ಆಶ್ವಾಸನೆಗಳು ಮತ್ತು ಭರವಸೆಗಳನ್ನು ನಂಬುತ್ತಿದ್ದ ನಮ್ಮ ರಾಜಕಾರಣಿಗಳ ಅವಿವೇಕದ ಬಗ್ಗೆ ನನಗೆ ವ್ಯಥೆಯಾಗುತ್ತಿತ್ತು. ತನ್ನ ಸಾಮ್ರಾಜ್ಯದ ಇಂಚು ನೆಲಕ್ಕಾಗಿ ಅವರು ಕಾದಾಡುತ್ತಾರೆ ಎಂಬ ನಂಬಿಕೆ ದಿನದಿನವೂ ಬ್ರಿಟಿಷರ ಸಂಪರ್ಕದಲ್ಲಿದ್ದ ನಮಗೆ ಬಲವಾಯಿತು.

ಆ ರಾತ್ರಿ ನನಗೆ ಸರಿಯಾಗಿ ನಿದ್ದೆಯೇ ಬರಲಿಲ್ಲ. ನಮ್ಮ ಮುಂದಿರುವ ಕಾರ್ಯಭಾರದ ಅಗಾಧತೆಯನ್ನು ಊಹಿಸಲು ಸಾಧ್ಯವಿರಲಿಲ್ಲ. ಬ್ಯಾರಕ್‌ಗಳ ಹೊರಗಡೆ ಕ್ರಾಂತಿಕಾರಿ ಚಳುವಳಿಯೊಂದರ ಬೆಂಬಲ ನಮಗೆ ಸಿಗದಿದ್ದರೆ ಭಾರತದ ರಾಜಕೀಯ ಪಕ್ಷಗಳನ್ನು ಸಂಪರ್ಕಿಸಬೇಕು. ಆದರೆ ಹೇಗೆ ಮತ್ತು ಎಲ್ಲಿಗೆ ಹೋಗಬೇಕು ಎನ್ನುವುದು ನನಗೆ ಗೊತ್ತಿರಲಿಲ್ಲ.

ಬಾಬ್‌ಕಟ್ ಚಿನಾಲಿ

ಬಾಬ್‌ಕಟ್‌ನ, ಚಿನಕುರುಳಿ ಹುಡುಗಿಯೊಬ್ಬಳು ಅಂಬಾಲಾ ಪ್ರವೇಶಿಸಿದಳು. ಆಕೆ ಆಕರ್ಷಕವಾಗಿದ್ದಳು. ಬುದ್ಧಿವಂತೆಯೂ ಆಗಿದ್ದಳು. ಕಲ್ಕತ್ತದಲ್ಲಿದ್ದ ನಮ್ಮ ಸಂಘಟನೆಯ ಸಂಪರ್ಕಕ್ಕೆ ಬಂದಿದ್ದ ತರುಣಿಯಾಗಿದ್ದಳು. ಭಾರತದ ಶ್ರೀಮಂತ ಮನೆತನವೊಂದರ ಮಗಳು ಅವಳು. ಕಲ್ಕತ್ತದಲ್ಲಿ ಗ್ರೇಟ್ ಈಸ್ಟ್‌ನರ್ ಹೋಟೇಲಿನಲ್ಲಿ ಆಕೆಯನ್ನು 'ರಿಕ್ರೂಟ್' ಮಾಡಿಕೊಳ್ಳಲಾಗಿತ್ತು. ಒಂದು ಸಂಜೆ ಹೋಟೇಲಿನ ಥಳಕುಬಳುಕಿನ ಡೈನಿಂಗ್ ಹಾಲ್‌ನಲ್ಲಿ ನರ್ತಿಸಲು ತನ್ನ ಸೋದರಿ ಹಾಗೂ ತಾಯಿಯ ಜತೆ ಆಕೆ ಬಂದಳು. ನಮ್ಮ ಸಂಘಟನೆಯ ಲೆಫ್ಟಿನೆಂಟ್ 'ಎಕ್ಸ್' ಕೂಡ ಆ ಸಂಜೆ ಕುಟುಂಬದ ಜತೆ ಸೇರಿದರು.

ಈ ಚೂಟಿ ಹುಡುಗಿ ಭಾರಿ ಬಂಡಾಯದ ಮಾತನ್ನಾಡಿದಳೆಂದು ಲೇ 'ಎಕ್ಸ್' ಹಿಂದೆ ಪತ್ರವೊಂದರಲ್ಲಿ ಬರೆದಿದ್ದರು.

ಈ ತರುಣಮಿತ್ರ ಲೇ.ಎಕ್ಸ್ ಅನಾನುಭವಿ. ಕಲ್ಕತ್ತದ ಗ್ರ್ಯಾಂಡ್ ಹೋಟೇಲಿನ ಗಾರ್ಡನ್‌ನಲ್ಲಿ ಊಟಕ್ಕೆ ಬರುವಂತೆ ಆ ಹುಡುಗಿಯನ್ನು ಆಹ್ವಾನಿಸಿದ್ದ. ಬಾಯಿ ತುಂಬಾ ಮಾತನಾಡಿದರು; ನರ್ತಿಸಿದರು. 'ಆಕೆಯ ರಾಜಕೀಯ ಒಲವೇನು ಎಂಬುದನ್ನು ತಿಳಿಯಲು ಪ್ರಯತ್ನಿಸಿದೆ' ಎಂದೂ ಲೇ ಎಕ್ಸ್ ಬರೆದಿದ್ದ.

"ಬ್ರಿಟಿಷ್ ಆಡಳಿತವನ್ನು ಕಿತ್ತೊಗೆಯಬೇಕೆಂಬುದೇ ಆಕೆಯಲ್ಲಿರುವ ಪ್ರಧಾನ ವಿಚಾರವಾಗಿದೆ. ನಮ್ಮ ಸಂದೇಶವಾಹಕರಾಗಿ (ಕೊರಿಯದ) ಆಕೆಯನ್ನು ನೇಮಿಸಿಕೊಂಡಿದ್ದೇನೆ" ಎಂದೂ ತಿಳಿಸಿದ್ದ.

ಅಂಬಾಲಾ ಸ್ಟೇಷನ್‌ನ ನನ್ನ 'ಗುಹೆ' ಯಲ್ಲಿ ಜೂನ್ ತಿಂಗಳ ಒಂದು ಸಂಜೆ ಬಾಬ್ ಕಟ್ ಹುಡುಗಿಯೊಬ್ಬಳು ಡೈನಿಂಗ್ ಹಾಲ್ ಪ್ರವೇಶಿಸಿದ್ದನ್ನು ಕಂಡೆ. ಅವಳು ನೇರವಾಗಿ ಮ್ಯಾನೇಜರ್ ಬಳಿ ಹೋಗಿ ಸೀಲ್ ಆದ ಕವರ್ ಕೊಟ್ಟಳು. ಅದು ನನಗೆ ಬಂದಿದ್ದಾಗಿತ್ತು. ಯಾವುದೇ ಅನುಮಾನವಿಲ್ಲದೆ ಮ್ಯಾನೇಜರ್ ಆಕೆಯನ್ನು ನನ್ನ ಬಳಿ ಕರೆತಂದ. ಆ ದಿನಗಳಲ್ಲಿ ಬಾಬ್‌ಕಟ್ ಭಾರತೀಯ ಹುಡುಗಿಯರು ತೀರಾ ಅಪರೂಪ. ಭಾರತೀಯ ಅಧಿಕಾರಿಗಳ ಪತ್ನಿಯರು ಮಾತ್ರ ಹಾಗೆ ಮಾಡಿಕೊಳ್ಳುತ್ತಿದ್ದರು. ಆ ಹುಡುಗಿಯಿಂದ ಪ್ರಭಾವಿತನಾದೆ.

"ಮಿಸ್ಟರ್ ವರ್ಮಾ, ಈ ಲೇಡಿ ನಿಮ್ಮನ್ನು ಕಾಣಲು ಬಂದಿದ್ದಾರೆ" - ಮ್ಯಾನೇಜರ್ ನನ್ನ ಕಿವಿಯಲ್ಲಿ ಪಿಸುಗುಟ್ಟಿದ್ದ. ನಾನು ಎದ್ದು ನಿಂತು ಅವಳತ್ತ ಬಾಗಿ ನಮ್ಮನ್ನು ಜತೆ ಸೇರುವಂತೆ ಸೂಚಿಸಿದೆ. ನನ್ನ ಜತೆ ಗ್ಯಾನಿ ಇದ್ದ.

"ನೀವು ವಿ.ಆರ್ ಅಲ್ಲವೇ?" (ವಿ.ಆರ್ ನನ್ನ ಸಂಕೇತನಾಮವಾಗಿತ್ತು) ಆಕೆ ವಿನಯದಿಂದ ಪ್ರಶ್ನಿಸಿದಳು. ಆಕೆಯ ಮಿರುಗುವ ಹಲ್ಲುಗಳ ಹಿಂದೆ ವಿಷಪೂರಿತ ಯೋಜನೆ ಇದ್ದದ್ದು ನನಗೆ ಅರಿವಾಗಲೇ ಇಲ್ಲ.

ಸಂಕೇತ ಪದ ವಿ.ಆರ್ ಅನ್ನು ಸಂಘಟನೆಯ ತೀರಾ ವಿಶ್ವಾಸಾರ್ಹ ನಂಬಲರ್ಹ ಸದಸ್ಯರಿಗೆ ಮಾತ್ರ ತಿಳಿಸಲಾಗುತ್ತಿತ್ತು. ಆದರೆ ಲೆಫ್ಟಿನೆಂಟ್ ಎಕ್ಸ್ ಭಾರಿ ದೊಡ್ಡ ತಪ್ಪು ಮಾಡಿದ್ದರು. ಆಕೆ ಒಬ್ಬ ಬ್ರಿಟೀಷ್ ಏಜೆಂಟ್ ಆಗಿದ್ದಳು. ಆದಿನ ಸಂಜೆಯೇ ನಾನದನ್ನು ಪತ್ತೆ ಮಾಡಿದ್ದೆ. ಅದೊಂದು ನಾಟಕೀಯ ರೀತಿಯ ಪ್ರಕರಣ.

"ನೀವು ಇನ್ನು ಒಂದೆರಡು ದಿನ ಇರುತ್ತೀರೆಂದು ನಾನು ಭಾವಿಸಿದ್ದೇನೆ.... ಮಿಸ್..." ನಾನಂದೆ.

"ಅದೆಲ್ಲ ನಿಮ್ಮನ್ನೇ ಅವಲಂಬಿಸಿದೆ. ನೀವು ಲೆಫ್ಟಿನೆಂಟ್ ಎಕ್ಸ್‌ಗೆ ಯಾವುದೇ ಸಂದೇಶ ಕಳಿಸುವುದಿಲ್ಲವೇ? ನಿಮ್ಮ ಸಂದೇಶ ಈಗಲೇ ಸಿದ್ಧವಾಗಿದ್ದರೆ ಮುಂದಿನ ರೈಲಿಗೆ ನಾನು ಹೊರಡುತ್ತೇನೆ" - ಅವಳೆಂದಳು.

ನಾನು ತಕ್ಷಣವೇ ಸಂದೇಶ ನೀಡಲು ಸಾಧ್ಯವಿರಲಿಲ್ಲ. ಯಾಕೆಂದರೆ ಮೊದಲು ಎಕ್ಸ್ ಪತ್ರವನ್ನು ಓದಬೇಕು. ಹಾಗೂ ನನ್ನ ಉತ್ತರವನ್ನು ಸಿದ್ಧಪಡಿಸಬೇಕಿತ್ತು. ಮರು ದಿನದವರೆಗೆ ಅದು ಸಾಧ್ಯವಿರಲಿಲ್ಲ. ನಾನು ಆಕೆಗೆ ಲಾಡ್ಜಿಂಗ್ ಒಂದರಲ್ಲಿ ಉಳಿಯಲು ಸೂಚಿಸಿದೆ. ಆದರೆ ಆಕೆ ಅದನ್ನು ನಯವಾಗಿ ತಿರಸ್ಕರಿಸಿದಳು.

"ನಾನೇ ಸ್ವಂತ ವ್ಯವಸ್ಥೆ ಮಾಡಿಕೊಳ್ಳುತ್ತೇನೆ. ಇಲ್ಲ ನನ್ನ ಕೆಲವು ಮಿತ್ರರಿದ್ದಾರೆ" ಎಂದು ಹೇಳಿದಳು. ನನಗೆ ಆಶ್ಚರ್ಯವಾಯಿತು. ಪಿತೂರಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರ ನೆತ್ತಿಯ ಮೇಲೆ ಸಾವಿನ ಖಡ್ಗ ತೂಗುತ್ತಲೇ ಇರುತ್ತದೆ. ಅವರು ಸದಾ ಅನುಮಾನದ ಎಚ್ಚರಿಕೆಯಲ್ಲೇ ಇರಬೇಕಾಗುತ್ತದೆ. ಆ ಪ್ರಜ್ಞೆ ನನ್ನಲ್ಲಿ ಎಚ್ಚರವಾಯಿತು. ಅವರ ಮಿತ್ರರಾರು ಎಂಬುದನ್ನು ಕಂಡು ಹಿಡಿಯಬೇಕೆಂದು ನಿಶ್ಚಯಿಸಿದೆ.

ಅವಳು ಆ ರಾತ್ರಿ ಪಡ್ರೆ ಮನೆಯಲ್ಲಿದ್ದಳು. ತರುಣ ಪಡ್ರೆ ಬಗ್ಗೆ ನನಗೆ ತುಂಬಾ ವಿಷಯ ಗೊತ್ತಿತ್ತು. ಆತ ಬ್ರಿಟಿಷ್ ಬೇಹುಗಾರ. ಪವಿತ್ರ ಕೆಲಸದ ಸೋಗು ಹಾಕಿ ಅಪವಿತ್ರ ಕೆಲಸಗಳನ್ನು ಮಾಡುತ್ತಿದ್ದ ಕಂಟೋನ್ಮೆಂಟ್ ಮ್ಯಾಜಿಸ್ಟ್ರೇಟ್ ಭೀಮಸಿಂಗ್ ಮೂಲಕ ನನಗೆ ಈ ವಿಚಾರ ತಿಳಿದಿತ್ತು. ಪಿ.ಸಿ.ಎಸ್ ಸೇವೆಯ ಭೀಮ್‌ಸಿಂಗ್ ನನ್ನ ಸ್ನೇಹಿತನಾಗಲು ಮುಖ್ಯ ಕಾರಣವೆಂದರೆ ನಾನೂ ಔಟ್ ಆಗಿದ್ದೆ! ಕೇಂದ್ರ ಶಾಸನ ಸಭೆಯ (ಸಿಎಲ್‌ಎ) ನಾಮಕರಣ ಸದಸ್ಯರಾಗಿದ್ದ ಅವರ ತಂದೆ ಕ್ಯಾಪ್ಟನ್ ದಳಪತ್‌ಸಿಂಗ್ ನನ್ನ ತಂದೆಯ ಮಿತ್ರರಾಗಿದ್ದರು. ನೇರ ನಡೆನುಡಿಯ, ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿ ಭೀಮ್ ಹಾಗೂ ನನ್ನ ನಡುವಿನ ಒಡನಾಟ ಗಾಢಗೊಂಡಿತು.

"ಆ ಮಣ್ಣಿನ ಮನೆಯಲ್ಲಿರುವ ಪಡ್ರೆ ಬಗ್ಗೆ ನೀನು ಎಚ್ಚರದಿಂದಿರಬೇಕು, ಜೈಪಾಲ್ ಅವನ ಮನೆ ಗೂಢಚಾರರು ಮತ್ತು ಬೇಹುಗಾರರ ಸಭೆಯ ಸ್ಥಳವಾಗಿದೆ. ನೀನು ಭಾವಜೀವಿ. ಭಾವನೆಗಳ ಜತೆ ನೀನು ತೇಲಿಹೋಗುತ್ತೀಯಾ, ಹೀಗಾಗಿ ನಿನಗೆ ಎಚ್ಚರಿಕೆ ನೀಡುತ್ತಿದ್ದೇನೆ. ಹಾಗೇನೇ ನಿನ್ನ ಆ ಕಿಲ್ನರ್ ಬಾರ್ ಮೆಲ್ಲಮೆಲ್ಲನೇ ಬ್ರಿಟಿಷ್ ವಿರೋಧಿ ಕ್ಲಬ್ ಆಗಿ ಪರಿವರ್ತನೆಗೊಳ್ಳುತ್ತಿದೆ. (ಒಬ್ಬ ಸ್ಥಳೀಯ ಸಿಐಡಿ) ಸರ್ದಾರ ನನಗದನ್ನು ಹೇಳಿದ್ದಾನೆ. ನಾನೂ ಒಂದೆರಡು ಬಾರಿ ನಿನ್ನ ಜತೆ ಅಲ್ಲಿ ಇದ್ದುದರಿಂದ ನಾನು ಕೂಡ ತೊಂದರೆಗೆ ಸಿಕ್ಕಿಹಾಕಿಕೊಳ್ಳಬಹುದು" ಎಂದಿದ್ದ ಭೀಮ್‌ಸಿಂಗ್.

ಭೀಮ್‌ಗೆ ನಮ್ಮ ಸಂಘಟನೆಯ ವಿಷಯ ಗೊತ್ತಿರಲಿಲ್ಲ, ಆದರೆ ನಮ್ಮ ಬ್ರಿಟಿಷ್ ವಿರೋಧಿ ನಿಲುವು ತಿಳಿದಿತ್ತು. ನಮ್ಮ ಸಂಜೆಯ ಪಾರ್ಟಿಗಳಲ್ಲಿ ಯುವ ಭಾರತೀಯ ಅಧಿಕಾರಿಗಳು ಇಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದುದನ್ನು ಆತ ಕೇಳಿಸಿಕೊಂಡಿದ್ದ.

ಭಾರತ ಸರಕಾರ ಮತ್ತು ಅದರ ಸಿಐಡಿಗಳ ಅನುಮಾನದ ರೋಗ ಚೆನ್ನಾಗಿ ಗೊತ್ತಿರುವುದರಿಂದ ಭೀಮ್‌ಸಿಂಗ್ ಹೆಸರನ್ನು ಈ ಸಂಬಂಧ ಪ್ರಸ್ತಾಪಿಸುವ ಮುನ್ನ ಹಲವು ಬಾರಿ ಯೋಚನೆ ಮಾಡಿದ್ದೇನೆ. ಕಳೆದ 15 ವರ್ಷಗಳಿಂದ ನಾನವನನ್ನು ಭೇಟಿ ಮಾಡಿಲ್ಲ. ಆತನಿಗೆ ಕೃತಜ್ಞತೆ ಸಲ್ಲಿಸಲು, ಧನ್ಯವಾದ ಹೇಳಲು ಆತನ ಹೆಸರನ್ನು ಪ್ರಸ್ತಾಪಿಸಿದ್ದೇನೆ. ಯಾಕೆಂದರೆ ಪಡ್ರೆ ಬಗ್ಗೆ ಮಾಹಿತಿ ನೀಡುವ ಮೂಲಕ ಆತ ಮಹಾನ್ ದೇಶಭಕ್ತಿ ಕಾರ್ಯವೆಸಗಿದ್ದಾನೆ. ಆತ ಇಡೀ ಸಂಘಟನೆಯನ್ನು ದೊಡ್ಡ ದುರಂತದಿಂದ ಪಾರುಮಾಡಿದ್ದಾನೆ.

ಆ ಅಂದದ ಹುಡುಗಿಯ ನಿಜವಾದ ಉದ್ದೇಶ ಏನೆಂಬುದನ್ನು ಪತ್ತೆ ಮಾಡಿದಾಗ ಒಂದು ಕ್ಷಣ ನನ್ನ ಮೈ ನಡುಗಿಹೋಯಿತು....

"ಆ ಮಣ್ಣಿನ ಮನೆಯಲ್ಲಿರುವ ಪಡ್ರೆ ಬಗ್ಗೆ ನೀನು ಎಚ್ಚರದಿಂದಿರಬೇಕು, ಜೈಪಾಲ್ ಅವನ ಮನೆ ಗೂಢಚಾರರು ಮತ್ತು ಬೇಹುಗಾರರ ಸಭೆಯ ಸ್ಥಳವಾಗಿದೆ. ನೀನು ಭಾವಜೀವಿ. ಭಾವನೆಗಳ ಜತೆ ನೀನು ತೇಲಿಹೋಗುತ್ತೀಯಾ, ಹೀಗಾಗಿ ನಿನಗೆ ಎಚ್ಚರಿಕೆ ನೀಡುತ್ತಿದ್ದೇನೆ"

(ಮುಂದುವರಿಯುವುದು)

ತಿದ್ದುಪಡಿ

ಸಂಚಿಕೆ 51, ಸಂಪುಟ - 24 ರ ಪುಟ 11 ರ 'ಹಂಗೇರಿ ಉನ್ನತಿ-ಅವನತಿ' ಯ ಲೇಖನದ ಕೊನೆಯ ಪ್ಯಾರ ಗೋರ್ಬಚೆವ್ ಕುರಿತ 'ಸಮಾಜದ ಉನ್ನತಿಗೆ ದಿಂದ ...... ಎದು ತಿಳಿಯಿತು' ವರೆಗೆ ಈ ಪ್ಯಾರ ಕಣ್ತಪ್ಪಿನಿಂದ ಮುದ್ರಣವಾಗಿದೆ. ಅದೇ ಸಂಚಿಕೆಯ 3ನೇ ಪುಟದಲ್ಲಿನ ತೋಟ ಕಾರ್ಮಿಕರ ಸಮ್ಮೇಳನದ ವರದಿ - ವಿ.ಸುಕುಮಾರ್. ಅಲ್ಲದೇ ಸಂಚಿಕೆ 50 ಸಂಪುಟ 24 ರ 12ನೇ ಪುಟದಲ್ಲಿನ ಹಶ್ಮಿ ನಾಟಕಗಳ ಕುರಿತು ಪುಸ್ತಕ ವಿಮರ್ಶೆಯನ್ನು ಡಾ. ಆರ್.ವಿ.ಭಂಡಾರಿಯವರು ಮಾಡಿದ್ದಾರೆ. ತಾಂತ್ರಿಕ ದೋಷದಿಂದಾಗಿ ಹೆಸರುಗಳು ಮುದ್ರಣವಾಗಿಲ್ಲ. ಅದಕ್ಕಾಗಿ ವಿಷಾಧಿಸುತ್ತೇವೆ.

- ಸಂ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜನವರಿ 8, 2003

- ಕಾರ್ಮಿಕ ಸಂಘಟನೆಗಳ ಜಂಟಿಸಮಿತಿ(ಜೆಸಿಟಿಯು) ಆಶ್ರಯದಲ್ಲಿ ದೇಶದಾದ್ಯಂತ **ಜೈಲ್ ಭರೋ ಚಳುವಳಿ** ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜೈಲ್ ಭರೋ ಚಳುವಳಿ

ಜನವರಿ 23, 2003

- ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶ, ಬೆಂಗಳೂರಿನಲ್ಲಿ 25.12.2002 ರಿಂದ ಜಾಥಾ - ಉದ್ಘಾಟನೆ ಚಳ್ಳಕೆರೆಯಲ್ಲಿ 31.12.2002 ರಂದು ಜಾಥಾ ಮುಕ್ತಾಯ ಹರಿಹರ

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಐಕ್ಯರಂಗ
ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000


ಜನರ ಪ್ರಾಣ ಸಂಕಟ - ಕಾಂಗ್ರೆಸ್, ಬಿಜೆಪಿ ಚೆಲ್ಲಾಟ

ಕಾವೇರಿ ನೀರಿನ ವಿವಾದ ಮತ್ತು ನಾಗಪ್ಪನವರ ಅಪಹರಣ - ಹತ್ಯೆಯ ಪ್ರಕರಣಗಳೇ ಪ್ರಧಾನವಾಗಿ ಜನಸಾಮಾನ್ಯರ ಪ್ರಶ್ನೆಗಳು ಮೂಲೆಗೆ ಒತ್ತಲ್ಪಟ್ಟಿವೆ. ಪ್ರಮುಖ ವಿರೋಧ ಪಕ್ಷವಾಗಿರುವ ಬಿಜೆಪಿ ಕೇಂದ್ರ ಸರ್ಕಾರದ ವೈಫಲ್ಯ ಮುಚ್ಚಿಕೊಳ್ಳಲು ಹಾಗೂ ರಾಜ್ಯದಲ್ಲಿ ಅಧಿಕಾರ ಹಿಡಿಯುವ ಹೊಂಚಿನಿಂದ ಕೋಮು ದಳ್ಳುರಿ ಹಬ್ಬಿಸುವ ನಾಗಪ್ಪನವರ ಹತ್ಯೆ ಬಳಸಿ ಚಳುವಳಿಯ ನಾಟಕ ನಡೆಸಿದೆ. ಜನಸಾಮಾನ್ಯ, ದುಡಿವ ವರ್ಗದ ಹಿತಗಳ ರಕ್ಷಣೆಗಾಗಿ, ಕಾಂಗ್ರೆಸ್-ಬಿಜೆಪಿಗಳ ದೊಂಬರಾಟ ವಿರೋಧಿಸಿ ದುಡಿವ ವರ್ಗದ ರಾಜಕೀಯ ಆಂದೋಲನವನ್ನು ಸಿಪಿಐ(ಎಂ) ಘೋಷಿಸಿದೆ.

ಜಿ.ಎನ್.ನಾಗರಾಜ್

ಕರ್ನಾಟಕ ಸರ್ಕಾರ ಕಾವೇರಿ ನೀರಿನ ವಿವಾದವನ್ನು ಹಾಗೂ ನಾಗಪ್ಪ ಅಪಹರಣದ ಪ್ರಕರಣವನ್ನು ಸರಿಯಾಗಿ ನಿರ್ವಹಿಸದೇ ಹಾಗೂ ನಿಬಾಯಿಸದೆ ಇದ್ದುದರಿಂದ ನಾಲ್ಕಾರು ತಿಂಗಳ ಕಾಲ ಸರ್ಕಾರ ಪೂರ್ತಿ ಇವೆರೆಡೇ ಸಮಸ್ಯೆಗಳು ರಾಜ್ಯದ ಸಮಸ್ಯೆಗಳಂತೆ ಬಿಂಬಿತವಾಗಿದೆ. ದೈನಂದಿನ ಆಡಳಿತ ಸ್ಥಗಿತಗೊಂಡಿದೆ. ಮತ್ತು ಜನ ಸಾಮಾನ್ಯರು ಎದುರಿಸುತ್ತಿರುವ ಅಗಾಧ ಸಮಸ್ಯೆಗಳನ್ನು ಇಂದು ಕೇಳುವವರೇ ದಿಕ್ಕಿಲ್ಲವಾಗಿದೆ. ಹೀಗಾಗಿ ಜನಸಾಮಾನ್ಯರ ಈ ಸಮಸ್ಯೆಗಳು ಉಲ್ಬಣಗೊಂಡಿವೆ. ಅವುಗಳಲ್ಲಿ ಇತ್ತೀಚಿನ ಎರಡು ದಶಕಗಳಲ್ಲಿ ಎದುರಿಸಿದ ವ್ಯಾಪಕ ಬರಗಾಲದಿಂದಾಗಿ ಕರ್ನಾಟಕದ ಜನತೆ, ಕೂಲಿಕಾರರು, ರೈತರು, ಇನ್ನಿತರ ಅಸಂಘಟಿತ ಕಾರ್ಮಿಕರು, ಕಾರ್ಖಾನೆಗಳು, ಕೃಷಿ ಆಧಾರಿತ ಕಾರ್ಖಾನೆಗಳು ತತ್ತರಿಸುವಂತಾಗಿದೆ. ಇದಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ವ್ಯಾಪಕವಾಗಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದರ ಕಡೆಗೆ ಸರ್ಕಾರದ ಗಮನ ಸೊನ್ನೆಯಾಗಿದೆ. ಈ ಕಾಮಗಾರಿಗೆ ನೀಡಿದ ಸ್ವಲ್ಪ ಹಣ ಮತ್ತು ಆಹಾರ ಧಾನ್ಯಗಳೂ ಕೂಡ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಗುತ್ತಿಗೆದಾರರ ಹಾಗೂ ಸ್ಥಳೀಯ ರಾಜಕಾರಣಿಗಳ ತುತ್ತಾಗಿವೆ.

ತಾವು ಬೆಳೆದ ಬೆಳೆಗಳ ಬೆಲೆ ಕುಸಿತದಿಂದ ರೇಷ್ಮೆ, ಅಡಿಕೆ, ಕಾಫಿ ಮೊದಲಾದ ಕೃಷಿಕರು ನಷ್ಟಕ್ಕೆ ಒಳಗಾಗಿದ್ದಾರೆ. ಬರಗಾಲದಿಂದಾಗಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದೆ. ಹೀಗೆ ಗ್ರಾಮೀಣ ಜನರು ಸಂಕಷ್ಟಕ್ಕೆ ಸಿಲುಕಿರುವಾಗಲೇ ಪಟ್ಟಣ ಹಾಗೂ ನಗರಗಳಲ್ಲಿ ವಿದೇಶಿ ವಸ್ತುಗಳ ಆಮದುಗಳಿಂದಾಗಿ ಹಲವಾರು ಕೈಗಾರಿಕೆಗಳು ತತ್ತರಿಸುತ್ತಿವೆ. ಕಾರ್ಮಿಕರನ್ನು ಕೆಲಸದಿಂದ





ತೆಗೆದುಹಾಕುವುದು, ಕೈಗಾರಿಕೆಗಳನ್ನು ಇಡಿಯಾಗಿ ಮುಚ್ಚುವುದು ಇಂದು ದಿನನಿತ್ಯದ ಸುದ್ದಿಯಾಗಿದೆ. ಹತ್ತಾರು ಸಹಸ್ರ ಕಾರ್ಮಿಕರು ಕೆಲಸ ಕಳೆದುಕೊಳ್ಳಬೇಕಾಗಿದೆ. ಮಧ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಪ್ರಮುಖ ಕೈಗಾರಿಕೆಗಳೆಲ್ಲಾ ಮುಚ್ಚಿಕೊಂಡು ಕೈಗಾರಿಕಾ ಮರುಭೂಮಿಯಂತಾಗಿದೆ. ಇಂತಹ ಸಮಸ್ಯೆಗಳಿಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಯಾವುದೇ ಸರಿಪಡಿಸುವ ಪ್ರಕ್ರಿಯೆಯೂ ಇಲ್ಲವಾಗಿದೆ.

ಹೀಗೆ ಜನರ ಸಮಸ್ಯೆಗಳನ್ನು ಕಡೆಗಣ್ಣಿನಿಂದಲೂ ಸರ್ಕಾರ ನೋಡುತ್ತಿಲ್ಲ ಎನ್ನುವಾಗಲೇ ಜನರ ಗಮನವನ್ನು ಕಾವೇರಿ ವಿವಾದ ಮತ್ತು ನಾಗಪ್ಪನವರ ಅಪಹರಣದ ಕಡೆಗೆ ಸೆಳೆದು ಅದರ ಮರೆಯಲ್ಲಿ ಜಾಗತೀಕರಣ ಖಾಸಗೀಕರಣ ನೀತಿಯನ್ನು ಅತೀ ರಭಸದಿಂದ ಜಾರಿಗೆ ತರಲು ಕರ್ನಾಟಕ ತೀವ್ರ ಯತ್ನಗಳನ್ನು ನಡೆಸಿದೆ. ವಿದ್ಯುತ್ ಖಾಸಗೀಕರಣ ಕರ್ನಾಟಕ ಸರ್ಕಾರದ ಆರ್ಥಿಕ ನೀತಿಗಳ ಕೇಂದ್ರ ಸ್ಥಾನವನ್ನು ಆಕ್ರಮಿಸಿದೆ. ಈಗಾಗಲೇ ವಿದ್ಯುತ್ ಪ್ರಸರಣ ನಿಗಮವನ್ನು ಒಡೆದು ನಾಲ್ಕು ಕಂಪನಿಗಳಾಗಿ ಸೃಷ್ಟಿಸಿದ ಕರ್ನಾಟಕ ಸರ್ಕಾರ ಈ ಕಂಪನಿಗಳ ಅಪಾರ ಸಂಪತ್ತನ್ನು ಖಾಸಗಿಯವರಿಗೆ ವಹಿಸಿಕೊಡುವ ಹುನ್ನಾರ ನಡೆಸಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನದ ಕಾಲದಲ್ಲಿಯೇ ಆರಂಭವಾಗಿ ಸುಮಾರು ಒಂದು ಶತಮಾನದಲ್ಲಿ ಕರ್ನಾಟಕದ ಜನತೆಯ ಹಣದಿಂದ ನಿರ್ಮಿಸಿದ ಅಪಾರ ಸಂಪತ್ತನ್ನು ಇಂದು ಖಾಸಗೀಯವರ ಲೂಟಿಗೆ ಬಿಡಲಾಗುತ್ತಿದೆ. ವಿದ್ಯುತ್ ಖಾಸಗೀಕರಣದ ಜೊತೆಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣ, ಕೃಷ್ಣರಾಜೇಂದ್ರ ಒಡೆಯರ್ ಹಾಗೂ ವಿಶ್ವೇಶ್ವರಯ್ಯನವರು ನಿರ್ಮಿಸಿದ- ನಮ್ಮ ಮೈಸೂರು ರಾಜ್ಯಕ್ಕೆ ಹೆಸರನ್ನು ಗಳಿಸಿಕೊಟ್ಟ ಸರ್ಕಾರಿ ಸ್ವಾಮ್ಯದ ಅತ್ಯುತ್ತಮ ಕೈಗಾರಿಕೆಗಳನ್ನು ಖಾಸಗೀಕರಿಸುವ ಸನ್ನಾಹದಲ್ಲಿ ಬಿ.ಜೆ.ಪಿ ಕೂಟದ ಕೇಂದ್ರ ಸರ್ಕಾರದ ಮಾದರಿಯಲ್ಲಿಯೇ ಖಾಸಗೀಕರಣ ಮಂತ್ರಿ ಖಾತೆಯೊಂದನ್ನು ಸೃಷ್ಟಿಸಿದೆ. ವಿದ್ಯುತ್ ಹಾಗೂ ನೀರಿನ ದರಗಳನ್ನು, ಶಿಕ್ಷಣ ಶುಲ್ಕ ಮತ್ತು ಆಸ್ಪತ್ರೆ ಶುಲ್ಕಗಳನ್ನು ಗಣನೀಯವಾಗಿ ಏರಿಸಿದೆ.

ವಿಫಲವಾದ ವಿರೋಧ ಪಕ್ಷಗಳು

ಕರ್ನಾಟಕದ ಜನತೆಯ ಸಂಕಷ್ಟಗಳು ವಿಷಮಗೊಳ್ಳುತ್ತಿರುವ ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷಗಳೂ ಕೂಡ ಜನ ಸಾಮಾನ್ಯರ ಈ ಸಮಸ್ಯೆಗಳಿಗೆ ಸ್ಪಂದಿಸದೇ ಕೇವಲ ಕಾವೇರಿ ವಿವಾದ ಮತ್ತು ನಾಗಪ್ಪ ಅಪಹರಣವೇ ರಾಜ್ಯದ ಸಮಸ್ಯೆಗಳೆಂಬಂತೆ ವರ್ತಿಸುತ್ತಿವೆ. ಹೀಗಾಗಿ ಆಳುತ್ತಿರುವ ಬಂಡವಾಳಶಾಹಿ ಭೂಮಾಲೀಕ ಪಕ್ಷಗಳೂ ಕೂಡ ಪರಸ್ಪರ ದೋಷಾರೋಪಣೆ ಮಾಡುತ್ತಾ ಜನತೆಯ ಕಣ್ಣಿಗೆ ಮಣ್ಣೆರಚುವ ಆಟದಲ್ಲಿ ಮಗ್ನರಾಗಿದ್ದಾರೆ.

ಬಿಜೆಪಿ ವಂಚಕ ತಂತ್ರ

ನಮ್ಮ ರಾಜ್ಯದ ಪ್ರಥಮ ವಿರೋಧ ಪಕ್ಷವಾದ ಬಿ.ಜೆ.ಪಿ ಸದನದಲ್ಲಿಯೂ ಸದನದ ಹೊರಗಡೆಯೂ ಅಬ್ಬರದ ಮಾತುಗಳನ್ನು


ಪುಟ 5 ಕ್ಕೆ

ಮಾಲೀಕ ವರ್ಗದ ದಮನ ನೀತಿ : ಸರ್ಕಾರದ ಮಧ್ಯ ಪ್ರವೇಶಕ್ಕೆ ಆಗ್ರಹ

ಮೈಕೋ ಕಾರ್ಮಿಕರ ಪ್ರತಿಭಟನಾ ರ್‍ಯಾಲಿ

ರಾಜ್ಯದ ಪ್ರತಿಷ್ಠಿತ ಮೈಕೊ ಕಾರ್ಮಿಕರು, ಆಡಳಿತ ಮಂಡಳಿಯ ಕಾರ್ಮಿಕ ಧಮನ ನೀತಿಗಳ ವಿರುದ್ಧ ಮೈಕೋ ಎಂಪ್ಲಾಯಿಸ್ ಅಸೋಸಿಯೇಶನ್ ನೇತೃತ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಡಿಸೆಂಬರ್ 20 ರಂದು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕಾರ್ಮಿಕರು ಮತ್ತು ಆಡಳಿತ ಮಂಡಳಿ ನಡುವಿನ ಸೇವಾ ವ್ಯವಸ್ಥೆ ಕುರಿತಾದ 1997 ರಿಂದ ಆಗಸ್ಟ್ 19,1998ರ ಮೊದಲಾದ ಒಪ್ಪಂದದ ಅವಧಿಯು ಡಿಸೆಂಬರ್ 31.2000ಕ್ಕೆ ಕಾನೂನು ರೀತಿ ಕೊನೆಗೊಂಡಿದೆ. ಆದರೆ ಹೊಸ ಒಪ್ಪಂದ ಆಗುವವರೆಗೆ ಈಗಿರುವ ಸೇವಾ ವ್ಯವಸ್ಥೆ ಮುಂದುವರಿಸುವ ಬದಲು, ಕಾರ್ಮಿಕರ ಹಳೆಯ ಸವಲತ್ತುಗಳನ್ನು ಕಡಿತಗೊಳಿಸಲು ಆಡಳಿತ ಮಂಡಳಿ ಮುಂದಾಗಿರುವುದನ್ನು ಕಾರ್ಮಿಕರು ತೀವ್ರವಾಗಿ ಪ್ರತಿಭಟಿಸಿದರು.



ಚಾಲ್ತಿಯಲ್ಲಿರುವ ಸೇವಾ ವ್ಯವಸ್ಥೆ ಬದಲಾಗಬೇಕಾದರೆ ಆಡಳಿತ ಮಂಡಳಿ ಕೈಗಾರಿಕಾ ವಿವಾದ ಕಾಯಿದೆ ಕಲಂ 9(ಎ) ಪ್ರಕಾರ 21 ದಿನಗಳ ಮುಂಚಿ ಕಾರ್ಮಿಕರಿಗೆ ನೋಟೀಸ್ ಜಾರಿ ಮಾಡಬೇಕಾಗಿತ್ತು. ಆದರೆ, ಏಕಾಏಕಿ ಸೇವಾ ವ್ಯವಸ್ಥೆಯನ್ನು ಬದಲಾಯಿಸ ಹೊರಟಿದೆ. ಇದರಿಂದ ಕಾರ್ಮಿಕರು 1998ರ ಒಪ್ಪಂದದ ಪ್ರಕಾರ ಪಡೆದಿದ್ದ ಹಲವು ಸವಲತ್ತುಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಕಾರ್ಮಿಕ ಮುಖಂಡರು ಆತಂಕ ವ್ಯಕ್ತಪಡಿಸಿದ್ದಾರೆ.

19.8.1998 ರ ಒಪ್ಪಂದದ ಪ್ರಕಾರ ಸೇವಾ ವ್ಯವಸ್ಥೆ ಮುಖ್ಯವಾಗಿ ಉತ್ಪಾದನೆ, ಉತ್ಪಾದಕತೆ ಹಾಗೂ ಸಂಬಂಧಿಸಿದ ಇನ್‌ಸೆಂಟೀವ್ ವ್ಯವಸ್ಥೆಯನ್ನು ಮುಂದುವರಿಸಬೇಕು ಎಂದು ಪ್ರತಿಭಟನಾ ರ್‍ಯಾಲಿಯಲ್ಲಿ ಒತ್ತಾಯಿಸಲಾಯ್ತು.

ಹಳೆಯ ಒಪ್ಪಂದ ಮುಗಿದು ಹೊಸ ಒಪ್ಪಂದ ಜಾರಿಯಾಗಬೇಕಾದ 2002 ರ ಜನವರಿ 1 ರಿಂದ ಪ್ರತಿ ಕಾರ್ಮಿಕರು ಸಲ್ಲಿಸಿದ ಸೇವೆಯ ಅನುಸಾರ



ಪೂರ್ವಾನ್ವಯವಾಗಿ ತಿಂಗಳಿಗೆ ರೂ1500 ರ ಪ್ರಮಾಣದಲ್ಲಿ ಸವಲತ್ತಾಗಿ ನೀಡಬೇಕು. ಈ ಬಾಕಿಯನ್ನು ಕೂಡಲೇ ಪಾವತಿಸಬೇಕು. ಬಾಕಿ ಮೊಬಲಗು ಪ್ರತಿ ತಿಂಗಳಿಗೆ ರೂ.125 ಉತ್ಪಾದಕತೆಯ ಸವಲತ್ತಾಗಿ ನೀಡಬೇಕು. ಉತ್ಪಾಕತೆ ಕುರಿತು ಹೊಸ ಒಪ್ಪಂದದವರೆಗೆ ಹಳೆಯ ಇನ್ಸೆಂಟೀವ್ ಪದ್ಧತಿ ಮುಂದುವರಿಸಬೇಕು ಎಂಬ ಹಲವಾರು ಬೇಡಿಕೆಗಳನ್ನು ಕಾರ್ಮಿಕ ಸಂಘವು ಆಡಳಿತ ಮಂಡಳಿ ಮುಂದಿಟ್ಟಿದೆ.

ಹೊಸ ಒಪ್ಪಂದಕ್ಕೆ ಬರಬೇಕಾದ ಆಡಳಿತ ಮಂಡಳಿ ಹಿಂದೆ ಇದ್ದ ಕಾರ್ಮಿಕರ ಹಲವಾರು ಸವಲತ್ತುಗಳನ್ನು ಮೊಟಕುಗೊಳಿಸುವ ಪ್ರತಿ ಬೇಡಿಕೆಯನ್ನು ಕಾರ್ಮಿಕರ ಮುಂದಿಟ್ಟು 'ಕಾರ್ಮಿಕ ಧಮನ'ನೀತಿ ಅನುಸರಿಸುತ್ತಿದೆ. ಕೂಡಲೇ ರಾಜ್ಯ ಸರ್ಕಾರ ಕಾರ್ಮಿಕರು ಮತ್ತು ಅವರ ಅವಲಂಬಿತರ ನೆರವಿಗಾಗಿ ಮಧ್ಯೆ ಪ್ರವೇಶಿಸಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವಂತೆ ಒತ್ತಾಯಿಸಿದರು.


'ಶ್ರಮಿಕ ಭವನದಿಂದ ಹೊರಟ ಕಾರ್ಮಿಕರ ರ್‍ಯಾಲಿ ಬನಪ್ಪ ಪಾರ್ಕಿನಲ್ಲಿ ಸಮಾವೇಶಗೊಂಡಿತು. ಕಾರ್ಮಿಕ ಸಚಿವರಿಗೆ ಮನವಿ ಪತ್ರ ಸಲ್ಲಿಸಿ, ತಮ್ಮ ಮೇಲಿನ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಸಭೆಯಲ್ಲಿ ಸಂಘದ ಅಧ್ಯಕ್ಷರಾದ ವಿಜೆಕೆ ನಾಯರ್, ಟಿ.ಶಿವಶಂಕರ್, ಹನುಮಂತರಾಯಪ್ಪ, ಪಾಪಣ್ಣ, ಸತ್ಯಮೂರ್ತಿ, ಎಸ್.ಟಿ.ಅರಸು, ರಾಮಚಂದ್ರಯ್ಯ, ವಿಜಯ ಭಾಸ್ಕರ್ ಮೊದಲಾದವರು ಭಾಗವಹಿಸಿದ್ದರು.

ವರದಿ : ಜಯರಾಂ

ಬಾಬಾಬುಡನ್ ಗಿರಿ : ಹುರುಳಿಲ್ಲದ ವಿವಾದಗಳು

ಕೋಮುಸೌಹಾರ್ದತೆಯ ವಿಶಿಷ್ಟ ಆಚರಣೆಯುಳ್ಳ ಬಾಬಾ ಬುಡನ್‌ಗಿರಿ ದತ್ತ ಸ್ವಾಮಿ ಗಿರಿ ಪ್ರದೇಶದಲ್ಲಿ ಇಲ್ಲದ ವಿವಾದಗಳನ್ನು ಹುಟ್ಟುಹಾಕುತ್ತಿದೆ ಸಂಘ ಪರಿವಾರ. ಅವರು ಇದನ್ನೊಂದು ಅಯೋಧ್ಯೆಯನ್ನಾಗಿಸುವುದಾಗಿ ಬೆದರಿಕೆ ಒಡ್ಡಿದ್ದಾರೆ. ಮಾತ್ರವಲ್ಲ, ಆ ದಿಕ್ಕಿನಲ್ಲಿ ಖಾವಿ ಪಡೆ ತೀವ್ರ ಕಾರ್ಯಾಚರಣೆಗೂ ಇಳಿದಿದೆ. ಇದನ್ನು ಸಮರ್ಥಿಸುವ ಫ್ಯಾಸಿಸ್ಟ್ ಮಾದರಿಯ ಗೋಬೆಲ್ಸ್ ಸುಳ್ಳು ಪ್ರಚಾರಕ್ಕೂ ಇಳಿದಿದೆ. ಇದಕ್ಕಾಗಿ ಮುಂದಿನ ವರುಷ ಮಹಾರಾಷ್ಟ್ರದಿಂದ ಜಾಥಾ ಆರಂಭಿಸಿ ರಾಷ್ಟ್ರಮಟ್ಟದ ವಿವಾದವನ್ನಾಗಿ ಬಿಂಬಿಸಲು ನಿರ್ಧರಿಸಿದೆ. ಪೂಜೆಗಾಗಿ ಪೂಜಾರಿ ನೇಮಕ ತಕ್ಷಣ ಮಾಡಬೇಕೆಂತಲೂ, ಗುಹೆಯಲ್ಲಿ 'ದತ್ತಾತ್ರೇಯ'ನ ವಿಗ್ರಹ ಸ್ಥಾಪಿಸಬೇಕೆಂತಲೂ, ಇಲ್ಲವಾದಲ್ಲಿ ತಾವೇ ಅದನ್ನು 'ವಿಮೋಚನೆ'ಗೊಳಿಸುವುದಾಗಿ ಖಾವೀ ಪಡೆ ಬೆದರಿಸತೊಡಗಿದೆ. ಅದಕ್ಕಾಗಿ ಎಂದೂ ಪರಂಪರೆಯ ಭಾಗವಾಗಿರದಿದ್ದ, ದತ್ತ ಜಯಂತಿ ದತ್ತ ಮಾಲೆ ಅಭಿಯಾನ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಬಜರಂಗದಳ ಯೋಜಿಸಿದೆ. ಈ ಪುಂಡಾಟಿಕೆಗಳಿಗೆ ರಾಜ್ಯ ಸರ್ಕಾರ - ಆಡಳಿತ ಹಂತಹಂತವಾಗಿ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದೆ.

ಈ ವಿವಾದ ಮತ್ತು ವಿದ್ಯಮಾನಗಳನ್ನು ಬಹಳ ಸೂಕ್ಷ್ಮವಾಗಿ, ಆಳವಾಗಿ ಪರಿಶೀಲಿಸುತ್ತಾ ಸಂಘ ಪರಿವಾರದ ದುಷ್ಟ ಅಜೆಂಡಾಗಲನ್ನು ಬಯಲಿಗೆಳೆಯುತ್ತಾ ಬಂದಿರುವ ನಾಡಿನ ಖ್ಯಾತ ನ್ಯಾಯವಾದಿ, ರಾಜಕಾರಣಿ ಎ.ಕೆ.ಸುಬ್ಬಯ್ಯನವರು, ತಮ್ಮ ಬಿಚ್ಚುನುಡಿಗಳನ್ನು ಇಲ್ಲಿ ದಾಖಲಿಸಿದ್ದಾರೆ. ಬಾಬಾ ಬುಡನ್‌ಗಿರಿಯ ವಿವಾದದಲ್ಲಿ ಮೊಕದ್ದಮೆಯನ್ನು ಸ್ವಯಂ ಮುತುವರ್ಜಿಯಿಂದ ಕೈಗೆತ್ತಿಕೊಂಡು ನ್ಯಾಯಾಲಯದ ಕಟ್ಟೆ ಹತ್ತಿ ಪ್ರಬಲವಾಗಿ ವಾದಿಸುತ್ತಿರುವವರು 'ಎ.ಕೆ.ಎಸ್.' ಎಂಬುದು ಇನ್ನೊಂದು ವಿಶೇಷ. ಅಲ್ಲಿನ ವಾಸ್ತವಿಕ ಸ್ಥಿತಿಯನ್ನು ಮತ್ತು ಕಾನೂನಾತ್ಮಕವಾದ ವಿಶಿಷ್ಟ ಸಂಗತಿಗಳನ್ನು ಐಕ್ಯರಂಗಕ್ಕಾಗಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಓದಿ...



ಎ.ಕೆ.ಸುಬ್ಬಯ್ಯನವರ ಒಂದು ವಿಶ್ಲೇಷಣೆ

ಬಾಬಬುಡನ್‌ಗಿರಿ ಸೂಫಿ ಸಂತರ ದರ್ಗಾ. ಇದು ಭಾರತದ ಸೂಫಿ ಪರಂಪರೆಗೆ ಸೇರಿದ ಮುಸ್ಲಿಂರು ಬಾಬಬುಡನ್ ಗಿರಿಯಿಂದ ಸ್ಫೂರ್ತಿ ಪಡೆದಿರುತ್ತಾರೆ. ಬಾಬಾಬುಡನ್‌ಗಿರಿ ಗುಹೆಯೊಳಗೆ ಒಂದು ಪಾದುಕೆ ಇದೆ. ಪಕ್ಕದಲ್ಲಿ ಒಂದು ಮಸೀದಿ(ದರ್ಗಾ) ಇದೆ. ಮುಸಲ್ಮಾನರ ಖಬರಸ್ಥಾನ ಕೂಡ ಇದೆ. ಮತ್ತು ಫಕೀರ್‌ಖಾನ್ ಎಂದು ಹೇಳುವ ಫಕೀರರಿಗೆ ಆಶ್ರಯ ನೀಡುವ ಒಂದು ಅನಾಥ ಆಶ್ರಮ ಕೂಡ ಅಲ್ಲಿ ಇದೆ.

ಈ ಒಂದು ಸಂಸ್ಥೆಯ ಯಜಮಾನಿಕೆ ಮುಸಲ್ಮಾನರದ್ದು. ಅದರ ಮುಖ್ಯಸ್ಥನ ಹೆಸರು



ಸಜ್ಜದ್ ಎಂದಾಗಿದೆ. ಈ ಸಜ್ಜದ್ ಸ್ಥಾನ ವಂಶ ಪಾರಂಪರ್ಯವಾಗಿ ಮುಂದುವರೆದುಕೊಂಡು ಬಂದಿದೆ. ಮೊದಲನೇ ಸಜ್ಜದ್ ಸತ್ತ ನಂತರ ವಂಶಪಾರಂಪರ್ಯವಾಗಿ ಈ ಸಜ್ಜದ್ ಸ್ಥಾನ ಹಸ್ತಾಂತರಗೊಂಡು ಬಂದಿದೆ. ಅಲ್ಲಿ ಗುಹೆಯೊಳಗೆ ಪೂಜೆ ಮಾಡುವ ಪೂಜಾರಿಯ ಹೆಸರು ಮುಜಾವರ್ ಎಂದಾಗಿದೆ. ಮುಜಾವರ್‌ನನ್ನು ಸಜ್ಜದ್ ನೇಮಕ ಮಾಡುತ್ತಾರೆ. ಗುಹೆಯೊಳಗೆ ಮುಜಾವರ್ ಮಾತ್ರ ಪೂಜೆ ಮಾಡುವ ಹಕ್ಕು ಉಳ್ಳವನಾಗುತ್ತಾನೆ. ಅಲ್ಲಿನ ಪೂಜಾ ವಿಧಾನ ಹಿಂದು ಪದ್ಧತಿಯೂ ಅಲ್ಲ. ಮುಸ್ಲಿಂ ಪದ್ಧತಿಯೂ ಅಲ್ಲ. ದೇವಸ್ಥಾನದ ಪೂಜಾ ವಿಧಾನಗಳಿಗೆ ಸ್ವಲ್ಪಮಟ್ಟಿಗೆ ಹೋಲಿಕೆ ಇದೆ. ಅಲ್ಲಿ ಊದುಬತ್ತಿ ಹಚ್ಚುತ್ತಾರೆ. ಹೂಗಳು ಇಡುತ್ತಾರೆ. ತೀರ್ಥಕೊಡುತ್ತಾರೆ. ಹೂವುಗಳನ್ನು ಪಾದುಕೆಗೆ ಹಾಕುತ್ತಾರೆ. ಈ ಪೂಜೆಯನ್ನು ನೆರವೇರಿಸುವನು ಹಿಂದೂ ಪೂಜಾರಿಯಲ್ಲ; ಅವನು ಮುಸ್ಲಿಂ ಮುಜಾವರ್. (ಈ ಸಜ್ಜದ್ ಹಸಿರು, ಖಾವೀ ಬಣ್ಣದ ಧಿರಿಸು ಧರಿಸುತ್ತಾನೆ)

ಮಠಗಳನಿಗೆ ಸಂಬಂಧಿಸುವ ಕಾನೂನು

ಈ ಪೂಜಾ ವಿಧಾನಗಳಲ್ಲಿ ಹಿಂದೂಗಳು ಪಾಲ್ಗೊಂಡು ಭಕ್ತಿ ಅರ್ಪಿಸಿ ಬರುತ್ತಿರುವುದು ಆದಿಯಿಂದಲೂ ನಡೆದುಕೊಂಡು ಬಂದಿದೆ. ಈ ಸಂಸ್ಥೆ ಮುಜಾರಾಯಿ ಇಲಾಖೆಗೆ ಒಳಪಟ್ಟಿದೆ. ಮುಸ್ಲಿಂರ ಆಡಳಿತದಲ್ಲಿ ಇದ್ದರೂ ಅದು ವಕ್ಫ್ ಬೋರ್ಡ್ ಆಧೀನದಲ್ಲಿ ಇರಲಿಲ್ಲ. ಇದಕ್ಕೆ ಹಿಂದೂ ಮಠಗಳಿಗೆ ಅದರಲ್ಲೂ ಲಿಂಗಾಯಿತ ಮಠಗಳಿಗೆ ಸಂಬಂಧಪಡುವ ಕಾನೂನು ಅನ್ವಯವಾಗುತ್ತದೆ. ಮಠಾಧಿಪತಿಯ ಸ್ಥಾನದಲ್ಲಿ ಇಲ್ಲಿ ಸಜ್ಜದ್ ಇರುತ್ತಾರೆ.

ಉರೂಸ್ - ಜಯಂತಿ ಒಂದೇ

ಬಾಬಾಬುಡನ್‌ಗಿರಿಯಲ್ಲಿ ವರ್ಷಕ್ಕೊಮ್ಮೆ ಊರೂಸ್ ಹಬ್ಬ ಮಾರ್ಚ್ ತಿಂಗಳಲ್ಲಿ ನಡೆಯುತ್ತದೆ. ಈ ಹಬ್ಬದಲ್ಲಿ ಮುಸ್ಲಿಂ ಭಕ್ತರಲ್ಲದೆ ಹಿಂದೂಗಳು ಅಂದರೆ ಲಿಂಗಾಯಿತರು, ಒಕ್ಕಲಿಗರು ಕುರುಬರು, ಬಹುಸಂಖ್ಯೆಯಲ್ಲಿ ಭಾಗವಹಿಸಿ ಭಕ್ತಿ ಸಲ್ಲಿಸುತ್ತಾ ಬಂದದ್ದು ಅನಾದಿ ಕಾಲದಿದಿಂದ ನಡೆದುಕೊಂಡು ಬಂದ ಒಂದು ಪರಂಪರೆ.

ಇಲ್ಲಿ ದತ್ತ ಜಯಂತಿ ಎನ್ನುವ ಉತ್ಸವ ಆಚರಣೆ ಇರಲೇ ಇಲ್ಲ. (ಹಿಂದೂಗಳಿಗೆ ಪ್ರತ್ಯೇಕವಾಗಿ ದತ್ತ ಜಯಂತಿ ಎಂಬ ಉತ್ಸವ ಬಾಬಾಬುಡನ್‌ಗಿರಿಯಲ್ಲಿ ಆಚರಿಸುವ ಅಧಿಕಾರವೇ ಇಲ್ಲ.) ಊರೂಸ್ ಹಬ್ಬವನ್ನೇ ಹಿಂದೂಗಳು ದತ್ತ ಜಯಂತಿ ಎಂದು ತಿಳಿದುಕೊಳ್ಳುತ್ತಾರೆ.

ಬಾಬಾಬುಡನ್‌ಗಿರಿಗೆ ಭವ್ಯವಾದ ಇತಿಹಾಸವಿದೆ. ಇದು ಹಿಂದೂ ಮುಸ್ಲಿಂರ ಒಂದು ಅಪೂರ್ವ ಸಂಗಮ ಸ್ಥಾನ. ಈ ಎರಡೂ ಧರ್ಮಗಳ ಸಹೋದರತೆಯನ್ನು ಬಿಂಬಿಸುವ ಸ್ಥಳ ಇದಾಗಿದೆ. ಇದನ್ನು ಸಂಸ್ಥಾಪಿಸಿದವರು ಒಬ್ಬರು ಸೂಫಿ ಸಂತರು. ದಾದಾಹಯಾತ್ ಮೀರ್‌ಖಲಂದರ್ ಎಂಬ ಹೆಸರಿನವರು ಇವರು. ಪ್ರವಾದಿ ಪೈಗಂಬರರ ಪ್ರಮುಖ ಶಿಷ್ಯರಲ್ಲೊಬ್ಬರಾಗಿದ್ದರು ಎಂಬ ನಂಬಿಕೆ ಇದೆ.

ಹಲವು ನಂಬಿಕೆಗಳು

ಪ್ರವಾದಿ ಪೈಗಂಬರರ ಆಜ್ಞೆಯಂತೆ ಈತ ಮಂಗಳೂರು ಮಾರ್ಗವಾಗಿ ಲೋಕಶಾಂತಿ ಅರಸುತ್ತಾ ಬಾಬಾಬುಡನ್‌ಗಿರಿಯಲ್ಲಿ ಬಂದು ಆಸುಪಾಸಿನ ಸ್ಥಳಗಳಲ್ಲಿ ಧ್ಯಾನಸಕ್ತನಾಗಿ ಭಕ್ತರನ್ನು ಆಕರ್ಷಿಸಿದ ಎಂಬ ಪ್ರತೀತಿ ಇದೆ. ಈತ ತನ್ನ ಶಿಷ್ಯರೊಂದಿಗೆ ಬಾಬಾಬುಡನ್‌ಗಿರಿಗೆ ಬಂದಾಗ ಸ್ಥಳೀಯರು ಇವರಿಗೆ ಪ್ರತಿರೋಧ ಒಡ್ಡಿದರು, ಘರ್ಷಣೆಗಳು ಉಂಟಾದವು. ಇದರ ಪರಿಣಾಮ ಇವರ ಶಿಷ್ಯರಲ್ಲಿ ಕೆಲವರು ಕೊಲ್ಲಲ್ಪಟ್ಟರು. ಅದಾದ ನಂತರ ಬಾಬಾಬುಡನ್‌ಗಿರಿಯಲ್ಲಿ ಗುಹೆಯೊಳಗೆ ಧ್ಯಾನಾಸಕ್ತನಾಗಿ ಈ ಸಂತ ಇದ್ದಾಗ ಸುತ್ತಮುತ್ತಲು ಪ್ರದೇಶದಲ್ಲಿ ಕೆಲವು ಚಮತ್ಕಾರಗಳು ಆದುವು ಎಂದು ಅವರಿಗೆ ಪ್ರತಿರೋಧ ಒಡ್ಡಿ ಘರ್ಷಣೆ ಮಾಡಿದ ಸ್ಥಳೀಯರಿಗೆ ಜ್ಞಾನೋದಯವಾಯಿತೆಂದೂ, ನಂತರ ಅವರು ಬಾಬಾಬುಡನ್ ಗಿರಿಗೆ ತೆರಳಿ ದಾದಾಹಯಾತ್ ಮೀರ್ ಖಲಂದರ್‌ರವರ ಶಿಷ್ಯತ್ವವನ್ನು ಸ್ವೀಕರಿಸಿದರೆಂಬ ಪ್ರತೀತಿ ಇದೆ.

ಹೀಗೆ ಹಿಂದೂ ಮುಸ್ಲಿಂ ಧರ್ಮಗಳಿಗೆ ಸೇರಿದ ಅಪಾರ ಶಿಷ್ಯರನ್ನು ಈ ಸೂಫಿ ಸಂತ ಆಕರ್ಷಿಸಿ ಅವರೆಲ್ಲರಿಗೆ ಭಕ್ತಿ ಪ್ರದಾನ ಮಾಡಿರುವಂತೆ ಕಂಡುಬರುತ್ತದೆ.

ಬಾಬಾಬುಡನ್‌ಗಿರಿಯಲ್ಲಿ ಒಂದು ಗುಹೆ ಇರುವುದಲ್ಲದೆ ಅಲ್ಲಿಗೆ ಹುಲಿಯೊಂದು ವರ್ಷಕ್ಕೊಮ್ಮೆಯಾದರೂ ದರ್ಶನ ನೀಡುತ್ತದೆ ಎಂಬ ಪ್ರತೀತಿ ಇದೆ. ಗುರು ದತ್ತಾತ್ರೇಯನ ಹೆಸರು ಬಾಬಾಬುಡನ್‌ಗಿರಿಯಲ್ಲಿ ಜೋಡಣೆಯಾಗಿದೆ. ಬಾಬಾಬುಡನ್‌ಗಿರಿಗೆ ಹೋಲುವಂತಹ ಇನ್ನೆರಡು ಕ್ಷೇತ್ರಗಳು ಇಲ್ಲಿಗೆ ಆಸುಪಾಸಿನಲ್ಲಿ ಅಂದರೆ ಐದು ಹಾಗೂ ಹನ್ನೆರಡು ಕಿಲೋಮೀಟರ್ ಅಂತರದಲ್ಲಿ ಇದೆ. ಆ ಎರಡೂ ಕ್ಷೇತ್ರಗಳು ಲಿಂಗಾಯಿತರ ಮಠಗಳು ಆಗಿದ್ದು ಬಾಳೆಹೊನ್ನೂರು ಮಠದ ಅಧೀನದಲ್ಲಿ ಇದೆ. ಅದರ ಹೆಸರು ಫಲಹಾರ ಮಠ ಹಾಗೂ ಭಿಸಗ್ನಿ ಮಠ ಎಂದಾಗಿದೆ.

ಲಿಂಗಾಯತ ಮಠಗಳಲ್ಲೂ

ಲಿಂಗಾಯಿತ ಮಠಗಳಾಗಿರುವ ಈ ಎರಡೂ ಕ್ಷೇತ್ರಗಳಿಗೂ ದತ್ತಾತ್ರೇಯನ ಹೆಸರು ಜೋಡಿಸಲ್ಪಟ್ಟಿದೆ. ಅಲ್ಲಿಯೂ ಗುಹೆ ಇದೆ. ಹುಲಿ ದರ್ಶನ ಕೊಡುತ್ತದೆ ಎಂಬ ಪ್ರತೀತಿಯೂ ಇದೆ. ಈ ಮೂರು ಸ್ಥಳಗಳಲ್ಲಿ ಧ್ಯಾನ ತಪಸ್ಸುಗಳನ್ನು ಮಾಡಿ ಇದನ್ನು ಒಂದು ಶ್ರದ್ಧಾಕೇಂದ್ರಗಳನ್ನಾಗಿ ಪರಿವರ್ತಿಸಿದ ಮೂಲ ಪುರುಷ ಒಬ್ಬನೇ ಎಂದು ತೋರುತ್ತದೆ.

ಲಿಂಗಾಯಿತರ ವಶದಲ್ಲಿರುವ ಎರಡು ಸ್ಥಾನಗಳಲ್ಲಿ ಅಲ್ಲಿನ ಮೂಲ ಪುರುಷ ತಪಸ್ಸು ಮಾಡಿ ಸುರಂಗದ ಮೂಲಕ ಬಾಬಾಬುಡನ್‌ಗಿರಿಗೆ ತೆರಳಿದರು. ಮತ್ತು ಅವರು ಹಿಂತಿರುಗಲಿಲ್ಲ ಎನ್ನುತ್ತಾರೆ. ಬಾಬಾಬುಡನ್‌ಗಿರಿಯಲ್ಲಿನ ನಂಬಿಕೆ ಏನೆಂದರೆ ಹಲವು ವರ್ಷಗಳ ನಂತರ ಅದರ ಮೂಲ ಪುರುಷ ಗುಹೆಯ ಮಾರ್ಗವಾಗಿ ಮಕ್ಕಾಕೆ ತೆರಳಿದರು ಎಂಬುದಾಗಿದೆ. ಹಿಂದೂಗಳು ಆತ ಕಾಶಿಗೆ ತೆರಳಿದನೆಂದು ನಂಬುತ್ತಾರೆ.

ಸೂಫಿಸಂತರು ಒಬ್ಬರೇ

ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದರೆ ದಾದಾಹಯಾತ್ ಮೀರ್‌ಖಲಂದರ್ ಎಂಬ ಸೂಫಿ ಸಂತ ಮತ್ತು ಹಿಂದೂಗಳು ಹೇಳುವ ದತ್ತಾತ್ರೇಯ ಇಬ್ಬರೂ ಒಬ್ಬನೇ ವ್ಯಕ್ತಿ, ಆತ ಬೇರೆ ಬೇರೆಯಲ್ಲ. ಮುಸ್ಲಿಮರಿಗಾಗಿ ಸೂಫಿ ಸಂತ ಹಿಂದೂಗಳಿಗೆ ದತ್ತಾತ್ರೇಯ. ಈತನದೇ ಪಾದುಕೆ ಬಾಬಾಬುಡನ್‌ಗಿರಿಯಲ್ಲಿ ಗುಹೆಯೊಳಗೆ

ಪುಟ 10 ಕ್ಕೆ

ಸರ್ಕಾರದಿಂದ ಸಂಘ ಪರಿವಾರಕ್ಕೆ ಮಣೆ

ಹಿಂದು ಮುಸ್ಲಿಂ ಎಂದು ಸಮಾಜವನ್ನು ಒಡೆಯಲು ಪುರೋಹಿತಷಾಹಿಗಳು ದಕ್ಷಿಣ ಭಾರತದಲ್ಲಿ ಬಾಬಾಬುಡನ್‌ಗಿರಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದನ್ನು ಸಂಪೂರ್ಣ ಹಿಂದೂ ದೇವಸ್ಥಾನವನ್ನಾಗ್ಗಿ ಪರಿವರ್ತಿಸಿ ಮುಸ್ಲಿಂರನ್ನು ಅಲ್ಲಿಂದ ಓಡಿಸುವುದು ಇವರ ಅಂತಿಮ ಗುರಿಯಾಗಿದೆ. ಕಾಂಗ್ರೆಸ್ ಪಕ್ಷದ ಆಡಳಿತದ ಸಹಕಾರದಿಂದ ಈ ಗುರಿಯತ್ತ ಸಂಘ ಪರಿವಾರದವರು ಧಾವಿಸುತ್ತಾ ಬಂದಿದ್ದಾರೆ. **ಬಾಬಾಬುಡನ್‌ಗಿರಿಗೆ ಹೋಗುವ ರಸ್ತೆಗಳಲ್ಲಿ ಮೈಲಿಗಲ್ಲುಗಳಲ್ಲಿ ಬೇಕಾದ ಗುರುತು ಹಾಕಿ ಬಾಬಾಬುಡನ್‌ಗಿರಿ ಎಂದು ಬರೆದದ್ದು ಈಗ ಮಾಯವಾಗಿದೆ. ಅಲ್ಲಿ ದತ್ತ ಪೀಠ ಎಂಬ ಹೆಸರು ಕಾಣಿಸಿ ಕೊಂಡಿದೆ.** ಎಲ್ಲೆಡೆ ದತ್ತ ಪೀಠಕ್ಕೆ ದಾರಿಯೆಂದು ಬರೆಯಲಾಗಿದೆ. ಈ ಬದಲಾವಣೆಯನ್ನು ಸ್ವತಃ ಲೋಕೋಪಯೋಗಿ ಇಲಾಖೆಯವರೇ ಮಾಡಿದ್ದಾರೆ.!

ದತ್ತ ಜಯಂತಿ ಆಚರಣೆಗೆ ಮೂರು ವರ್ಷದ ಹಿಂದೆ ಸ್ವತಃ ಡೆಪ್ಯೂಟಿ ಕಮಿಷನರ್ ಶಿಫಾರಸ್ಸು ಮಾಡಿರುವುದು ಒಂದು ವಿಶೇಷ. ಹೀಗೆ ನಿಧಾನವಾಗಿಯಾದರೂ ನಿಶ್ಚಯವಾಗಿ ಬಾಬಾಬುಡನ್‌ಗಿರಿ ಆಡಳಿತಗಾರರ ಸಹಕಾರದಿಂದ ಹಿಂದೂ ದೇಗುಲವಾಗಿ ಪರಿವರ್ತನೆಗೊಳ್ಳುವುದರ ಕಡೆಗೆ ಸಾಗಿದೆ.




ಗುಜರಾತ್ ಚುನಾವಣೆಯ ವಿಜಯದ ಹಿನ್ನೆಲೆಯಲ್ಲಿ ನಡೆದ ಭಾರತೀಯ ಜನತಾ ಪಕ್ಷದ ಕಾರ್ಯಕಾರಿಣಿಯು ಗುಜರಾತ್ ಪ್ರಯೋಗವನ್ನು ದೇಶದೆಲ್ಲೆಡೆ ವಿಸ್ತರಿಸುವ ದೃಢ ಸಂಕಲ್ಪ ಮಾಡಿದೆ. ಅಂದರೆ ಗುಜರಾತ್ ಹತ್ಯಾಕಾಂಡಕ್ಕೆ ಅಧಿಕೃತ ಮುದ್ರೆಯನ್ನೊತ್ತಿದೆ.

ಫ್ಯಾಸಿಸ್ಟ್ ರಾಷ್ಟ್ರ: ಬಿಜೆಪಿಯ ಕಾರ್ಯಸೂಚಿ

ಬಿಜೆಪಿ ಕಾರ್ಯಕಾರಿಣಿಯು ಅಂಗೀಕರಿಸಿದ ಗೊತ್ತುವಳಿಯಲ್ಲಿ ಹಿಂದುತ್ವ ಸಿದ್ಧಾಂತಕ್ಕೆ ಗುಜರಾತ್ ಜನತೆ ಒಪ್ಪಿಗೆ ನೀಡಿದ್ದು ಇನ್ನು ಮುಂದೆ ದೇಶದಾದ್ಯಂತ ಜನರು ಒಪ್ಪಿಗೆ ನೀಡುತ್ತಾರೆ ಎಂಬುದು ಸ್ಪಷ್ಟವಾಗಿದೆ' ಎಂದು ಹೇಳಿದೆ. ಅಂದರೆ ಮುಂದಿನ ದಿನಗಳಲ್ಲಿ ಕೋಮುಗಲಭೆಗಳನ್ನು ಹುಟ್ಟಿಹಾಕುವುದು. ಧರ್ಮದ ಆಧಾರದಲ್ಲಿ ಜನರನ್ನು ಒಡೆಯುವುದು, ಅಮಾನವೀಯ ಬರ್ಬರ ಹಿಂಸೆ ನಡೆಸುವುದು ಹಾಗೂ ಚುನಾವಣೆ ಘೋಷಿಸಿ, ಆ ಮೂಲಕ ಚುನಾವಣೆಯಲ್ಲಿ ಗೆಲ್ಲುವುದು. ಇದು ಮುಂದಿನ ದಿನಗಳಲ್ಲಿ ಬಿಜೆಪಿ ಅನುಸರಿಸಿರುವ ಕಾರ್ಯತಂತ್ರ.

ಜನರನ್ನು ಮೋಸಗೊಳಿಸಲು ಯಾವಾಗಲೂ ದ್ವಿಮುಖ ನಿಲುವನ್ನು ಉಚ್ಚರಿಸುವ ಬಿಜೆಪಿ, ಕಾರ್ಯಕಾರಿಗಳು ಸಭೆಯಲ್ಲೂ ಪುನಃ ದ್ವಂದ್ವ ನಿಲುವನ್ನು ಪ್ರತಿಪಾದಿಸಿವೆ. ಗುಜರಾತ್ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಿರುವುದನ್ನು ಸ್ವಾಗತಿಸಿದ ವಿಶ್ವ ಹಿಂದೂ ಪರಿಷತ್ (ವಿ.ಹೆಚ್.ಪಿ)ನ ಅಂತರರಾಷ್ಟ್ರೀಯ ಕಾರ್ಯದರ್ಶಿ ಪ್ರವೀಣ್ ತೊಗಾಡಿಯಾ, 'ಭಾರತ ಇನ್ನೆರಡು ವರ್ಷಗಳಲ್ಲಿ ಹಿಂದೂ ರಾಷ್ಟ್ರವಾಗುವುದು' ಎಂದು ಘೋಷಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ 'ಸೌಮ್ಯವಾದಿ' ಸೋಗಿನ ವಾಜಪೇಯಿಯವರು, 'ಭಾರತವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸುವ ಅಗತ್ಯವಿಲ್ಲ. ಸಾವಿರಾರು ವರ್ಷಗಳಿಂದ ಅದು ಹಿಂದೂ ರಾಷ್ಟ್ರವಾಗಿಯೂ ಇದೆ' ಎಂದು ಹೇಳಿದರು.


ತೊಗಾಡಿಯಾ

'ಹಿಂದುತ್ವ' ಮತ್ತು 'ಹಿಂದೂ ಜನರು' ಒಂದೇ ಎನ್ನುವ ಅದ್ವಾನಿಯವರು 'ಸಾಂಸ್ಕೃತಿಕ ರಾಷ್ಟ್ರೀಯತೆ'ಯ ಬಗ್ಗೆ ಒತ್ತಿ ಹೇಳಿದರು. ಅಂದರೆ ಭಾರತದ ಬಹು ಸಂಸ್ಕೃತಿಯ ಬದಲಿಗೆ ಏಕ ಸಂಸ್ಕೃತಿಯನ್ನು ಹೇರುವುದು ರಾಷ್ಟ್ರೀಯತೆಯ ಸೋಗಿನಲ್ಲಿ ತನಗೆ ವಿರುದ್ಧವಾಗಿರುವವರನ್ನು ಸದೆಬಡಿಯುವುದು.

1923 ರಲ್ಲಿಯೇ 'ಹಿಂದುತ್ವ'ದ ಘೋಷಣೆಯನ್ನು ಆರಂಭಿಸಿದ ವಿ.ಡಿ.ಸಾವರ್ಕರ್ ಅದನ್ನೊಂದು ರಾಜಕೀಯ ಘೋಷಣೆಯಾಗಿಯೇ ತಯಾರು ಮಾಡಿದ್ದರು. ಅದರ ಹಿಂದೆ ಸ್ಪಷ್ಟವಾದ ಕಾರ್ಯತಂತ್ರ ಅಡಗಿದೆ. ಇಡೀ ದೇಶದ ಜನರನ್ನು 'ಹಿಂದುತ್ವ'ದ ಹೆಸರಿನಲ್ಲಿ ಪ್ರಜಾಸತ್ತೆ ಇಲ್ಲದಂತೆ ನೋಡಿಕೊಳ್ಳುವುದು.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ 'ಹಿಂದುತ್ವ'ದ ಬಗ್ಗೆ ಚರ್ಚೆ ಮುಗಿದ ಅಧ್ಯಾಯ ಎಂದು ಭಾವಿಸಲಾಗಿತ್ತು. ಫ್ಯಾಸಿಸ್ಟ್‌ವಾದಿ ಹಿಂದೂ ರಾಷ್ಟ್ರ'ದ ಕಲ್ಪನೆಯನ್ನು ಭಾರತದ ಬಹುಸಂಖ್ಯಾತ ಜನರು ಅಂದೆಯೇ ತಿರಸ್ಕರಿಸಿದರು. ಗುಜರಾತ್ ಚುನಾವಣೆಯ ಬಳಿಕ, ಆರ್.ಎಸ್.ಎಸ್ ಮತ್ತು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯು, ಹಿಂದೂ ರಾಷ್ಟ್ರದ ಕಲ್ಪನೆಯನ್ನು ಪುನಃ ಚರ್ಚೆಗೆ ಒಳಪಡಿಸಿದೆ. ಭಾರತದ ಬಹುಸಂಖ್ಯಾತ ಜನ ಹಿಂದೆ ತಿರಸ್ಕರಿಸಿದಂತೆ, ಈಗಲೂ ಯಾವುದೇ



ಮುಲಾಜಿಲ್ಲದೆ ತಿರಸ್ಕರಿಸಬೇಕು. ಜಾತ್ಯಾತೀತ ಭಾರತವನ್ನು ಹಾಗೆಯೇ ಉಳಿಸಿ, ಬೆಳಸಬೇಕು

ಕಳ್ಳರ ಮನಸ್ಸು.....

ಬಾಬ್ರಿ ಮಸೀದಿ ಉರುಳಿಸಿದ 10 ನೇ ವರ್ಷದ ಸಂದರ್ಭದಲ್ಲಿ ಸಿಪಿಐ(ಎಂ) ನ ಮುಖ ಪತ್ರಿಕೆ ಪೀಪಲ್ಸ್ ಡೆಮಾಕ್ರಸಿ ವಿಶೇಷ ಸಂಚಿಕೆಯನ್ನು ಹೊರಡಿಸಿತ್ತು. ಈ ಸಂಚಿಕೆಯು ಮಹಾತ್ಮಾ ಗಾಂಧಿಯನ್ನು ಕೊಂದ 1948ರ ಘಟನೆಯಿಂದ ಬಾಬ್ರಿ ಮಸೀದಿ, ಗುಜರಾತ್ ಕಾಂಡಗಳ ಚಿತ್ರಣಗಳನ್ನು ನೀಡಲಾಗಿತ್ತು. ಸಿಪಿಐ(ಎಂ) ಮುಖಂಡರಲ್ಲದೆ ಮಾಜೀ ಪ್ರಧಾನಿ ವಿ.ಪಿ.ಸಿಂಗ್, ಹೆಸರಾಂತ ಲೇಖಕ ಸುಪ್ರಿಂ ಕೋರ್ಟ್ ವಕೀಲ ಎ.ಜಿ.ನೂರಾನಿ ಮೊದಲಾದ ವರು ಲೇಖನಗಳನ್ನು ಬರೆದಿದ್ದರು. ಇಂಗ್ಲೆಂಡಿನಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಕಾರ್ಮಿಕರ ಸಂಘ (Indian Workers Association of Great Britain) ಜಾಹೀರಾತು ನೀಡಿತ್ತು. ಸಾಮಾನ್ಯವಾಗಿ ಪೀಪಲ್ಸ್ ಡೆಮಾಕ್ರಸಿಯ ವಿಶೇಷ ಸಂಚಿಕೆಗಳಿಗೆ ಕಾರ್ಮಿಕರ ಈ ಸಂಘಟನೆ ಜಾಹೀರಾತು ನೀಡುತ್ತಿರುತ್ತದೆ.



ಪೀಪಲ್ಸ್ ಡೆಮಾಕ್ರಸಿ ಮೇಲೆ ಸಂಘ ಪರಿವಾರ ವಿಷಕಾರಿದ ಪ್ರಚಾರ

ಆದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ದ ಮುಖ ಪತ್ರಿಕೆ 'ಪಾಂಚಜನ್ಯ' ಇದನ್ನು ವರ್ಣಿಸಿದ ರೀತಿಯೂ ಬೇರೆ. 'ಹಿಂದೂ ವಿರೋಧಿ ಭಾವನೆಗಳನ್ನು ಪ್ರಚಾರಿಸಲು ಮಾರ್ಕ್ಸ್‌ವಾದಿಗಳು ಬ್ರಿಟೀಷ್ ಹಣವನ್ನು ಪಡೆಯುತ್ತಾರೆ' ಎಂದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ವಿದೇಶಗಳಲ್ಲಿದ್ದ ದೇಶಪ್ರೇಮಿ ಸಂಘಟನೆಗಳು ಸಹಾಯ ಮಾಡಿದ್ದರೆಂಬುದು, ಆರ್‌ಎಸ್‌ಎಸ್ ನವರಿಗೆ ತಿಳಿದಿರಲಿಕ್ಕಿಲ್ಲ. ಏಕೆಂದರೆ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೆ ತಾನೆ?

ಬ್ರಿಟೀಶರ ಸೇವೆ ಮಾಡಿದ್ದು ಯಾರು? ಆರ್‌ಎಸ್‌ಎಸ್ ನ ಸ್ಥಾಪಕ ವಿ.ಡಿ. ಸಾವರ್ಕರ್, 'ಬ್ರಿಟೀಷರ ವಿರುದ್ಧ ಯಾವುದೇ ಹೋರಾಟದಲ್ಲಿ ಭಾಗಿಯಾಗುವುದಿಲ್ಲ ಎಂದು ಮುಚ್ಚಳಿಕೆ ಬರೆದು ಕೊಟ್ಟುದು ಯಾರಿಗೆ ತಾನೇ ನೆನಪಿಲ್ಲ. ಇಂದಿನ ಪ್ರಧಾನ ಮಂತ್ರಿ ಅಟಲ ಬಿಹಾರಿ ವಾಜಪೇಯಿಯವರನ್ನು 1942 ರಲ್ಲಿ ಪೋಲಿಸರು ಬಂಧಿಸಿದಾಗ, 'ನಾನಲ್ಲ ಅವನು' ಎಂದು ಬೇರೊಬ್ಬರ ಮೇಲೆ ಗೂಬೆ ಕೂರಿಸಿದ್ದನ್ನು ಮರೆಯಲು ಸಾಧ್ಯವೆ? ಗಾಂಧಿಯನ್ನು ಕೊಂದ ಗೋಡ್ಸೆ ಸಂತತಿ ಯವರಿಗೆ ಇದೆಲ್ಲಾ ನೆನಪಿರಲು ಹೇಗೆ ಸಾಧ್ಯ?

ಆರ್.ಎಸ್.ಎಸ್‌ನ ಮುಖಪತ್ರಿಕೆ, ಪೀಪಲ್ಸ್ ಡೆಮಾಕ್ರಸಿಯ ಬಗ್ಗೆ ಈ ಆಪಾದನೆ ಮಾಡುವ ಉದ್ದೇಶವೇ ಬೇರೆ. ಛಿದ್ರಕಾರಿ ಚಟುವಟಿಕೆಗಳಿಗಾಗಿ ವಿದೇಶಗಳಿಂದ ಅದರಲ್ಲೂ ಅಮೇರಿಕಾದಿಂದ ಸಾಕಷ್ಟು ಹಣದ ಹೊಳೆ ಹರಿದು ಬರುತ್ತಿದೆ ಎಂಬ ಆಪಾದನೆ ಎದುರಿಸುತ್ತಿರುವ ಈ ಗಲಭೆಕೋರರಿಗೆ ಲೋಕವೆಲ್ಲಾ ಹಳದಿಯಾಗಿ ಕಾಣುತ್ತದೆ. 'ಕಳ್ಳರ ಮನಸ್ಸು ಹಾಗೇ. ಬೇರೆಯವರೆಲ್ಲ ಕಳ್ಳರು ಎಂದು ಆರೋಪಿಸಿದರೆ ತಮ್ಮ ಕಳ್ಳತನ ಮಾಯವಾಗುತ್ತದೆ ಎಂಬ ಲೆಕ್ಕಾಚಾರ ಕಳ್ಳರಂತೆ ಕಾಣುತ್ತಾರೆ, ಆ ದುಷ್ಟ ಬುದ್ಧಿಗ".

.... ಬಿಜೆಪಿ ಚೆಲ್ಲಾಟ

ಪುಟ 3 ರಿಂದ

ಆಡುತ್ತಲೇ. ಜನರ ಗಮನವನ್ನು ಈ ಎರಡು ಸಮಸ್ಯೆಗಳತ್ತಲೇ ಸೆಳೆದು ಅದರ ಮರೆಯಲ್ಲಿಯೇ ರಾಜ್ಯದ ಅನೇಕ ಕಡೆಗಳಲ್ಲಿ ಕೋಮುಗಲಭೆಗಳನ್ನು ಹುಟ್ಟುಹಾಕುವ, ಹಿಂದೂ-ಮುಸ್ಲಿಂ ದ್ವೇಷದ ವಿಷ ಬೀಜ ಬಿತ್ತುವ ಕ್ರೂರ ತಂತ್ರದಲ್ಲಿ ತೊಡಗಿದೆ. ಈ ಎಲ್ಲಾ ಕೋಮು ಕಿಚ್ಚನ್ನು ಹಬ್ಬಿಸುವ ಪ್ರಯತ್ನಗಳನ್ನು ಜೋಡಿಸುವ ಜ್ವಾಲಾಮುಖಿಯಾಗಿ ಬಾಬಾಬುಡನ್‌ಗಿರಿ ಸಮಸ್ಯೆಯನ್ನು ಸಂಘಪರಿವಾರ ಉಲ್ಬಣಗೊಳಿಸುತ್ತಿದೆ. ದತ್ತಮಾಲೆಯಂತಹ ಹೊಸ ಆಚರಣೆಗಳು, ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳದ ರಾಷ್ಟ್ರ ಹಾಗೂ ರಾಜ್ಯಮಟ್ಟದ ಮುಖಂಡರುಗಳು ಬಾಗವಹಿಸಿದ ದತ್ತಯಾತ್ರೆ, ಈ ಯಾತ್ರೆಯಲ್ಲಿ ಮುಸ್ಲಿಂ ದ್ವೇಶದ ಕಾಳವಿಷ ಅನಾಗರೀಕ ರೀತಿಯಲ್ಲಿ ಹೊರ ಹೊಮ್ಮಿರುವುದು, ಬಾಬಾಬುಡನ್‌ಗಿರಿಯನ್ನು ಕರ್ನಾಟಕದ ಅಯೋಧ್ಯೆಯನ್ನಾಗಿ ಮಾಡುತ್ತೇವೆಂಬ ಆಧುನಿಕ ರಕ್ಕಸ ಪ್ರವೀಣ್ ತೊಗಾಡಿಯ ಅರ್ಭಟ.... ಇವು ಕರ್ನಾಟಕದ ಜನ ಜೀವನದ ಮೇಲೆ ಬಂದೆರಗಿರುವ ಸಿಡಿಲ ಪೆಟ್ಟುಗಳಾಗಲಿವೆ. **ಗುಜರಾತ್ ಚುನಾವಣೆಯ ನಂತರ ಕೋಮು ಮದ ತಲೆಗೇರಿದ ಸಂಘಪರಿವಾರ, ವಿಧಾನಸಭೆ, ವಿಧಾನ ಪರಿಷತ್ತುಗಳಲ್ಲಿ ಜನರ ಸಮಸ್ಯೆಗಳು ಚರ್ಚೆಗೆ ಬರದಂತೆ ತಡೆಗಟ್ಟಲು ಯತ್ನಿಸಿದ ಬಿ.ಜೆ.ಪಿ ಸದನದ ಹೊರಗೆ ಮೆರವಣಿಗೆಗಳನ್ನು ಬಿ.ಜೆ.ಪಿ ಕೂಟದ ಕೇಂದ್ರದ ವೈಫಲ್ಯಗಳನ್ನು ಮರೆ ಮಾಚಲು ಕರ್ನಾಟಕ ಸರ್ಕಾರದ ವೈಫಲ್ಯಗಳ ಬಗ್ಗೆ ರ್‍ಯಾಲಿ ನಡೆಸುತ್ತಿದೆ.**

ನಿರ್ಲಿಪ್ತ ಕಾಂಗ್ರೆಸ್

ಸಂಘ ಪರಿವಾರದ ಈ ಕೋಮು ಗಲಭೆಯ ಪ್ರಯತ್ನಗಳು ಹಾಗೂ ದತ್ತಯಾತ್ರೆಯ ವಿಷಪೂರಿತ ಉದ್ರೇಕಕಾರಿ ಭಾಷಣಗಳ ಬಗ್ಗೆ ಕರ್ನಾಟಕ ಸರ್ಕಾರ ಮೃದು ದೋರಣೆ ತಳೆದಿರುವುದು ಸಂಘಪರಿವಾರಕ್ಕೆ ರೆಕ್ಕೆಗೆ ನೀರು ತಟ್ಟಿದಂತಾಗಿದೆ. ಒಂದು ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಪಕ್ಷವಂತೂ ಬಿ.ಜೆ.ಪಿಯ ಕೋಮುವಾದದ ವಿರುದ್ಧ ಹಾಗೂ ರಾಜಕೀಯ ದಾಳಿ ವಿರುದ್ಧ ಸೆಣೆಸುವುದು ತನಗೇನೂ ಸಂಭಂದವಿಲ್ಲವೆಂಬಂತೆ ನಿರ್ಲಿಪ್ತವಾಗಿದೆ.

ಇಂತಹ ಸಮಯದಲ್ಲಿ ಕರ್ನಾಟಕದ ಜನತೆಯನ್ನು ಒಗ್ಗೂಡಿಸುವ, ಕೋಮುವಾದದ ವಿರುದ್ಧ ಹೋರಾಡುವ ಸ್ಥೈರ್ಯವನ್ನು ಕರ್ನಾಟಕದ ಜನತೆಗೆ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ತಂದು ಕೊಡಬೇಕಾಗಿದೆ. ಕರ್ನಾಟಕದ ಜನ ಸಾಮಾನ್ಯರ ಸಮಸ್ಯೆಗಳ ಪರಿಹಾರವೇ ಕರ್ನಾಟಕ ಸರ್ಕಾರದ ಪ್ರಥಮ ಹಾಗೂ ಕೊನೆಯ ಕರ್ತವ್ಯವೆಂಬ ಜವಾಬ್ದಾರಿಯನ್ನು ಸರ್ಕಾರದ ಹೊಣೆ ಹೊತ್ತವರಿಗೆ ಹಾಗೂ ಆಡಳಿತ ಪಕ್ಷದ ಮನಸ್ಸಿಗೆ ಬರುವಂತೆ ಮಾಡಬೇಕಾಗಿದೆ.

ಸಿಪಿಐ(ಎಂ) ಆಂದೋಲನ

ಈ ಹಿನ್ನೆಲೆಯಲ್ಲಿ ಸಿ.ಪಿ.ಐ(ಎಂ) ನ ಕರ್ನಾಟಕ ರಾಜ್ಯ ಸಮಿತಿಯು ಡಿಸೆಂಬರ್ 13ರಿಂದ 15ರವರೆಗೆ ಸಭೆ ಸೇರಿ ರಾಜ್ಯಾದ್ಯಂತ ಕರ್ನಾಟಕ ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ರಾಜಕೀಯ ಪ್ರಚಾರಾಂದೋಲನವನ್ನು 2003ರ ಜನವರಿ 20ರಿಂದ 25ರವರೆಗೆ ನಡೆಸಬೇಕೆಂದು ತೀರ್ಮಾನಿಸಿದೆ. ರಾಜ್ಯಾದ್ಯಂತ ವಿವಿಧ ಪ್ರದೇಶಗಳ ಜಾಥಾಗಳು, ಪ್ರತಿಭಟನಾ ಮೆರವಣಿಗೆಗಳು ಹಾಗೂ ಸಭೆಗಳ ಮೂಲಕ ಕರ್ನಾಟಕದ ಕಾಂಗ್ರೆಸ್ ಆಡಳಿತದ ರಾಜ್ಯ ಸರ್ಕಾರ ವೈಫಲ್ಯಗಳನ್ನು ಹಾಗೂ ಪ್ರಮುಖ ವಿರೋಧ ಬಿಜೆಪಿಯ ವೈಫಲ್ಯ ಹಾಗೂ ಕೋಮುವಾ ಕುತಂತ್ರಗಳನ್ನು ಬಯಲಿಗೆಳೆದು ಜನತೆಯನ್ನು ಎಚ್ಚರಿಸಲಾಗುತ್ತದೆ. ಈ ಪ್ರಚಾರಾಂದೋಲನವ ವ್ಯಾಪಕ ಪ್ರಮಾಣದಲ್ಲಿ ಕೈಗೊಳ್ಳಬೇಕಾಗಿದೆ.

ಬಿಕ್ಕಟ್ಟಿನಲ್ಲಿ ಪ್ಲಾಂಟೇಷನ್

ಬೆಳೆಗಾರರಿಗೆ ಕೈತುಂಬಾ ಹಣವನ್ನು, ದೇಶಕ್ಕೆ ವಿದೇಶಿ ವಿನಿಮಯ ಗಳಿಕೆಯನ್ನು ತರುತ್ತಿದ್ದ ತೋಟ ಕೈಗಾರಿಕೆ ಇಂದು ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿದ್ದು ಬದುಕುಳಿಯಲು ಏದುಸಿರು ಬಿಡುತ್ತಿದೆ. ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಕೇಂದ್ರ ಸರ್ಕಾರದ ಉದಾರೀಕರಣ, ಜಾಗತೀಕರಣ ನೀತಿಗಳು ಈ ದಿವಾಳಿಯನ್ನು ತಂದಿವೆ. ಆದರೆ ಉದ್ಯಮ-ಕಾರ್ಮಿಕರನ್ನು ಉಳಿಸಲು ಕಿಂಚಿತ್ತೂ ಪ್ರಾಮಾಣಿಕ ಕ್ರಮವಹಿಸದೇ, ಭರವಸೆ ಹರಿಸಿ, ಸಮಾವೇಶಗಳನ್ನು ನಡೆಸಿ ವಂಚಿಸುತ್ತಿದೆ. ದೇಶದಲ್ಲಿ ಈ ಉದ್ಯಮ ಮತ್ತು ಕಾರ್ಮಿಕರ ಸ್ಥಿತಿಗತಿಗಳು, ಕಾರ್ಮಿಕ ವರ್ಗದ ಚಳುವಳಿಯ ಕುರಿತಾದ ವಿವರ ಲೇಖನವಿಲ್ಲಿದೆ. 'ತೋಟ ಕೈಗಾರಿಕೆ ಉಳಿಸಿ - ಪ್ಲಾಂಟೇಷನ್ ರಕ್ಷಿಸಿ' ಎಂಬ ಘೋಷಣೆಯಡಿಯಲ್ಲಿ ಜರುಗಿದ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್(ಸಿಐಟಿಯು)ನ 8ನೇ ರಾಷ್ಟ್ರ ಸಮ್ಮೇಳನ ಚಿಕ್ಕಮಗಳೂರಿನಲ್ಲಿ ಡಿಸೆಂಬರ್ 26 ರಿಂದ 28 ರವರೆಗೆ ಜರುಗುತ್ತಿರುವ ಹಿನ್ನೆಲೆಯಲ್ಲಿ ವಿಸ್ತೃತ ನೋಟವನ್ನು ನೀಡಲಾಗಿದೆ.

ಕೆ.ಎನ್.ಉಮೇಶ್ - ಎಸ್.ವೈ.ಗುರುಶಾಂತ್

ವರ್ಷದ ಹಿಂದೆ ಕಾರವಾರಕ್ಕೆ ಪ್ರವಾಸಕ್ಕೆಂದು ಹೋದ ಚಿಕ್ಕಮಗಳೂರಿನ ಕಾಫಿ ತೋಟದ ಮಾಲೀಕರೊಬ್ಬರು ಹೆಂಡತಿ ಮಕ್ಕಳೊಂದಿಗೆ ಸಮುದ್ರಕ್ಕೆ ಹಾರಿ ಪ್ರಾಣಬಿಟ್ಟರು. ಬಡಪಾಯಿ ತರಕಾರಿ ಬೆಳೆದ, ಶೇಂಗಾ ಬೆಳೆದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ, ಪಕ್ಕದ ಆಂಧ್ರದಲ್ಲಿ ತಮ್ಮ ಕಿಡ್ನಿ ಮಾರಿ ಸಾಲ ತೀರಿಸಿ ಬದುಕು ನಡೆಸುವ ವರದಿ ಬರುತ್ತಿವೆ. ಆದರೆ ಸಿರಿತನವನ್ನೇ ಒದಗಿಸಿದ್ದ ಕಾಫಿ ಬೆಳೆಯುವ ಬೆಳೆಗಾರ (ತೋಟದ ಮಾಲೀಕ)ನೇ ಆತ್ಮಹತ್ಯೆ ಮಾಡಿಕೊಂಡ ದುರಂತ ಎದುರಾಗಿದೆ. ಒಂದೆಡೆ ತೋಟದ ಮಾಲೀಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಇನ್ನೊಂದೆಡೆ ದೂರದ ಕೇರಳದ ತೋಟಗಳಲ್ಲಿ ತೋಟ ಕಾರ್ಮಿಕರು ಕೆಲಸವಿಲ್ಲದ ಕಾರಣ ಆತ್ಮಹತ್ಯೆ ಮಾಡಿಕೊಂಡಿರುವ ತಲ್ಲಣಕಾರಿ ವರದಿಗಳು ವಾಸ್ತವವಾಗಿವೆ.

ವಿನಾಶದ ಅಂಚಿಗೆ

ವಿವಿಧ ರಾಜ್ಯಗಳಲ್ಲಿ ಪ್ರಕೃತಿದತ್ತ ಬೆಟ್ಟ ಕಣಿವೆಗಳು, ದಟ್ಟ ಅರಣ್ಯಗಳ ನಡುವೆ ನೂರಾರು ವರ್ಷಗಳಿಂದ ಮಾಡಲಾದ ತೋಟಗಳ ಪೈಕಿ ಪ್ರಮುಖವಾಗಿ ಟೀ, ಕಾಫಿ, ರಬ್ಬರ್, ಏಲಕ್ಕಿ, ತಾಳೆ ತೋಟಗಳು ಪ್ರಮುಖವಾಗಿವೆ. ತೋಟ ಕೈಗಾರಿಕೆಯು ರಾಷ್ಟ್ರದ ಖಜಾನೆಗೆ ರಾಜಸ್ವ (excise), ಕೃಷಿ ಉತ್ಪನ್ನಗಳ ಮೇಲಿನ ಶುಲ್ಕ, ಮಾರಾಟ ತೆರಿಗೆ ಮುಂತಾದ ರೀತಿಯ ಮೂಲಕ ವಾರ್ಷಿಕ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯವನ್ನು ಒದಗಿಸುವ ಹಾಗೂ ರಾಜ್ಯಗಳ ಆಂತರಿಕ ಉತ್ಪನ್ನದ ಪ್ರಮುಖ ಭಾಗವಾಗಿದೆ. ಪರಂಪರಾಗತವಾಗಿ ಇಡೀ ವಿಶ್ವದಲ್ಲಿ ತೋಟ ಕೈಗಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಭಾರತವು ಪ್ರಸ್ತುತ ಜಾಗತಿಕ ಬದಲಾವಣೆಗಳು ಜಾಗತೀಕರಣ, ಉದಾರೀಕರಣ ನೀತಿಗಳು ಹಾಗೂ ಕೇಂದ್ರದ ಬಿ.ಜೆ.ಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ಆಮದು ನೀತಿಯ ಪರಿಣಾಮವಾಗಿ ಸಂಕಷ್ಟಕ್ಕೆ ಸಿಲುಕಿ ಇಡೀ ತೋಟಗಾರಿಕೆಯೇ ವಿನಾಶದ ಅಂಚಿನಲ್ಲಿದೆ. ಪರಿಣಾಮವಾಗಿ ರಾಷ್ಟ್ರದಲ್ಲಿ ಲಕ್ಷಾಂತರ ಜನ ತೋಟ ಕಾರ್ಮಿಕರ ಬದುಕೂ ಸಹ ಸಂಕಷ್ಟಕ್ಕೆ ಈಡಾಗಿದೆ. ಇಡೀ ರಾಷ್ಟ್ರದಲ್ಲಿರುವ 40 ಲಕ್ಷ ತೋಟ ಕಾರ್ಮಿಕರಲ್ಲಿ 20 ಲಕ್ಷ ಮಾತ್ರ ಖಾಯಂ ಕಾರ್ಮಿಕರಾಗಿದ್ದು ಉಳಿದ 20 ಲಕ್ಷ ಅರೆಕಾಲಿಕ ಕಾರ್ಮಿಕರಾಗಿದ್ದಾರೆ.

ರಾಷ್ಟ್ರದ ದುಡಿಯುವ ಜನತೆಯ ಭಾಗವಾಗಿರುವ ಈ ಕಾರ್ಮಿಕರೂ ಸಹ ಪ್ರಸ್ತುತ ಉದಾರೀಕರಣ ಆಧಾರಿತ ಕಾರ್ಮಿಕ ಕಾನೂನುಗಳ ಸುಧಾರಣೆಯ ಪರಿಣಾಮ ಹಾಗೂ ಜಾಗತಿಕ ಕೈಗಾರಿಕಾ ಹಿಂಜರಿತದ ಪರಿಣಾಮವನ್ನು ಎದುರಿಸಬೇಕಾಗಿದೆ. ಈ ನಿಟ್ಟಿನಲ್ಲಿ ತೋಟ ಕೈಗಾರಿಕೆಯ ಪ್ರಮುಖ ವಲಯಗಳಾದ ಟೀ ಉದ್ಯಮ, ಕಾಫಿ, ರಬ್ಬರ್, ಏಲಕ್ಕಿ ಹಾಗೂ ತಾಳೆ ತೋಟಗಾರಿಕೆಯ ಪರಿಸ್ಥಿತಿ ಅರಿಯಬೇಕಿದೆ. ತೋಟ ಕಾರ್ಮಿಕರಲ್ಲಿ ಶೇ.70ರಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಇತರೆ ಪ್ರದೇಶಗಳಿಂದ, ಇತರೆ ರಾಜ್ಯಗಳಿಂದ ವಲಸೆ ಬಂದ ಕಾರ್ಮಿಕರೇ ಹೆಚ್ಚಾಗಿದ್ದಾರೆ. ಅನಕ್ಷರತೆ, ಬಡತನ, ಹಾಗೂ ಸಾಲದ ಬಾಧೆಯಿಂದ ಬಳಲಿರುವ ಜನತೆಯೇ ಇವರಲ್ಲಿ ಪ್ರಮುಖರಾಗಿದ್ದಾರೆ. ಈ ವಿಶಿಷ್ಟ ಕಾರಣಗಳಿಂದಾಗಿ ತೋಟಗಳಲ್ಲೇ ಬದುಕು ಸಾಗಿಸಿ, ಅದನ್ನೇ ಪ್ರಪಂಚವನ್ನಾಗಿಸಿ ಕೊಂಡಿರುವ ಕಾರ್ಮಿಕರು ನಗರದ ಜೀವನ, ಆಧುನಿಕ ಸೌಲಭ್ಯ, ಅಭಿವೃದ್ಧಿಯ ಅರಿವೇ ಇಲ್ಲದ ಮುಗ್ದರೇ ಬಹುಮಂದಿ ಇದ್ದಾರೆ. ಅನಾರೋಗ್ಯ, ಸೌಲಭ್ಯದ ಕೊರತೆ ಇವರನ್ನು ಕಾಡುವ ಪ್ರಮುಖ ಸಮಸ್ಯೆಗಳಾಗಿವೆ. ಆಸ್ಸಾಂನ ದಿ ಬ್ರೂಗರ್ ಜಿಲ್ಲೆಯ ತೋಟದಲ್ಲಿ 2002 ರಲ್ಲೇ ಸುಮಾರು 110 ಕ್ಕೂ ಹೆಚ್ಚು ಕಾರ್ಮಿಕರು ಕಾಲರಾದಂತಹ ಖಾಯಿಲೆಗಳಿಗೆ ಬಲಿಯಾಗಿದ್ದಾರೆ.



ಟೀ ಉದ್ಯಮ

ರಾಷ್ಟ್ರದ ಸಂಘಟಿತ ಉತ್ಪಾದನಾ ವಲಯದ ಅತ್ಯಂತ ಹಳೆಯ ಉದ್ಯಮವಾದ ಟೀ ಉದ್ಯಮವು ಅತ್ಯಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ವಲಯವಾಗಿದೆ. ಸಂಘಟಿತ ಉತ್ಪಾದನಾ ವಲಯದಲ್ಲಿನ ಕಾರ್ಮಿಕರ ಸಂಖ್ಯೆ 73 ಲಕ್ಷಗಳಾದರೆ ಟೀ ಉದ್ಯಮದಲ್ಲೇ 10 ಲಕ್ಷಕ್ಕೂ ಹೆಚ್ಚು ಖಾಯಂ ಕಾರ್ಮಿಕರಿದ್ದಾರೆ. ಈ ವಲಯದಲ್ಲಿನ ಅಂದರೆ ಪ್ರತಿ ಏಳು ಜನ ಕಾರ್ಮಿಕರಲ್ಲೊಬ್ಬರು ಟೀ ಉದ್ಯಮದಲ್ಲಿನ ಕಾರ್ಮಿಕರಾಗಿದ್ದಾರೆ. ಅಲ್ಲೂ ಸಹ ಕಾರ್ಮಿಕರ ಕುರಿತ ನೀತಿ ನಿರೂಪಿಸುವ ಮಂದಿ ಈ ಕಾರ್ಮಿಕರನ್ನು ಗಮನಿಸದೆ ಮುಂದೆ ಸಾಗಿರುವುದು ಇಂದು ಇತಿಹಾಸವಾಗಿದೆ. ಪರಿಣಾಮವಾಗಿ ಕಡಿಮೆ ಕೂಲಿ ಹಾಗೂ ಯಾವುದೇ ಮೂಲಭೂತ ಸೌಲಭ್ಯವಿಲ್ಲದ ಪರಿಸ್ಥಿತಿಯಲ್ಲಿ ದುಡಿಯುವಂತಾಗಿದೆ.

ಪ್ರಪಂಚದ ಅತಿ ದೊಡ್ಡ ಟೀ ಉತ್ಪಾದಕ ರಾಷ್ಟ್ರವಾದ ಭಾರತವು ವಾರ್ಷಿಕ 750 ದಶಲಕ್ಷ ಕೆ.ಜಿಗಳಷ್ಟು ಟೀ ಉತ್ಪಾದಿಸುತ್ತಿದ್ದು ವಿಶ್ವದ ಶೇ.30ರಷ್ಟು ಟೀ ಉತ್ಪಾದನೆ ಇದಾಗಿದೆ. ಜೊತೆಯಲ್ಲಿ ಅತ್ಯಂತ ಹೆಚ್ಚು ಟೀ ಬಳಕೆದಾರರನ್ನು ಹೊಂದಿರುವ ರಾಷ್ಟ್ರವಾಗಿದೆ. ಆದರೆ ಪ್ರಪಂಚದ ನಾಲ್ಕು ಪ್ರಮುಖ ಟೀ ಉತ್ಪಾದಕ ರಾಷ್ಟ್ರಗಳಲ್ಲಿ ಅತ್ಯಂತ ಕಡಿಮೆ ಟೀ ರಫ್ತು ಮಾಡುವ ರಾಷ್ಟ್ರವಾಗಿದೆ. ಕೀನ್ಯಾ, ಶ್ರಿಲಂಕಾ ಮತ್ತು ಚೈನಾದ ರಫ್ತು ಭಾರತಕ್ಕಿಂತ ಹೆಚ್ಚಿನದಾಗಿದೆ.

ರಾಷ್ಟ್ರದಲ್ಲಿ ಆಸ್ಸಾಂ, ಪಶ್ಚಿಮಬಂಗಾಳ, ತಮಿಳುನಾಡು, ಕೇರಳ ಪ್ರಮುಖ ಟೀ ಉತ್ಪಾದಕ ರಾಜ್ಯಗಳಾಗಿವೆ. ಆಸ್ಸಾಂ ಒಂದರಲ್ಲಿ ಮಾತ್ರ ಎಲ್ಲಾ ಜಿಲ್ಲೆಗಳಲ್ಲೂ ಟೀ ಬೆಳೆಯಲಾಗುತ್ತದೆ. ಇದರೊಟ್ಟಿಗೆ ತ್ರಿಪುರಾ, ಕರ್ನಾಟಕ, ಹಿಮಾಚಲಪ್ರದೇಶ, ಬಿಹಾರ, ಉತ್ತರಾಂಚಲ, ಮಣಿಪುರ, ಸಿಕ್ಕಿಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಓರಿಸ್ಸಾ ಮತ್ತು ಮೇಘಾಲಯಗಳಲ್ಲೂ ಸೀಮಿತ ಮಟ್ಟದಲ್ಲಿ ಟೀ ಉತ್ಪಾದಿಸಲಾಗುತ್ತದೆ.

ಸಾವಿನಂಚಿಗೆ ಗಿಡಗಳು : ಆತಂಕದ ಸ್ಥಿತಿ

ಒಂದೆಡೆ ಆಂತರಿಕ ಬಳಕೆ ಹೆಚ್ಚುತ್ತಿದೆ. ರಫ್ತು ಹೆಚ್ಚುತ್ತಿಲ್ಲ ಹಾಗೂ ಉತ್ಪಾದನೆ ಮಾತ್ರ ಹಲವಾರು ವರ್ಷಗಳಿಂದ 750 ದಶಲಕ್ಷ ಕೆ.ಜಿಗೆ ಮಾತ್ರವೇ ಸೀಮಿತವಾಗಿದೆ. ಉತ್ಪಾದನೆಯನ್ನು ಹೆಚ್ಚಿಸಬೇಕೆಂಬ ಅನೇಕ ಪಂಚವಾರ್ಷಿಕ ಯೋಜನೆಗಳ ಗುರಿ ಫಲಿಸಿಲ್ಲ. ಉತ್ಪಾದನೆ ಹೆಚ್ಚಿದ ಕಾಲಾವಧಿಯಲ್ಲಿ ರಫ್ತು ಹೆಚ್ಚಾಗಿರುವ ಉದಾಹರಣೆ ಕಣ್ಣ ಮುಂದಿದೆ. ಆಂತರಿಕ ಉತ್ಪಾದನೆ ಹೆಚ್ಚಿಸದೆ ರಫ್ತಿನ ಹೆಚ್ಚಳ ಸಾಧ್ಯವಿಲ್ಲ. ರಾಷ್ಟ್ರದಲ್ಲಿರುವ ಟೀ ಗಿಡಗಳಲ್ಲಿ ಶೇ.38 ರಷ್ಟು 50 ವರ್ಷಕ್ಕಿಂತ ಹೆಚ್ಚು

ಪ್ಲಾಂಟೇಶನ್ ಕಾರ್ಮಿಕರ 8ನೇ

ಹಿಂದಿನದ್ದಾಗಿದ್ದರೆ ಶೇ.58ರಷ್ಟು ಗಿಡಗಳು 31 ವರ್ಷಕ್ಕಿಂತ ಹೆಚ್ಚು ಹಿಂದಿನವಾಗಿವೆ. ಶೇ.19ರಷ್ಟು ಮಾತ್ರ 10 ವರ್ಷಕ್ಕಿಂತ ಕಡಿಮೆ ಕಾಲದವಾಗಿವೆ. ಅತೀ ಹೆಚ್ಚು ಇಳುವರಿ ನೀಡುವ ಕಾಲಾವಧಿ 5 ರಿಂದ 30 ವರ್ಷಗಳ ನಡುವಿನ ಗಿಡಗಳ ವಯೋಮಾನವಾಗಿದೆ. ಹಳೆಯದಾಗಿರುವ ಗಿಡಗಳನ್ನು ಬದಲಿಸಿ ಹೊಸಗಿಡಗಳನ್ನು ಹಾಕದಿರುವ ಪರಿಣಾಮ, ಅವುಗಳಿಗೆ ಅಗತ್ಯವಿರುವ ತೋಟ ಕೃಷಿಗೆ ಪೂರಕ ಕ್ರಮ ಕೈಗೊಳ್ಳದಿರುವ ಕಾರಣ ಇಳುವರಿ ಇಳಿಮುಖವಾಗಿದ್ದು ರಾಷ್ಟ್ರದಲ್ಲಿನ ಇಳುವರಿಯ ಪ್ರಮಾಣ ಸ್ಥಗಿತವಾಗಿದೆ. ಪರಿಣಾಮವಾಗಿ ರಫ್ತಿನ ಅವಕಾಶವೂ ಕುಂಠಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವಿಶ್ವದ ಅತಿದೊಡ್ಡ ಟೀ ಬಳಕೆದಾರರನ್ನು ಹೊಂದಿರುವ ಭಾರತದ ಮಾರುಕಟ್ಟೆಗೆ ಲಗ್ಗೆ ಇಡುವ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಹಾಗೂ

ಮುಚ್ಚಿವೆ ತೋಟಗಳು- ಬೀದಿಗೆ ಬಿದ್ದಿದ್ದಾರೆ ಕಾರ್ಮಿಕರು

ತೋಟದಲ್ಲಿ ದುಡಿಯುವ ಕಾರ್ಮಿಕರು ಮಳೆಗಾಲದಲ್ಲಿ ತೋಟ ಕೆಲಸಗಳಲ್ಲಿ ದುಡಿಯುವಾಗ ಅವರ ದೇಹವನ್ನು ಮುತ್ತುವ ಜಿಗಣೆಗಳು, ಅವರ ರಕ್ತವನ್ನೇ ಬಸಿದು ಅನೀಮಿಯಾ ರೋಗಿಗಳಾಗಿಸುತ್ತವೆ. ಈ ರೀತಿ ನೂರಾರು ವರ್ಷಗಳ ಕಾಲ ಲಕ್ಷಾಂತರ ಕಾರ್ಮಿಕರು ತಮ್ಮ ರಕ್ತ ಬಸಿದು ಬೆಳೆದ ಬೆಳೆಗೆ ಇಂದು ಬೆಲೆ ಕುಸಿತ ದೆವ್ವದಂತೆ ಕಾಡಿದೆ. ಪರಿಣಾಮವಾಗಿ ಮೊದಲೇ ಸರಿಯಾದ ಸಂಬಳ, ಸೌಲಭ್ಯ, ಕಾರ್ಮಿಕ ಕಾನೂನುಗಳ ಜಾರಿ ಕಂಡರಿಯದ ಕಾರ್ಮಿಕರಿಗೆ ಪ್ರಸ್ತುತ ವೇತನವಿಲ್ಲದೆ, ಸೌಲಭ್ಯವಿಲ್ಲದೆ ನರಳುವಂತಾಗಿದೆ. ಕೇರಳ ಮತ್ತು ಉತ್ತರ ಭಾರತದಲ್ಲಿ ಅನೇಕ ಟೀ ತೋಟಗಳಲ್ಲಿನ ಕಾರ್ಮಿಕರು ಕಳೆದ ಇಪ್ಪತ್ತು ತಿಂಗಳುಗಳಿಗಿಂತ ಹೆಚ್ಚಿನ ಕಾಲಾವಧಿ ವೇತನವನ್ನೇ ಪಡೆದಿಲ್ಲ. ಕೇರಳದಲ್ಲಿ 11 ತೋಟಗಳು ಹಾಗೂ 10 ಕಾರ್ಖಾನೆಗಳು, ಪಶ್ಚಿಮ ಬಂಗಾಳದಲ್ಲಿ 21, ಆಸ್ಸಾಂ ಮತ್ತು ತಮಿಳುನಾಡುಗಳಲ್ಲಿ ಒಂದೊಂದು ತೋಟಗಳು ಮುಚ್ಚಿವೆ. ಪರಿಣಾಮವಾಗಿ ಆಸ್ಸಾಂದಲ್ಲಿ 2500, ಕೇರಳದಲ್ಲಿ 25,000 ಪಶ್ಚಿಮ ಬಂಗಾಳದಲ್ಲಿ 35000 ಒಟ್ಟಾರೆಯಾಗಿ 65000 ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಇದರೊಟ್ಟಿಗೆ ಟಾಟಾ ಕಂಪನಿ, ಥಾಮಸ್ ಕಂಪನಿ ಹಾಗೂ ಆಸ್ಸಾಂ ಟೀ ಕಾರ್ಪೋರೇಷನ್ ಮುಂತಾದ ಪ್ರತಿಷ್ಠಿತ ಕಂಪನಿಗಳೇ ಉದ್ಯೋಗ ಕಡಿತವನ್ನು ಅಳವಡಿಸಿದ್ದು ಇರುವ ಕಾರ್ಮಿಕರ ಮೇಲೆ ಹೆಚ್ಚಿನ ಉತ್ಪಾದನಾ ಹೊರೆಯನ್ನು ಹೊರಿಸಿದ್ದಾರೆ. ಗುತ್ತಿಗೆ ಹಾಗೂ ಅರೆಕಾಲಿಕ ಕಾರ್ಮಿಕರು ಪ್ರಮಾಣ ಹೆಚ್ಚಿದೆ. ವರ್ಷಕ್ಕೆ ಶೇ8 ರಷ್ಟು ಪ್ರಮಾಣದ ತೋಟದ ಜಾಗದಲ್ಲಿ ಹೊಸ ಗಿಡಗಳನ್ನು ನೆಡದಿರುವ ಕಾರಣ ಗಿಡಗಳ ಉತ್ಪಾದನಾ ಸಾಮರ್ಥ್ಯವು ಕುಗ್ಗಿದ್ದು ಟೀ ಒಟ್ಟಾರೆ ಇಳುವರಿ ಕುಂಠಿತವಾಗಿ ಉತ್ಪಾದನಾ ವೆಚ್ಚವನ್ನೂ ಹೆಚ್ಚಿಸಿದೆ. ಈ ಎಲ್ಲದರ ಪರಿಣಾಮವಾಗಿ ತೋಟಗಳು ಮುಚ್ಚಿದ್ದು ಕಾರ್ಮಿಕರು ಬೀದಿಪಾಲಾಗಿದ್ದಾರೆ.

ಕ್ಷಮೆ - ಬೀದಿ ಪಾಲಾದ ಕಾರ್ಮಿಕರು

ಶದಿಂದ ಮುಕ್ತವಾಗಿ ಆಮದಾಗುವ ಕಡಿಮೆ ಾದನಾ ವೆಚ್ಚದ, ಕಡಿಮೆ ದರದ ಟೀ ರಾಷ್ಟ್ರದ ತೋಟಗಾರಿಕೆಗೆ ಎಂತಹ ಪರಿಣಾಮವನ್ನು ರಬಹುದೆಂದು ಅಂದಾಜಿಸುವುದೂ ಾನಕವಾಗಿದೆ.

ರಫ್ತಿಗೆ ಹಿನ್ನಡೆ ತಂದ ಸೋವಿಯತ್ ್ಕೂಟದ ವಿಘಟನೆ

ಹಿಂದಿನ ಸಮಾಜವಾದಿ ಸೋವಿಯತ್ ್ಕೂಟವು (ಯು.ಎಸ್.ಎಸ್.ಆರ್) ತದಿಂದ ಟೀಯನ್ನು ಆಮದು ಮಾಡಿಕೊಳ್ಳುವ ುಖ ದೇಶವಾಗಿತ್ತು. ಪರಿಣಾಮವಾಗಿ ರತದಲ್ಲಿ ಟೀ ಉತ್ಪಾದನೆ ಹೆಚ್ಚಿದಾಗ 200 ಲಕ್ಷ ಕೆ.ಜಿಗಳಷ್ಟು ರಫ್ತನ್ನು ಭಾರತವು ಡುತ್ತಿತ್ತು. 1991ರಲ್ಲಾದ ಸಮಾಜವಾದಿ ೀವಿಯತ್ ಒಕ್ಕೂಟದ ವಿಘಟನೆಯಿಂದಾಗಿ

ಲ ಭಾರತ ಸಮ್ಮೇಳನ

ರತದ ಟೀ ರಫ್ತಿಗೆ ತೀವ್ರ ಪೆಟ್ಟು ನೀಡಿತು. ಗೂ ಟೀ ಉದ್ದಿಮೆಯ ಬಿಕ್ಕಟ್ಟನ್ನು ಇನ್ನೂ ವ್ರಗೊಳಿಸಿತು. ಆನಂತರ ಮಧ್ಯಪೂರ್ವ ಷ್ಟ್ರಗಳ ಮಾರುಕಟ್ಟೆಗೆ ರಫ್ತನ್ನೇ ಲಂಬಿಸುವಂತಾಯಿತು. ಆದರೂ ಹೆಚ್ಚಿದ ತರಿಕ ಬಳಕೆ, ಸ್ಥಗಿತಗೊಂಡ ಉತ್ಪಾದನೆ ರಫ್ತನ್ನು ೀಕ್ಷಿತ ಮಟ್ಟದಲ್ಲಿ ಹೆಚ್ಚಿಸಲಿಲ್ಲ.

ಬ್ಬರ್ ಉದ್ದಿಮೆ - ಚಿಂತಾಜನಕ ಭವಿಷ್ಯ

1996 ರಿಂದ ಉಂಟಾದ ಬೆಲೆ ಕುಸಿತದ ಣಾಮವಾಗಿ ರಬ್ಬರ್ ತೋಟಗಾರಿಕೆಯ ್ತರಣೆಯು ಬೆಳವಣಿಗೆ ಪ್ರಮಾಣವು ವ್ರತರವಾದ ಹಿನ್ನಡೆಯನ್ನು ಅನುಭವಿಸಿದೆ. ಣಾಮವಾಗಿ ರಬ್ಬರ್ ಉತ್ಪಾದನೆಯಲ್ಲಿ ತತೆ ಉಂಟಾಗಿದೆ. ಒಂದೆಡೆ ಸಾರಿಗೆ ಟೈರ್ ತ್ತು ಟ್ಯೂಬುಗಳಿಗೆ ಬಳಸಲಾಗುವ ಪ್ರಾಕೃತಿಕ ್ಬರ್ ಹಾಗೂ ಸಿಂಥೆಟಿಕ್ ರಬ್ಬರ್ ಎರಡರ ರ್ಷಿಕ ಬೆಳವಣಿಗೆ ಪ್ರಮಾಣವು ಣಾತ್ಮಕವಾಗಿದೆ. ಇತರೆ ವಸ್ತುಗಳ ತಯಾರಿಕೆಗೆ ಳಕೆಯು ಸ್ವಲ್ಪ ಪ್ರಮಾಣದಲ್ಲಿ ಮಾತ್ರ ರಿಕೆಯಾಗಿದೆ. ವಿದೇಶದಿಂದ ಆಮದಾಗುವ ್ಬರಿನ ಬೆಲೆ ಕಡಿಮೆ ಇರುವ ಕಾರಣ ಭಾರತದ ಬ್ಬರ್ ಉದ್ದಿಮೆ ತೀವ್ರ ಹಿನ್ನಡೆ ನುಭವಿಸಬೇಕಾಗಿದೆ. ವಿಶ್ವ ವ್ಯಾಪಾರ ಸಂಘಟನೆ ಬ್ಲ್ಯು.ಟಿ.ಒ) ಒಪ್ಪಂದದ ರಬ್ಬರನ್ನು ಕೈಗಾರಿಕಾ ್ಚಾವಸ್ತುವೆಂದು ಪರಿಗಣಿಸಿದ್ದು ಕಾಫಿ, ಟೀ, ಲಕ್ಕಿ ಹಾಗೂ ಕಾಳುಮೆಣಸಿನಂತೆ ಕೃಷಿ ತ್ಪನ್ನವೆಂದು ಕೃಷಿ ಒಪ್ಪಂದದಡಿ ರಿಗಣಿಸ--ದಿರುವ ಕಾರಣ ಮತ್ತಷ್ಟು ತೀವ್ರ ಂಕಷ್ಟಕ್ಕೆ ರಬ್ಬರ್ ತೋಟಗಾರಿಕೆಯು ಸಿಲುಕಿದೆ. ಮುಖವಾಗಿ ಪ್ರಾಕೃತಿಕ ರಬ್ಬರ್‌ನ ಬೆಲೆ ಕುಸಿತಕ್ಕೆ ರಣವಾಗಿದೆ. ಕೌಲಾಲಂಪುರದಲ್ಲಿ ರೂ. 30.32 ಸಕ್ಕೆ 1 ಕೆ.ಜಿ ರಬ್ಬರ್ ದೊರಕುತ್ತಿರುವಾಗ ಾರತದಲ್ಲಿನ ರಬ್ಬರ್ ಬೆಲೆ 1 ಕೆ.ಜಿಗೆ ರೂ 3.56ಗಳಷ್ಟಾಗಿದೆ. ಇಂತಹ ತೀವ್ರತರ ್ಪರ್ಧೆಯನ್ನು ಎದುರಿಸಬೇಕಾಗಿದೆ. ಭಾರತವು ಷ್ಟು ಮಾರುಕಟ್ಟೆಯ ಪ್ರಮುಖ ಪಾಲುದಾರರಾಗದಿರುವ ಕಾರಣ, ವಿದೇಶಿ ಮಾರುಕಟ್ಟೆಯಲ್ಲಿನ ಸಂಪೂರ್ಣ ಮಾಹಿತಿ ಲ್ಲದಿರುವ ಕಾರಣ, ಲಭ್ಯವಿರುವ ಆಂತರಿಕ ಮಾರುಕಟ್ಟೆಯ ವೈಫಲ್ಯದ ಕಾರಣ, ಪ್ರಾಕೃತಿಕ

ರಬ್ಬರ್ ತೋಟಗಾರಿಕೆಯು ಪ್ರಸ್ತುತ ನೀತಿಗಳಿಂದಾಗಿ ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿದೆ. ವಿಶ್ವದ ಇತರೆಡೆಗಳಲ್ಲಿ ಪ್ರಾಕೃತಿಕ ರಬ್ಬರಿನ ವಾರ್ಷಿಕ ಬೆಳವಣಿಗೆ ಪ್ರಮಾಣ ಹೆಚ್ಚುತ್ತಿದ್ದರೆ ಭಾರತದಲ್ಲಿ ಅದು ಕುಂಠಿತವಾಗುತ್ತಿದೆ. ಪರಿಣಾಮವಾಗಿ ರಬ್ಬರ್ ತೋಟಗಾರಿಕೆಯಲ್ಲಿರುವ 3, 41,320 ತೋಟ ಕಾರ್ಮಿಕರ ಬದುಕು ಬರಲಿರುವ ದಿನಗಳಲ್ಲಿ ಚಿಂತಾಜನಕವಾಗಲಿದೆ. ಈ ತೋಟಗಾರಿಕೆಯು ಬಹುತೇಕ ಕೇರಳಕ್ಕೆ ಸೀಮಿತವಾಗಿದ್ದು ಕರ್ನಾಟಕ ರಾಜ್ಯದ ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ಹಾಗೂ ಪುತ್ತೂರುಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ರಬ್ಬರ್ ತೋಟಗಾರಿಕೆಯನ್ನು ಕಾಣಬಹುದು.

ಕಾಫಿ: ಬೆಲೆ ಬಿಕ್ಕಟ್ಟು

ಪ್ರಸ್ತುತ ಕಾಫಿ ಉದ್ದಿಮೆಯು ಹಿಂದೆಂದೂ ಕಂಡರಿಯದಂತಹ ತೀವ್ರ ಹಿಂಜರಿತವನ್ನು ಹಾಗೂ ಸಂಕಷ್ಟವನ್ನು ಅನುಭವಿಸುತ್ತಿದೆ. ಇದುವರೆಗಿನ ಭಾರತದ ಇತಿಹಾಸದಲ್ಲಿ 1992ರನ್ನು ಕಾಫಿ ಉದ್ದಿಮೆಯ ತೀವ್ರ ಸಂಕಷ್ಟದ ವರ್ಷವೆಂದು ಪರಿಗಣಿಸಲಾಗಿತ್ತು. ಆದರೆ ಪ್ರಸ್ತುತ ಬಿಕ್ಕಟ್ಟು ಅದನ್ನು ಮೀರಿದಂತದ್ದಾಗಿದೆ. ಅಂತರಾಷ್ಟ್ರೀಯ ಕಾಫಿ ಒಪ್ಪಂದ ಹಾಗೂ ಕೋಟಾ ವ್ಯವಸ್ಥೆ ಕುಸಿದು ಬೀಳುವ ಮುನ್ನ ಅಂದರೆ 1976 ರಿಂದ 89 ರವರೆಗಿನ ಕಾಲಾವಧಿಯಲ್ಲಿ ಸಹ ರೋಬಸ್ಟಾ ಕಾಫಿಯ ಬೆಲೆ ಹಾಗೂ ಅರೇಬಿಕಾ ಕಾಫಿಯ ಬೆಲೆ ಪ್ರಸ್ತುತ ಪ್ರಮಾಣಕ್ಕೆ ಕುಸಿದಿರಲಿಲ್ಲ.

ಬೆಳೆಯನ್ನು ಬೆಳೆಯುವುದಿಲ್ಲ. ಆದರಿಂದಾಗಿ ಇಂತಹ ರಾಷ್ಟ್ರಗಳ ಪೈಪೋಟಿಯನ್ನು ಪ್ರಸ್ತುತ ಕಾಫಿ ಉದ್ಯಮ ಎದುರಿಸಬೇಕಾಗಿಲ್ಲ. ಆದರೂ ಸಹ ಬೆಲೆ ಕುಸಿತ ತೀವ್ರವಾಗಿದೆ. ರಾಷ್ಟ್ರದ ಒಟ್ಟಾರೆ ರಾಷ್ಟ್ರೀಯ ಉತ್ಪನ್ನಕ್ಕೆ (ಜಿ.ಎನ್.ಪಿ) ಕಾಫಿಯ ಕೊಡುಗೆ ತೀರಾ ಸಣ್ಣದು. ಶೇ.0.9 ಮಾತ್ರ. ಆದರೂ ರಾಜ್ಯಗಳಲ್ಲಿ ಅಲ್ಲಿನ ಆರ್ಥಿಕತೆಗಾಗಿ




ಜಗತ್ತಿನ ಸುಮಾರು 50 ಕ್ಕೂ ಹೆಚ್ಚು ರಾಷ್ಟ್ರಗಳು ಪ್ರಮುಖವಾಗಿ ದಕ್ಷಿಣ ಅಮೇರಿಕಾ, ಆಫ್ರಿಕಾ ಹಾಗೂ ಏಷ್ಯಾ ರಾಷ್ಟ್ರಗಳಲ್ಲಿ ಬೆಳೆಯಲಾಗುವ ಈ ಬೆಳೆಯು ಅತ್ಯಂತ ಕೈಗಾರಿಕೀಕೃತ ರಾಷ್ಟ್ರಗಳಾದ ಅಮೇರಿಕಾ, ಯುರೋಪ್ ಹಾಗೂ ಜಪಾನಿನ ಮಾರುಕಟ್ಟೆಯನ್ನೇ ಅವಲಂಬಿಸಿದೆ. ಜಗತ್ತಿನ ಶೇ.60ರಷ್ಟು ಬಳಕೆಯನ್ನು ಈ ರಾಷ್ಟ್ರಗಳು ಹೊಂದಿವೆ. ಆದರೆ ಈ ರಾಷ್ಟ್ರಗಳಲ್ಲಿ ಈ

ಇದರ ಕೊಡುಗೆ ಮಹತ್ತರವಾಗಿದೆ. ರಾಷ್ಟ್ರದಲ್ಲಿ ಅತೀ ಹೆಚ್ಚು ಕಾಫಿ ಉತ್ಪಾದಿಸುವ ಕರ್ನಾಟಕದ ಆಂತರಿಕ ನಿವ್ವಳ ಉತ್ಪನ್ನದ ಶೇ.3ರಿಂದ 4ರಷ್ಟು.

ರಾಷ್ಟ್ರದ ದಕ್ಷಿಣದ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳಗಳಲ್ಲಿ ಅಂದಾಜು 50 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಒದಗಿಸಿದೆ. ಕಾಫಿ

ಪುಟ 8 ಕ್ಕೆ

ಪ್ಲಾಂಟೇಷನ್ ಕಾರ್ಮಿಕ ಕಾಯ್ದೆ ರಾಷ್ಟ್ರದಲ್ಲಿರುವ ಜಾರಿಯಾಗದ ಕಾನೂನು



ಅಖಿಲ ಭಾರತ ಪ್ಲಾಂಟೇಷನ್ ವರ್ಕರ್ ಫೆಡರೇಷನ್ (ಎ.ಐ.ಪಿ.ಡಬ್ಲ್ಯು.ಎಫ್)ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಪಿ.ಲಾಲಾಜಿ ಬಾಬು ರವರೊಂದಿಗೆ ಮಾತನಾಡಿದಾಗ ಪ್ಲಾಂಟೇಷನ್ ಕಾರ್ಮಿಕರ ಬದುಕಿನ ಬಗ್ಗೆ ಅವರು ವಿವರಿಸಿದ್ದು ಹೀಗೆ.

"1981 ರಲ್ಲೇ ಪ್ಲಾಂಟೇಷನ್ ಕಾರ್ಮಿಕರ ಕಾನೂನನ್ನು ರಾಷ್ಟ್ರದ ಸಂಸತ್ತು ರೂಪಿಸಿದೆ. ಈ ಕಾನೂನು ಕಾರ್ಮಿಕರಿಗೆ ವಸತಿ, ನೈರ್ಮಲ್ಯ, ಕುಡಿಯುವ ನೀರು, ವೈದ್ಯಕೀಯ ಸೌಲಭ್ಯ, ಕ್ಯಾಂಟೀನ್, ಕ್ರೇಚ್, ಮಕ್ಕಳಿಗೆ ಪ್ರಾಥಮಿಕ ಶಾಲೆ ಮುಂತಾದ ಸೌಲಭ್ಯಗಳನ್ನು ಒದಗಿಸ ಬೇಕೆಂಬುದೆ. ಆದರೂ ಸಹ ಅನೇಕ ರಾಜ್ಯಗಳಲ್ಲಿ ಇದಕ್ಕೆ ಪೂರಕ ನಿಯಮಾವಳಿಗಳನ್ನು ಕಾರ್ಮಿಕರ ಹೋರಾಟ ಮೂಡಿಬರುವ ಮುನ್ನ ಸಂಬಂಧಿತ ರಾಜ್ಯಗಳು ರೂಪಿಸಲೇ ಇಲ್ಲ. ಉದಾಹರಣೆಗೆ ಕರ್ನಾಟಕದಲ್ಲಿ 1956 ರವರೆಗೆ ನಿಯಮಾವಳಿ ಗಳನ್ನು ರೂಪಿಸಿಯೇ ಇರಲಿಲ್ಲ. ನಿಯಮಾವಳಿ ಗಳನ್ನು ರೂಪಿಸಿದರೂ ಸಹ ಅನೇಕ ರಾಜ್ಯಗಳಲ್ಲಿ ಇಂದೂ ಸಹ ಪರಿಸ್ಥಿತಿ ಸುಧಾರಿಸಿಲ್ಲ.

ಇಂದಿಗೂ ಸರಿಯಾದ ಮನೆಯಿಲ್ಲದೆ, ಕೂಲಿ ಇಲ್ಲದೆ, ಮಕ್ಕಳಿಗೆ ಶಾಲೆಯಿಲ್ಲದೆ, ಇದ್ದ ಶಾಲೆಗೆ ಶಿಕ್ಷಕರಿಲ್ಲದೆ, ಸಂಡಾಸಿನ ವ್ಯವಸ್ಥೆಯಿಲ್ಲದೆ ತೋಟ ಕಾರ್ಮಿಕರ ಬದುಕು ಬವಣೆಯಾಗಿದೆ.

ಈ ಕಲ್ಯಾಣ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಜಾರಿಗೆ ತರಲು ಅಗತ್ಯವಿರುವ ತಿದ್ದುಪಡಿಗಳನ್ನು ಕಾಯ್ದೆಗೆ ರೂಪಿಸಲು 10 ವರ್ಷಗಳ ಹಿಂದೆ ಒಂದು ತಿದ್ದುಪಡಿ ಮಸೂದೆಯನ್ನು ಪ್ಲಾಂಟೇಷನ್ ಕಾರ್ಮಿಕರ ಕಾಯ್ದೆಗೆ ಲೋಕಸಭೆ ಅಂಗೀಕರಿಸಿದೆ. ಆದರೆ ಲೋಕಸಭೆ ಅಂಗೀಕರಿಸಿದ ಮಸೂದೆಯನ್ನು ರಾಜ್ಯಸಭೆಗೆ ಕಳುಹಿಸದೆ ತಿದ್ದುಪಡಿ ಮಸೂದೆ ಲ್ಯಾಪ್ಸ್ (LAPS) ಆಗಿದೆ. ಈ ರೀತಿಯ ಕಾಳಜಿ ಸರ್ಕಾರದ್ದಾಗಿದೆ. ಪರಿಣಾಮವಾಗಿ ಮಾಲೀಕರ ಕರುಣೆಯ ಕೃಪೆಗೆ ಕಾರ್ಮಿಕರನ್ನೂ ದೂಡಲಾಗಿದೆ. ಇಂದೂ ಸಹ ಉತ್ತರಭಾರತದಲ್ಲಿ ದಕ್ಷಿಣ ಭಾರತಕ್ಕಿಂತ ಕೂಲಿ ಕಡಿಮೆ ಇದೆ. ಆದರೆ ದಕ್ಷಿಣ ಕರ್ನಾಟಕದಲ್ಲಿನ ಬೆಲೆ ಜೀವನ ಮಟ್ಟ ಹೋಲಿಸಿದರೆ ಕೂಲಿ ಏನೇನೂ ಸಾಲದು.

ಆಸ್ಸಾಂನಂತಹ ಪ್ರದೇಶಗಳಲ್ಲಿ ಮಾಲೀಕರ ಗೂಂಡಾಗಳು ಅಲ್ಲದೇ ಐ.ಎನ್.ಟಿ.ಯು.ಸಿ ಯಂತಹ ಮಾಲೀಕರ ಪರ ಕಾರ್ಮಿಕ ಸಂಘಟನೆಗಳ ಧಾಳಿ ದಬ್ಬಾಳಿಕೆಗಳ ನಡುವೆಯೂ ಎ.ಐ.ಪಿ.ಡಬ್ಲ್ಯು.ಎಫ್ ಅಚಲವಾಗಿ ಹೋರಾಟದ ಕಣದಲ್ಲಿ ನಿಂತಿದೆ. ಇತ್ತೀಚಿಗೆ ಕನಿಷ್ಠ ಕೂಲಿಯ ಹೆಚ್ಚಳಕ್ಕಾಗಿ ಹೋರಾಟ ನಡೆದು ಸರ್ಕಾರ ಆದೇಶ ಹೊರಡಿಸಿದ್ದರೂ ಸಹ ಅದು ಜಾರಿಯಾಗದಂತೆ ಅಲ್ಲಿನ ಐ.ಎನ್.ಟಿ.ಯು.ಸಿ ಪರ ಸಂಘಟನೆ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡಿದೆ. 1999ರಲ್ಲಿ ಆಸ್ಸಾಂನ ಮೋನ್‌ರಾಯ್ ಟಿ ಎಸ್ಟೇಟಿನ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾಂ.ಸೀತಾ ಮರಾಡಿ ಐ.ಎನ್.ಟಿ.ಯು. ನೀತಿ ವಿರುದ್ಧ ಹೋರಾಟಕ್ಕೆ ಇಳಿದು ಮಾಲೀಕರಿಂದ ಕನಿಷ್ಠ ಕೂಲಿ ಪಡೆಯಲು ಸಾಧ್ಯವಾಗಿದೆ. ಇದನ್ನು ಸಹಿಸಿದ ಮಾಲೀಕರ ಪರ ಭಯೋತ್ಪಾದಕರು ಹಾಗೂ ಐ.ಎನ್.ಟಿ.ಯು.ಸಿ ಗೂಂಡಾಗಳು ಕಾಂ.ಸೀತಾ ಮರಾಡಿ ಹಾಗೂ ಇತರೆ ಇಬ್ಬರು ಮಹಿಳಾ ಸಂಗಾತಿಗಳು ಸಭೆ ಮುಗಿಸಿ ಮನೆಗೆ ಹಿಂತಿರುಗುತ್ತಿರುವಾಗ ಗುಂಡಿಟ್ಟು ಕೊಂದಿದ್ದಾರೆ. ಈ ಗೂಂಡಾಗಿರಿಯ ವಿರುದ್ಧ ವ್ಯಾಪಕ ಪ್ರತಿಭಟನೆಯನ್ನು ಆಸ್ಸಾಂನ ಉದ್ದಗಲಕ್ಕೂ ನಡೆಸಲಾಗಿದೆ.

ಪ್ರಸ್ತುತ ಉದಾರೀಕರಣ ಆಧಾರಿತ ಸುಧಾರಣೆಗಳಿಂದಾಗಿ ತರಲಾಗುತ್ತಿರುವ ಕಾರ್ಮಿಕ ಕಾನೂನುಗಳ ಸುಧಾರಣೆಯು ತೋಟ ಕಾರ್ಮಿಕರ ಹಕ್ಕನ್ನು ಕಸಿಯಲಿವೆ. ಅಂತೆಯೇ ಉದಾರೀಕರಣ ಆಧಾರಿತ ಮುಕ್ತ ಆಮದು ನೀತಿಯು ತೋಟ ಕೈಗಾರಿಕೆಯನ್ನು ಸರ್ವನಾಶದೆಡೆಗೆ ದೂಡಲಿದೆ. ಇದರ ವಿರುದ್ಧ ಪ್ಲಾಂಟೇಷನ್ ಉಳಿಸಿ- ಕಾರ್ಮಿಕರನ್ನು ರಕ್ಷಿಸಿ ಎಂಬ ಘೋಷಣೆಯಡಿಯಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳನ್ನು ಒಂದುಗೂಡಿಸಿ ಕಾರ್ಮಿಕರ ಐಕ್ಯತೆಯನ್ನು ಬೆಸೆದು ನಿರ್ಣಾಯಕ ಹೋರಾಟಕ್ಕಿಳಿಯುವುದೇ ಉಳಿದಿರುವ ದಾರಿ. ಈ ಹೋರಾಟಕ್ಕೆ ಪ್ಲಾಂಟರುಗಳೂ ಸಹ ಬೆಂಬಲ ನೀಡಬೇಕಿದೆ. ಈ ನಿಟ್ಟಿನಲ್ಲಿ ಒಂದು ಗುಣಾತ್ಮಕ ಬದಲಾವಣೆ ಪರಿಸ್ಥಿತಿಯಲ್ಲಿ ಉಂಟಾಗುತ್ತದೆ. ನಮ್ಮ ಘೋಷಣೆಗೆ ಎಲ್ಲಾ ವಿಭಾಗದ ಜನ ಸ್ಪಂದಿಸುತ್ತಿದ್ದು ಪ್ರತಿಕ್ರಿಯಿಸಿ ಬೆಂಬಲಿಸುತ್ತಿದ್ದಾರೆ ಎನ್ನುತ್ತಾರೆ ಕಾಂ. ಲಾಲಾಜಿ. ○


ಚಿಕ್ಕಮಗಳೂರಿನಲ್ಲಿ 8ನೇ ಅಖಿಲಭಾರತ ಸಮ್ಮೇಳನ

ಪ್ಲಾಂಟೇಷನ್ ಕಾರ್ಮಿಕರ 8ನೇ ಅಖಿಲಭಾರತ ಸಮ್ಮೇಳನವು ಕರ್ನಾಟಕದ ಕಾಫಿ ತೊಟ್ಟಿಲಾದ ಚಿಕ್ಕಮಗಳೂರಿನಲ್ಲಿ ಡಿಸೆಂಬರ್ 26 ರಿಂದ 28ರವರೆಗೆ ಅಭೂತಪೂರ್ವವಾಗಿ ನಡೆಯುತ್ತಿದೆ. ಸಮ್ಮೇಳನಕ್ಕೆ ಸಕಲ ಸಿದ್ಧತೆ ನಡೆಸಿರುವ ಚಿಕ್ಕಮಗಳೂರಿಗೆ ತೋಟ ಕಾರ್ಮಿಕರ ಚಳುವಳಿಯ 50 ವರ್ಷದ ಅನುಭವವಿದೆ.

ಮೊಟ್ಟ ಮೊದಲ ಬಾರಿಗೆ ಕರ್ನಾಟಕದಲ್ಲಿ ಕೆಂಬಾವುಟದ ಅಡಿ ಕೊಡಗಿನಲ್ಲಿ ಮೊದಲ ಪ್ಲಾಂಟೇಷನ್ ಕಾರ್ಮಿಕರ ಸಂಘ ಸ್ಥಾಪಿಸಲ್ಪಟ್ಟಿದ್ದರೂ 1956 ರಲ್ಲಿ ಕರ್ನಾಟಕ ಪ್ರೊವೆನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಚಿಕ್ಕಮಗಳೂರು ಮತ್ತು ಹಾಸನದಲ್ಲಿ ಸಂಘಟಿಸಲ್ಪಟ್ಟಿತು. ಹಾಸನದ ಕಾಡುಮನೆ ಎಸ್ಟೇಟ್‌ನಲ್ಲಿ ಅಂದು ದುಡಿಯುತ್ತಿದ್ದ 2000 ಕಾರ್ಮಿಕರಲ್ಲಿದ್ದ ತಮಿಳುನಾಡು ಮೂಲಕ ಕಾರ್ಮಿಕರು 1952 ರಲ್ಲಿ ಮೈಸೂರು ಶಾಸನ ಸಭೆಗೆ ಆಯ್ಕೆಯಾಗಿದ್ದ ಕಾಂ.ಕೆ.ಎಸ್ ವಾಸನ್ ಕೋಲಾರ ಚಿನ್ನದ ಗಣಿಯ ಕಾರ್ಮಿಕ ಮುಖಂಡರನ್ನು ಸಂಪರ್ಕಿಸಿ ಆ ಮೂಲಕ ಮೊಟ್ಟಮೊದಲ ಬಾರಿಗೆ 1956 ರಲ್ಲಿ ಅವರ ನೇತೃತ್ವದಲ್ಲಿ ಮೊದಲ ತೋಟ ಕಾರ್ಮಿಕರ ಸಂಘವನ್ನು ರಚಿಸಿದರು. ಅದು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗೆ ಪಸರಿಸಿತು.

ನಂತರ 1951 ರಲ್ಲಿ ಕೇಂದ್ರ ಸರ್ಕಾರ ಪ್ಲಾಂಟೇಶನ್ ಕಾಯಿದೆಯನ್ನು ಜಾರಿಗೊಳಿಸಿತು. ಸಂಘ ರಚಿತವಾದ ಬಳಿಕ ಇಲ್ಲಿದ್ದ ಕಂಗಾಣಿ ಪದ್ಧತಿಯನ್ನು 1958 ರಲ್ಲಿ ನಿರ್ಮೂಲನ ಮಾಡಲಾಯ್ತು. ನಂತರ ತೋಟದ ಮಾಲೀಕರಗಳು ತಮಗೆ ಬೇಕಾದಲ್ಲಿ ತಾವೇ ನೇರವಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದರು. ಮೇಸ್ತ್ರಿಗಳು, ದಲ್ಲಾಳಿಗಳು ಮತ್ತು ಲೆಕ್ಕ ಬರಹಗಾರರು ಕಾರ್ಮಿಕರನ್ನು ಒದಗಿಸುತ್ತಿದ್ದಾಗ ಅವರಿಗೆ 10 ರಿಂದ 15 ಶೇಕಡಾ ಕಮಿಷನ್ ಆಗಿ ಕಾರ್ಮಿಕರು ಗಳಿಸುತ್ತಿದ್ದ ವೇತನದಲ್ಲಿ ದೊರೆಯುತ್ತಿತ್ತು ಮತ್ತೆ ತಲಾ ಒಬ್ಬ ಕಾರ್ಮಿಕನಿಗೆ ಒಂದು ರೂ. 'ಟ್ರಿಪ್ಸ್' ರೀತಿಯಲ್ಲಿ ದೊರೆಯುತ್ತಿತ್ತು. ಇಂತಹ ಮೇಸ್ತ್ರಿಗಳು ಬರಹಗಾರರು, ದಲ್ಲಾಳಿಗಳು ಈಗ ಸಣ್ಣ ಪ್ರಮಾಣದ ಪ್ಲಾಂಟೇಷನ್ ಮಾಲೀಕರಾಗಿದ್ದಾರೆ.

ತೋಟದಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ಆರೋಗ್ಯ ರಕ್ಷಣೆ, ಕನಿಷ್ಟ ಕೂಲಿ, ಸಾರಿಗೆ ವ್ಯವಸ್ಥೆ, ಮಕ್ಕಳಿಗೆ ವಿದ್ಯಾಭ್ಯಾಸ ವಾಸಿಸಲು ಮನೆ ಇಂತಹ ಸೌಲಭ್ಯಗಳಿಂದ ವಂಚಿತರಾಗಿದ್ದರು. ಅನೇಕ ಕಾರ್ಮಿಕರು ಮತ್ತು ಅವರ ಕುಟುಂಬಗಳು ಮಲೇರಿಯಾ ರೋಗಕ್ಕೆ ತುತ್ತಾಗುತ್ತಿದ್ದರು. 1950 ರಲ್ಲಿ ಅನೇಕ ಕಾರ್ಮಿಕರು ಈ ರೋಗದಿಂದ ಮರಣ ಹೊಂದಿದರು. ಕಾರ್ಮಿಕರನ್ನು ಜೀತದಾಳುಗಳಂತೆ ಕಾಣುತ್ತಿದ್ದರು. ತೋಟದ ಮಾಲೀಕರು ಮತ್ತು ಅಲ್ಲಿನ ಮೇಲ್ವಿಚಾರಕರು ಕಾರ್ಮಿಕರನ್ನು ಬಡಿಯುವುದು, ಹೊಡೆಯುವುದು ಸಹಾ ನಡೆಯುತ್ತಿತ್ತು. ಸುಮಾರು 35 ವರ್ಷಗಳ ಹಿಂದೆ ಪುರುಷ ಕಾರ್ಮಿಕರಿಗೆ ಒಂದು ರೂ ಮಹಿಳಾ ಕಾರ್ಮಿಕರಿಗೆ 50 ಪೈಸೆ ಬಾಲ ಕಾರ್ಮಿಕರಿಗೆ ದಿನಕ್ಕೆ 36 ಪೈಸೆಯಂತೆ ಕೂಲಿ




ದೊರೆಯುತ್ತಿತ್ತು.

ಇಂತಹ ಕಠಿಣ ಪರಿಸ್ಥಿತಿಯಲ್ಲಿ ಈ ಪ್ರದೇಶದಲ್ಲಿ ನೌಕರರ ಸಂಘವನ್ನು ಸ್ಥಾಪನೆ ಮಾಡಲಾಯ್ತು. ಕುರ್ಚಿಲ್ ಕರೆ ತೋಟದ ನೌಕರರ ಚಾರಿತ್ರಿಕ ಹೋರಾಟ ತೋಟಗಾರಿಕೆ ನೌಕರಿಗೆ ಚಾಲನೆ ನೀಡಿತು. ಈ ಹೋರಾಟ ಮಾಲೀಕರ ಎದೆಯನ್ನು ನಡುಗಿಸುವಂತಾಯಿ[ತು] ಇದೇ ಹೋರಾಟ ಮುಂದೆ ಪ್ಲಾಂಟೇಷನ್ ಕಾರ್ಮಿಕರ ಕಾಯ್ದೆಗೂ ಕನಿಷ್ಟ ವೇ[ತನ] ಬೋನಸ್, ಗ್ರ್ಯಾಚುಟಿ ಮತ್ತು ಇಟ್ಟಿಮೇಜೆನ್ ವಿರುದ್ಧ ತುರ್ತುಪರಿಸ್ಥಿತಿ ವಿರುದ್ಧ, ಗುಂಡುರಾಯ[ರ] ಗೂಂಡಾ ಆಡಳಿತದ ವಿರುದ್ಧ ಅಲ್ಲದೇ ಅನೇ[ಕ] ಸೌಹಾರ್ದತೆಯುತ ಹೋರಾಟಗಳನ್ನು ನಡೆಸುವುದರ ಮೂಲಕ ಈ ಪ್ರದೇಶದ[ಲ್ಲಿ] ಚಳುವಳಿ ಬೆಳೆಯುವಂತಾಯಿತು. ಈ ಚಳುವಳಿಯಲ್ಲಿ ನಮ್ಮ ಅನೇಕ ನಾಯಕರು ಮತ್ತು ಕಾರ್ಯಕರ್ತರನ್ನು ಜೈಲಿಗೆ ದಬ್ಬಲಾಯಿತು ಕೆಲವರನ್ನು ಕೊಂದು ಹಾಕಿದರು ಮಾಲೀಕರು ಮತ್ತು ಸರ್ಕಾರ.

ಬಿಕ್ಕಟ್ಟಿನಲ್ಲಿ ಪ್ಲಾಂಟೇಷನ್ ಉದ್ದಿಮೆ....

ಪುಟ 7ರಿಂದ

ತೋಟಗಾರಿಕೆ ಪ್ರದೇಶದ ವಿಸ್ತೀರ್ಣವು ವರ್ಷದಿಂದ ವರ್ಷಕ್ಕೆ ಹೆಚ್ಚಿದೆ. ಕರ್ನಾಟಕದ ಕೊಡುಗೆ ಭಾರತದ ಉತ್ಪಾದನೆಯಲ್ಲಿ ಶೇ.70 ರಷ್ಟಾಗಿದೆ. ಆಂಧ್ರಪ್ರದೇಶ, ಒರಿಸ್ಸಾ ಹಾಗೂ ಉತ್ತರ ಪೂರ್ವದ ರಾಜ್ಯಗಳಲ್ಲೂ ಸಹ ಸ್ವಲ್ಪ ಪ್ರಮಾಣದ ಕಾಫಿಯನ್ನು ಬೆಳೆಯಲಾಗುತ್ತಿದೆ. ಕಾಫಿಯ ಆಂತರಿಕ ಬಳಕೆಯು ಪ್ರಮುಖ ಉತ್ಪಾದಕ ರಾಜ್ಯಗಳಾದ ತಮಿಳುನಾಡು ಹಾಗೂ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದೆ. ಇದೂ ಸಹ ಕ್ಷೀಣಿಸುತ್ತಿದೆ. ಒಂದೆಡೆ ಕಾಫಿ ಬೆಳೆಗಾರರು ಮಾರುವ ಕಾಫಿಗೆ ಬೆಲೆಯು ಕಡಿಮೆ ಇದ್ದು ಗ್ರಾಹಕರು ಕೊಳ್ಳುವ ಬೆಲೆಯಲ್ಲಿ ಮಾತ್ರ ಇಳಿಕೆಯಾಗಿಲ್ಲ. ಪರಿಣಾಮವಾಗಿ ಒದೆಡೆ ಕಾಫಿ ಬೆಳೆಗಾರರು ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ. ಗ್ರಾಹಕರು ಕೊಳ್ಳುವ ಕಾಫಿಗೆ ಬೆಲೆ ಮಾತ್ರ ಕಡಿಮೆಯಾಗಿಲ್ಲ ಎಂಬುದು ಉದ್ದಿಮೆ ಮೇಲಿನ ಮಾರುಕಟ್ಟೆಯ ನಿಯಂತ್ರಣವನ್ನು ತೋರುತ್ತದೆ.



ಹುತಾತ್ಮರಿಗೆ ನಮನ

ತಾಳೆ ತೋಟಗಾರಿಕೆ

ಕೇರಳ ಕ್ವಿಲಾನ್ ಜಿಲ್ಲೆಯಲ್ಲಿ 7500 ಎಕರೆ ಪ್ರದೇಶಗಳ ವಿಸ್ತೀರ್ಣದ ಸರ್ಕಾರಿ ಸ್ವಾಮ್ಯದ ತಾಳೆ ತೋಟಗಾರಿಕೆ ಭಾರತದಲ್ಲಿದೆ. ಕೇಂದ್ರ ಹಾಗೂ ಕೇರಳ ಸರ್ಕಾರದ ಜಂಟಿ ಸ್ವಾಮ್ಯದಲ್ಲಿರುವ ಈ ತೋಟದಲ್ಲಿ 1000 ಕಾರ್ಮಿಕರು ಹಾಗೂ 180 ಸಿಬ್ಬಂದಿಗಳಿದ್ದಾರೆ. ಇತ್ತೀಚೆಗೆ ಕರ್ನಾಟಕ ಹಾಗೂ ಆಂಧ್ರ ಸರ್ಕಾರವೂ ಸಹ ತಾಳೆ ಬೆಳೆಯನ್ನು ದೊಡ್ಡ ಪ್ರದೇಶದಲ್ಲಿ ಬೆಳೆಯಲು ಯತ್ನಿಸಿದೆ.

ಏಲಕ್ಕಿ ತೋಟಗಾರಿಕೆ

ಕೇರಳದ ಇಡುಕ್ಕಿ ಜಿಲ್ಲೆಯಲ್ಲಿ ಪ್ರಮುಖವಾಗಿರುವ ಏಲಕ್ಕಿ ತೋಟಗಾರಿಕೆಯು 2.50 ಲಕ್ಷ ಎಕರೆಯನ್ನು ವ್ಯಾಪಿಸಿದೆ. ತೋಟ ಕೈಗಾರಿಕೆಯಲ್ಲಿ ಪ್ರಸ್ತುತ ಬಿಕ್ಕಟ್ಟನ್ನು ಎದುರಿಸದಿರುವ ಬೆಳೆಯೆಂದರೆ ಏಲಕ್ಕಿ ಬೆಳೆಯಾಗಿದೆ. ಆದರೂ ಸಹ ತೋಟದ ಮಾಲೀಕರು ಈ ತೋಟದ ಕಾರ್ಮಿಕರಿಗೆ ಸರಿಯಾದ ಸಂಬಳವನ್ನಾಗಲೀ, ಬೋನಸ್‌ನ್ನಾಗಲಿ ನೀಡಲು ಸಿದ್ಧವಿಲ್ಲ.

ಬಿಕ್ಕಟ್ಟು- ಬೆಸೆದ ಏಕತೆ

ಬೆಲೆ ಕುಸಿತ, ಆಮದಿನ ಪೈಪೋಟಿ, ಮಾರುಕಟ್ಟೆ ಪ್ರವೇಶಿಸಿರುವ ಬಹುರಾಷ್ಟ್ರೀಯ ಕಂಪನಿಗಳ ಸವಾಲು ಇಡೀ ಕೈಗಾರಿಕೆಯನ್ನು ಹೊಸದೊಂದು ಹಂತದ ಬಿಕ್ಕಟ್ಟಿಗೆ ದೂಡಿದೆ. ಉದಾರೀಕರಣ ನೀತಿಗಳಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಮಾರುಕಟ್ಟೆಯನ್ನು ಪ್ರವೇಶಿಸಿದ್ದು ಇಡೀ ಉದ್ದಿಮೆಯ ಬೆಲೆಯನ್ನು ನಿರ್ಧರಿಸುವ ಹಂತ ತಲುಪಿವೆ. ಉದಾಹರಣೆಗೆ ಹಿಂದೂಸ್ತಾನ್ ಲೀವರ್ ರಾಷ್ಟ್ರದಲ್ಲಿ ಉತ್ಪಾದನೆಯಾಗುವ ಶೇ.45ರಷ್ಟು ಟೀಯನ್ನು ಖರೀದಿಸುತ್ತಿದ್ದು ಇಡೀ ಟೀ ಮಾರುಕಟ್ಟೆಯನ್ನು ನಿಯಂತ್ರಿಸುವ ಗುತ್ತೇದಾರಿ ಕಂಪನಿಯಾಗಿದ್ದು ಅಂತೆಯೇ ಬ್ರೂಕ್ ಬಾಂಡ್, ನೆಸ್ಲೇ, ಹಿಂದೂಸ್ಥಾನ್ ಲೀವರ್ ಲಿಮಿಟೆಡ್, ಟಾಟಾ ಮುಂತಾದ ಬಹುರಾಷ್ಟ್ರೀಯ ಕಂಪನಿಗಳು ಕಾಫಿ ಉದ್ದಿಮೆಯ ಮಾರುಕಟ್ಟೆಯನ್ನು ನಿಯಂತ್ರಿಸುತ್ತಿದ್ದು ಬೆಳೆಗಾರರನ್ನು ಆ ಮೂಲಕ ಕಾರ್ಮಿಕರನ್ನು ಒಟ್ಟಾರೆಯಾಗಿ ತೋಟಗಾರಿಕೆಯನ್ನು ಬಿಕ್ಕಟ್ಟಿಗೆ ಸಿಲುಕಿಸಿವೆ. ಈ ಬಿಕ್ಕಟ್ಟಿನಿಂದ ಹೊರಬರಲು ಒಂದೆಡೆ ಮಾಲೀಕರ ಸಂಘಟನೆಗಳೇ ಹೋರಾಟಕ್ಕೆ ಇಳಿದಿರುವಾಗ ಕಾರ್ಮಿಕ ಸಂಘಟನೆಗಳು ಅಭೂತಪೂರ್ವ ಏಕತೆ ಬೆಸೆಯುವ ನಿಟ್ಟಿನಲ್ಲಿ ಪ್ರಸ್ತುತ ವರ್ಷದ ಡಿಸೆಂಬರ್‌ನಲ್ಲಿ ಪ್ರಮುಖವಾಗಿ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ಐ.ಎನ್.ಟಿ.ಯು.ಸಿ, ಹೆಚ್.ಎಂ.ಎಸ್ ಮತ್ತು ಇತರೆ ಸ್ವತಂತ್ರ ಟಿ ತೋಟಗಾರಿಕೆಯಲ್ಲಿನ ಸಂಘಗಳು ಸಮಾವೇಶ ನಡೆಸಿವೆ. ಜಂಟಿ ಘೋಷಣೆಯನ್ನು ಬಿಡುಗಡೆ ಮಾಡಿವೆ. ಮುಂಬರುವ ದಿನಗಳಲ್ಲಿ ಸಹಿಸಂಗ್ರಹ, ಪಾರ್ಲಿಮೆಂಟ್ ಚಲೋ ನಡೆಸಲು ಮುಂದಾಗಿವೆ.

ನೂರು ಗ್ರಾಂ ಕಾಫಿ ಕೊಂಡರೆ ನೂರು ಗ್ರಾಮ್ ಸಕ್ಕರೆ ಉಚಿತ

ಇದು ಬೆಂಗಳೂರಿನ ಅನೇಕ ಅಂಗಡಿಗಳ ಮುಂದಿರುವ ಬ್ಯಾನರ್‌ಗಳಲ್ಲಿರುವ ಬರಹ ಕಾಫಿ ಉದ್ದಿಮೆ ಬಿಕ್ಕಟ್ಟು ಎಷ್ಟಿದೆ ಎಂದರೆ ನೂರು ಗ್ರಾಂ ಕಾಫಿ ಕೊಂಡರೆ ನೂರು ಗ್ರಾಂ ಸಕ್ಕರೆ ಉಚಿತವಾಗಿ ನೀಡುವ ಪರಿಸ್ಥಿತಿ ತಲುಪಿದೆ. ಆಮದು ನೀತಿ, ಜಾಗತೀಕರಣ, ಕಾಫಿ ಬೆಲೆಗಳನ್ನು ಹೆಚ್ಚಿಸಲಿವೆ. ವಿಶ್ವ ಮಾರುಕಟ್ಟೆಯಲ್ಲಿ ಮಾರಾಟವಾಗಲಿದೆ ನಮ್ಮ ಕಾಫಿ ಹೆಚ್ಚಲಿದೆ ಲಾಭ ಎಂದು ಉದಾರೀಕರಣ ನೀತಿಗಳನ್ನು ಬೆಂಬಲಿಸಿದ ಮಾಲೀಕರು ಇಂದು ಈ ಹಂತ ತಲುಪಿದ್ದಾರೆ. ಇಂದಾದರೂ ಎಚ್ಚೆತ್ತರೆ ಒಳಿತಲ್ಲವೆ?

ಗ್ರಾಬ್ ಎ ಕಪ್ --- ಚಲ್ತೆ ಚಲ್ತೆ

ಸೀಮಿತಗೊಳ್ಳುತ್ತಿರುವ ಕಾಫಿ ಬಳಕೆದಾರರ ಪ್ರಮಾಣವನ್ನು ಹೆಚ್ಚಿಸಲು ಕಾಫಿ ಕುಡಿಯುವವರ ಸಂಖ್ಯೆಯನ್ನು ವ್ಯಾಪಕಗೊಳಿಸಲು ಎಲ್ಲೆಂದರಲ್ಲಿ ಪ್ರತಿಯೊಂದು ಅಂಗಡಿಗಳಲ್ಲಿ ಸಣ್ಣ-ಸಣ್ಣ ಪುಟ್ಟದೊಂದು ಯಂತ್ರದಂತಹ ಡಬ್ಬ ಇರಿಸಿ ಕೊಳ್ಳಿ ಟಾಟಾ ಕಾಫಿ ನಡೆಯುತ್ತಲೇ ಬಂದು ಕಪ್ ಹಿಡಿದು ಕುಡಿಯಿರಿ' ಎಂಬ ಬಹುರಾಷ್ಟ್ರೀಯ ಕಂಪನಿಗಳ ಹೊಸ ಕಾಫಿ ವಿತರಣಾ ವ್ಯವಸ್ಥೆ ದೇಶವನ್ನೆಲ್ಲ ವ್ಯಾಪಿಸುತ್ತಿದೆ. ಈ ಬಹುರಾಷ್ಟ್ರೀಯ ಕಂಪನಿಗಳ ಹಿಡಿತವೇ ಕಾಫಿ ಬೆಲೆ ಕುಸಿತಕ್ಕೆ ತೋಟ ಮಾಲೀಕರ ಸಂಕಷ್ಟಕ್ಕೆ ಕಾರಣವಾಗಿರುವಾಗ ಕಾಫಿ ಪ್ರಚಾರ ಮಾಡಲು ಎಂತೆಲ್ಲಾ ತಂತ್ರ ಸ್ಟವ್ ಬೇಡ, ಹಾಲು ಬೇಡ, ಕಾಫಿ ಮಾಡುವ ಭಿಸ್ತರು ಬೇಡ ಕಪ್ ಇಟ್ಟು ಗುಂಡಿ ಅದುಮಿದರೆ ಬರುತ್ತದೆ. ಲೋಟದ ತುಂಬ ಕಾಫಿ. ಅದರೆ ಕೊಡ ಬೇಕು ಕೇವಲ 5 ರೂಪಾಯಿ' ಹೇಗಿದೆ? ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಯ ತಂತ್ರ! ಇದು ಆಂತರಿಕ ಮಾರುಕಟ್ಟೆಯನ್ನು ಬೆಳೆಸೀತೆ?

ಜಾಗತೀಕರಣ ಹಿಮ್ಮೆಟ್ಟಿಸುವ ಮುಖ್ಯ ಜವಾಬ್ದಾರಿ ಕಾರ್ಮಿಕ ವರ್ಗದ್ದು

ಡಾ. ಎಂ.ಕೆ.ಪಂಧೆ



ಕಾರ್ಮಿಕರು ತೀವ್ರ ಸಂಕಷ್ಟ ಎದುರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ತೋಟ ಕಾರ್ಮಿಕರ ಕಾಯ್ದೆಗೆ ತಿದ್ದುಪಡಿ ತರುವಂತೆ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಆಗ್ರಹಿಸಿದರು.

ಕಾಂ. ಸೂರಿ ನಗರದ ವಿಮಲಾ ರಣದಿವೆ ವೇದಿಕೆಯಲ್ಲಿ ನಗರದ ತೇರಾಪಂಥ್ ಭವನದಲ್ಲಿ ಅಖಿಲ ಭಾರತ ತೋಟ ಕಾರ್ಮಿಕರ ಒಕ್ಕೂಟ (ಎಐಪಿಡಬ್ಲ್ಯುಎಫ್)ದ ವತಿಯಿಂದ ಆರಂಭವಾದ ಮೂರು ದಿನಗಳ ತೋಟ ಕಾರ್ಮಿಕರ 8ನೇ ಅಖಿಲ ಭಾರತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಅತ್ಯಂತ ಹೀನಾಯ ಸ್ಥಿತಿಯಲ್ಲಿರುವ ಕಾರ್ಮಿಕರ ರಕ್ಷಣೆಗೆ ಮುಂದಾಗುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಕಾರ್ಮಿಕರ ಇಂದಿನ ದುಸ್ಥಿತಿಗೆ ಹಲವು ಕಾರಣಗಳನ್ನು ತೆರೆದಿಟ್ಟ ಅವರು, ಕೇಂದ್ರದ ಎನ್.ಡಿ.ಎ. ಸರ್ಕಾರ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ಮುಂದಾಗಿದೆ. ಸರ್ಕಾರಕ್ಕೆ 88 ಸಾವಿರ ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿರುವ ಖಾಸಗಿ ಕೈಗಾರಿಕೆಗಳು ಕಳೆದ ಮೂರು ವರ್ಷಗಳಿಂದ 1.52 ಸಾವಿರ ಕೋಟಿ ರೂಪಾಯಿ ತೆರಿಗೆ ಕಟ್ಟಬೇಕಿದೆ. ಹೀಗಿದ್ದರೂ ಸಾರ್ವಜನಿಕ ಉದ್ದಿಮೆಗಳನ್ನು ಕೊಳ್ಳಲು ಅವು ಸಾಲುಗಟ್ಟಿ ನಿಲ್ಲುತ್ತವೆ. ಅವುಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುತ್ತಿಲ್ಲ ಎಂದು ದೂರಿದರು.

ಜಾಗತಿಕರಣದ ಈ ಅಸಮರ್ಪಕ ಮಾರುಕಟ್ಟೆ ಪೈಪೋಟಿಯಿಂದಾಗಿ ಮಾಲಿಕರು ಕಾರ್ಮಿಕರಿಗೆ ಕೊಡುವ ಕೂಲಿಯಲ್ಲಿ ಕಡಿತ ತಂದು ತೋಟ ಕಾರ್ಮಿಕರ ಜೀವನವನ್ನು ಕಷ್ಟಕ್ಕೆ ತಳ್ಳಿದ್ದಾರೆ. ಕಾರ್ಮಿಕರ ಜೀವನ ಮಟ್ಟವನ್ನು ಹೆಚ್ಚಿಸಲು ಯಾವುದೇ ವಿಧವಾದ ಸಂಬಳದ ಹೆಚ್ಚಳವನ್ನು ಮಾಲಕರು ವಿರೋದಿಸುತ್ತಾರೆ. ಈ ಕಾರಣದಿಂದಾಗಿ ಕಾರ್ಮಿಕರ ಜೀವನ ಮಟ್ಟವು ಕಡಿಮೆಯಾಗುತ್ತಿದೆ. ಮತ್ತೊಂದು ಅಂಶದ ಬಗ್ಗೆ ನಾವು ಗಮನ ಹರಿಸಬೇಕು ಅದೇನೆಂದರೆ ನಮ್ಮ ತೋಟಗಳಲ್ಲಿ ಉತ್ಪಾದನೆಯು ಕಡಿಮೆ ಯಾಗಿರುವುದು. ಇದಕ್ಕೆ ಕಾರಣ ಹಳೆಯ ಗಿಡಗಳಿಂದ ಕಳೆದ ಹಲವಾರು ವರ್ಷಗಳಿಂದ ಹೊಸ ಗಿಡಗಳನ್ನು ಪರಿವರ್ತಿಸುವ ಕೆಲಸವೆ ನಡೆದಿಲ್ಲ. ಕಾಫಿ ಮತ್ತು ಟೀ ತೋಟ ಕಾರ್ಮಿಕರ ಮನೆಗಳು ಬಹಳ ಹೀನಾಯ ಸ್ಥಿತಿಯಲ್ಲಿದೆ. ಇವರಿಗೆ ಕುಡಿಯುವ ನೀರು ಒದಗಿಸಲು ಇಂದು ಅಸಮರ್ಪಕವಾಗಿದೆ. ಇವರ ಮಕ್ಕಳ ವಿದ್ಯಾಭ್ಯಾಸದ ಅನುಕೂಲಗಳು ಕೂಡ ಬಹಳ ಹೀನಾಯಸ್ಥಿತಿಯಲ್ಲಿದೆ. ಒಂದು ಕಡೆ ಕಾಫಿ ಮತ್ತು ಟೀ ಕೈಗಾರಿಕೆಯಲ್ಲಿ ಜಾಗತಿಕ ರಣದ ಪ್ರಭಾವದಿಂದ ಹಿನ್ನಡೆ , ಮತ್ತೊಂದು ಕಡೆ ಬಹಳ ಹೆಚ್ಚಿನ ಲಾಭಕೋರತನ.

ಜಾಗತೀಕರಣ ವಿರೋಧಿಸಿ: ಈ ಕೈಗಾರಿಕೆಯನ್ನು ಉಳಿಸುವಲ್ಲಿ ಮತ್ತು ಈ ಕೈಗಾರಿಕೆಯ ಕಾರ್ಮಿಕರ

ಮನಸೋ ಇಚ್ಛೆ ಶೋಷಣೆಗೆ ಮಾಲೀಕರ ಇರಾದೆ ಒಪ್ಪಲಾಗದು

ಜೀವನ ಮಟ್ಟ ಸುಧಾರಿಸುವಲ್ಲಿ ನಮ್ಮ ಈ ಒಕ್ಕೂಟ ಐಕ್ಯ ಹೋರಾಟಗಳನ್ನು ರೂಪಿಸಬೇಕು. ಪ್ಲಾನ್‌ಟೇಶನ್ ಕಾರ್ಮಿಕರು ಈ ದೇಶದ ಒಟ್ಟು ಕಾರ್ಮಿಕರ ಒಂದು ಭಾಗ ಹಾಗಾಗಿ ಜಾಗತಿಕರಣದ ದುಷ್ಪರಿಣಾಮಗಳು ಇವರ ಮೇಲೆಯೆ ಎರಗಿರುತ್ತದೆ. ಲಾಭಕೋರತನವನ್ನೆ ತನ್ನ ಧ್ಯೇಯವನ್ನಾಗಿ ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳು ಒಂದು ಲಾಭದ ರೀತಿಯನ್ನು ಈ ಕೈಗಾರಿಕೆಯಲ್ಲಿ ಈ ರೀತಿ ವಿವರಿಸಬಹುದು. ರೂ. 20 ಬೆಲೆ ಇರುವ ಒಂದು ನೆಸ್‌ಕೇಫೆಯ ಪ್ಯಾಕೆಟ್‌ನಿಂದ ಇದನ್ನು ತಯಾರಿಸುವ ಕಾರ್ಮಿಕನಿಗೆ ದಕ್ಕುವುದು 50 ಪೈಸೆ ಮಾತ್ರ. ಹೀಗಿದ್ದು ಕಾರ್ಮಿಕರ ಸಂಬಳದಲ್ಲಿ ಇನ್ನೂ ಕಡಿತವಾಗಬೇಕು ಎನ್ನುವುದು ಇವರ ವಾದ. ಒಟ್ಟು ಕಾರ್ಮಿಕನಿಗೆ ಸಂದಾಯವಾಗುವ ಕೂಲಿ ಬಹಳ ಕಡಿಮೆಯಾದರೂ ಇದರಿಂದಾಗಿಯೇ ಬೆಲೆ ಹೆಚ್ಚಾಗಿದೆ ಎನ್ನುವ ವಾದವನ್ನು ಮಾಲಿಕರು ಮಂಡಿಸುತ್ತಿದ್ದಾರೆ. ಬೇರೆ ಬೇರೆ ಬಹುರಾಷ್ಟ್ರಿಯ ಕಂಪೆನಿಗಳಾದ ಬ್ರೂಕ್‌ಬಾಂಡ್, ಹಿಂದೂಸ್ತಾನ್ ಲಿವರ್ ಇವುಗಳು ಇದೆ ರೀತಿಯ ವಾದವನ್ನು ಒಡ್ಡುತ್ತಿವೆ. ಈ ರೀತಿಯ ವಾದವು ಪ್ಲಾಂಟೇಶನ್ ಕೈಗಾರಿಕೆಗೆ ಮಾತ್ರ ಸೀಮಿತವಲ್ಲ. ಇದು ಉಕ್ಕು, ನಿರ್ಮಾಣ, ಬಟ್ಟೆಯಂತಹ ಕೈಗಾರಿಕೆಗಳಿಗೂ ಅನ್ವಯವಾಗುವುದು ಹಾಗಾಗಿ ಪ್ಲಾಂಟೇಶನ್ ಕಾರ್ಮಿಕ ಈ ದೇಶದ ಕಾರ್ಮಿಕ ಚಳುವಳಿಯ ಒಂದು ಭಾಗವಾಗಬೇಕು ಇಂದು ಇಡೀ ಕಾರ್ಮಿಕ ವರ್ಗವು ಜಾಗತಿಕರಣವನ್ನು ಒಗ್ಗಟ್ಟಾಗಿ ಹಿಮ್ಮೆಟ್ಟಿಸಬೇಕು ಇದರ ಜವಾಬ್ದಾರಿ ಇಡೀ ಕಾರ್ಮಿಕರ ಮೇಲಿದೆ.

ಮೂರನೇ ಜಗತ್ತಿಗೆ ಹಿನ್ನಡೆ: ಜಾಗತಿಕರಣವೆಂದರೆ ಮೂರನೆ ಜಗತ್ತಿನ ಆರ್ಥಿಕ ಹಿನ್ನಡೆ, ಜಾಗತಿಕರಣದ ಫಲವಾಗಿ ಕಳೆದ 12 ವರ್ಷದಲ್ಲಿ ಹೊರದೇಶಗಳು ಬಂಡವಾಳ ಹೂಡಿಕೆಯಲ್ಲಿ ಶೇ. 31 ಆಹಾರದ ಕೈಗಾರಿಕೆಯಲ್ಲಿ ಆಗಿದೆ ಇದರಲ್ಲಿ ಇವರು ಬಹಳ ದೊಡ್ಡ ಲಾಭ ಸಂಪಾದಿಸುತ್ತಿದ್ದಾರೆ. ಅಂಕಲ್ ಚಿಫ್, ನೂಡಲ್, ಚಾಕಲೇಟ್ ನಂತಹ ಉತ್ಪಾದನೆಗಳು ನಮ್ಮ ಮಾರುಕಟ್ಟೆಯನ್ನು ವ್ಯಾಪಕವಾಗಿ ಒಳ ಹೊಕ್ಕಿದೆ. ಇವರ ಲಾಭವು ಒಂದೆ ವರ್ಷದಲ್ಲಿ ಶೇ. 49ರಷ್ಟು ಹೆಚ್ಚಿದೆ. ಆದರೆ ಇವರು ತಮ್ಮ ಕಂಪೆನಿಗಳಲ್ಲಿ ಕಾರ್ಮಿಕ ಸಂಘಗಳನ್ನು ತಡೆಯುತ್ತಿದ್ದಾರೆ. ಇಟಲಿ ಮತ್ತು ಸ್ವೀಡ್ಜರ್‌ಲ್ಯಾಂಡಿನಲ್ಲಿರುವ ಈ ಕಂಪೆನಿಗಳ ನೌಕರರದ್ದು ಕೂಡ ಇದೆ ರೀತಿಯ ಅನುಭವ. ಇವರಿಗೆ ಕಾರ್ಮಿಕ ಸಂಘಗಳನ್ನು ಕಟ್ಟಲು ಮಾಲಿಕರು ಬಿಡುತ್ತಿಲ್ಲ. ಇತ್ತೀಚಿನ ಕೋಕೋ ಕೋಲಾ ಕಂಪೆನಿಯ ಕಾರ್ಮಿಕರ ಒಂದು ಸಮಾವೇಶದಲ್ಲಿ ಕಾರ್ಮಿಕರು ತಮಗೆ ಕಾರ್ಮಿಕ ಸಂಘಗಳನ್ನು ಕಟ್ಟುವ ಹಕ್ಕುಗಳನ್ನು ಮೊಟಕುಗೊಳಿಸಿದ್ದಾರೆ ಎಂದು ದೂರಿದರು. ಹೊಸ ಕಾರ್ಮಿಕ ಕಾಯ್ದೆಯ ಪ್ರಕಾರ ಖಾಯಂ ಕೆಲಸ ವಿಧಾನವನ್ನು ತೆಗೆದುಹಾಕಿ ತಾತ್ಕಾಲಿಕ ಕೆಲಸ, ದಿನ ಕೂಲಿ ಕೆಲಸ, ಖಾಸಗಿ ಕೆಲಸವೆಂಬ ಹೆಸರಿನಲ್ಲಿ ಕಾರ್ಮಿಕರನ್ನು ಯಾವಾಗ ಬೇಕಾದರು ತೆಗೆದೆಸೆಯಬಹುದು. ಈ ರೀತಿಯಾದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ನಾವು ಸಂಘಟಿತ ಹೋರಾಟ ನಡೆಸಬೇಕು. ಇದರ ಹಿನ್ನೆಲೆಯಲ್ಲಿ ಮುಂದಿನ ಜನವರಿಯಲ್ಲಿ ನಾವು ಸಿ.ಐ.ಟಿಯುವಿನ ನೇತೃತ್ವದಲ್ಲಿ ರಸ್ತೆ ತಡೆ, ರೈಲು ತಡೆ, ಜೈಲ್ ತುಂಬುವ ಕಾರ್ಯಕ್ರಮಗಳನ್ನು ರೂಪಿಸಿ, ಈ ಸರ್ಕಾರದ ಜನವಿರೋಧಿ, ಆರ್ಥಿಕ ಅಭಿವೃದ್ಧಿ ವಿರೋಧಿ ನೀತಿಯನ್ನು ಸಂಘಟಿತ ಕಾರ್ಮಿಕ ಚಳುವಳಿಯ ಮೂಲಕ ತಡೆಯಲು ನಾವು ಹೋರಾಡುತ್ತಿದ್ದೇವೆ. ಎಲ್ಲಾ ಕೈಗಾರಿಕೆಗಳಲ್ಲಿ ಕೆಲಸಗಾರರ ಸಂಖ್ಯೆ ಕಡಿಮೆಯಾಗುತ್ತಿದೆ. ನಿರುದ್ಯೋಗ ಹೆಚ್ಚುತ್ತಿದೆ ಇದನ್ನು ವಿರೋಧಿಸಿ ಜನವರಿ 8 ರಂದು ಸುಮಾರು 30 ಲಕ್ಷ ಕಾರ್ಮಿಕರು ಈ ಕೇಂದ್ರ ಸರ್ಕಾರದ ಕಾರ್ಮಿಕ ವಿರೋದಿ ನೀತಿಯ ವಿರುದ್ಧ ಒಂದು ದಿನದ ಮುಷ್ಕರ ಮತ್ತು ಫೆಬ್ರವರಿ 26ರಂದ ಪಾರ್ಲಿಮೆಂಟ್ ಚಲೋ ಇದರಲ್ಲಿ ದೇಶದ ಮೂಲೆಮೂಲೆಗಳಿಂದ ಕಾರ್ಮಿಕರು ಭಾಗವಹಿಸುತ್ತಾರೆ. ಇದರ ಮೂಲಕ ಈ ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಯ ವಿರುದ್ಧ ಪಾರ್ಲಿಮೆಂಟಿನ ಮುಂದೆ ಮತ ಪ್ರದರ್ಶನ ನಡೆಸುವುದು.

ಕೋಮುವಾದೀಕರಣ : ಕಾರ್ಮಿಕರ ಮನಸ್ಸನ್ನು ಬೇರೆಡೆ ತಿರುಗಿಸಲು ಕೇಂದ್ರ ಸರ್ಕಾರ ಕಾರ್ಮಿಕ ಸಂಘಟನೆಗಳನ್ನು ಕೋಮುವಾದೀಕರಣ ಗೊಳಿಸುತ್ತಿದೆ ಎಂದು ಆರೋಪಿಸಿದ ಅವರು ಪ್ರಾದೇಶಿಕತೆ. ಮೂಲಭೂತವಾದ ಹೆಚ್ಚಿಸುವ ಇಂತಹ ಪ್ರಯತ್ನಗಳ ವಿರುದ್ಧ ಎಚ್ಚರಿಕೆ ವಹಿಸಬೇಕಿದೆ ಎಂದು ಹೇಳಿದರು. ಕಾರ್ಮಿಕರನ್ನು ಹೀನಾಯ ಸ್ಥಿತಿಗೆ ತಂದಿರುವ ಬೆಲೆ ಕುಸಿತಕ್ಕೆ ಜಾಗತೀಕರಣ ಮುಕ್ತ ಆಮದು ನೀತಿ ಕಾರಣ. ಹಿಂದೆ ಹದಿನೆಂಟೂವರೆ ರೂಪಾಯಿಗೆ ಒಂದು ಡಾಲರ್ ದೊರೆಯುತ್ತಿತ್ತು. ಆದರೆ ಈಗ 48 ರೂಪಾಯಿ ಮೌಲ್ಯದ ವಸ್ತುವನ್ನು ರಫ್ತು ಮಾಡಿದರೆ ಮಾತ್ರ ಒಂದು ಡಾಲರ್ ಪಡೆಯಲು ಸಾಧ್ಯ. ಇಂತಹ ಆರ್ಥಿಕ ಶೋಷಣೆಗಳು ಜಾಗತೀಕರಣದ ಫಲ ಎಂದು ವಿಶ್ಲೇಷಿಸಿದ ಪಂಧೆ, ಆಮದು ವಸ್ತುಗಳ ಮೇಲಿನ ನಿರ್ಬಂಧ ಸಡಿಲಿಕೆಯಿಂದ ಸ್ಥಳೀಯ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲವಾಗಿದೆ. ಅಂತರ ರಾಷ್ಟ್ರೀಯ ಚಹಾ ಮಾರುಕಟ್ಟೆಯಲ್ಲಿ ಪ್ರಮುಖ ಸಾಲಿನಲ್ಲಿದ್ದ ಭಾರತದ ಸ್ಥಾನವನ್ನು ಈಗ ಚೀನಾ, ಶ್ರೀಲಂಕಾದಂತಹ ದೇಶಗಳು ಆಕ್ರಮಿಸಿವೆ. ಆಮದಾಗುವ ಸಿಂಥೆಟಿಕ್ ರಬ್ಬರ್ ಸ್ಥಳೀಯ ರಬ್ಬರಿಗಿಂತ ಅತ್ಯಂತ ಕಡಿಮೆ ಬೆಲೆಗೆ ದೊರೆಯುತ್ತಿರುವುದರಿಂದ ರಬ್ಬರ್ ಉದ್ಯಮಕ್ಕೂ ತೀವ್ರ ಹೊಡೆತ ಬಿದ್ದಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಉತ್ತರ ಭಾಗದಲ್ಲಿ ಪಶ್ಚಿಮ ಬಂಗಾಳ, ತ್ರಿಪುರಾ, ಅಸ್ಸಾಂ ಹಾಗೂ ದಕ್ಷಿಣ ಭಾರತದಲ್ಲಿ ಕೇರಳ, ಕರ್ನಾಟಕ, ತಮಿಳುನಾಡುಗಳಲ್ಲಿ ತೋಟ ಕಾರ್ಮಿಕರು ಹೆಚ್ಚಾಗಿದ್ದಾರೆ. ಉತ್ತರಾಂಚಲ, ಹಿಮಾಲಯ ಪ್ರದೇಶ, ಆಂಧ್ರದ ಕೆಲವು ಭಾಗಗಳಲ್ಲೂ ಅಲ್ಪ ಪ್ರಮಾಣದಲ್ಲಿ ತೋಟ ಕಾರ್ಮಿಕರಿದ್ದಾರೆ. ಉತ್ತರ ಭಾಗದಲ್ಲಿನ ತೋಟಗಳು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಕೈ ಜೋಡಿಸಿರುವ ಬೃಹತ್ ಕಂಪನಿಗಳ ಹಿಡಿತದಲ್ಲಿದ್ದರೆ ದಕ್ಷಿಣದಲ್ಲಿ ಸಣ್ಣ ಪ್ರಮಾಣದಲ್ಲಿ ಬೆಳೆಗಾರರೇ ಹೆಚ್ಚು. ಈ ಹಿನ್ನೆಲೆಯಲ್ಲಿ ರಾಜ್ಯದಿಂದ ರಾಜ್ಯಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಸಮಸ್ಯೆಗಳು ಭಿನ್ನವಾಗಿವೆ. ಇದೆಲ್ಲದರ ನಡುವೆಯೂ ಏಕರೂಪದ ಪರಿಹಾರ ಸೂತ್ರ ರೂಪಿಸಲು ಸಮ್ಮೇಳನ ಮುಂದಾಗಬೇಕು ಎಂದು ಕರೆ ನೀಡಿದರು. ಮಾಜಿ ಸಂಸದ ಹಾಗೂ ಎಐಪಿಡಬ್ಲುಎಫ್ ಅಖಿಲ ಭಾರತ ಕಾರ್ಯಧ್ಯಕ್ಷ ಅನಂದ್ ಪಾಠಕ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿಗಳಾದ ಜೆ.ಹೆಮಚಂದ್ರನ್, ಅಮಲ್ ಘೋಷ್ ರಾಜ್ಯ ಪ್ರಧಾನ ಕಾರ್ಯದರ್ಶಿ ಲಾಲಾಜಿ ಬಾಬು, ಉಪಾಧ್ಯಕ್ಷ ಕೆ. ಪದ್ಮನಾಭನ್, ಸಿಐಟಿಯು ರಾಜ್ಯ ಕಾರ್ಯಾಧ್ಯಕ್ಷ ಬಿ. ಮಾಧವ, ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಕೇಂದ್ರ ಸಮಿತಿ ಕಾರ್ಯದರ್ಶಿ ಡಾ। ಹೇಮಲತಾ ಉಪಸ್ಥಿತರಿದ್ದರು.

- ಅಂತೋಣಿ

ನೂತನ ಸಮಿತಿ



ಅಧ್ಯಕ್ಷರು
ಡಾ. ಹೇಮಲತಾ

ಕಾರ್ಯಾಧ್ಯಕ್ಷರು **ಮೌಂಟ್ ಬೋಸ್**
ಉಪಾಧ್ಯಕ್ಷರು **ಬೀರನ್ ಬೋಸ್**
ಮದನ್ ದಾಸ್
ಬಿ. ಕುಂಞ ಕಣ್ಣನ್
ವಿ.ಸುಕುಮಾರ್



ಪ್ರಧಾನಕಾರ್ಯದರ್ಶಿ
ಪಿ.ಲಾಲಾಜಿ ಬಾಬು

ಕಾರ್ಯದರ್ಶಿಗಳು **ಅಜಿತ್ ಸರ್ಕಾರ್**
ಅಶಿತ್ ದತ್ತ
ಜೆ.ಹೇಮಚಂದ್ರನ್
ಪಿ.ಆರ್.ಗೋಪಾಲಕೃಷ್ಣ

ಖಜಾಂಚಿ **ಕೆ.ಪದ್ಮನಾಭನ್**

42 ಸದಸ್ಯರ ಕೇಂದ್ರ ವರ್ಕಿಂಗ್ ಕಮಿಟಿಯಲ್ಲಿ ಸದಸ್ಯರಾಗಿ ಕರ್ನಾಟಕದ ಕಾಳಯ್ಯ ಮತ್ತು ಆಂತೋಣಿಯಮ್ಮ ಆಯ್ಕೆಯಾಗಿದ್ದಾರೆ. ವಿ.ಸುಕುಮಾರ್ ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಶುಭ ಹಾರೈಕೆ

ಸಮ್ಮೇಳನಕ್ಕೆ ಶುಭ ಹಾರೈಸಿ ಮಾತನಾಡಿದ ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ। ವಿಜೆಕೆ ನಾಯರ್‌ರವರು ಕರ್ನಾಟಕದಲಿ ಪ್ಲಾಂಟೇಶನ್ ಉದ್ದಿಮೆ ಹಾಗೂ ಕಾರ್ಮಿಕರ ಆಂದೋಲನದ ಸ್ಥಿತಿಗತಿಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು, ಇಂದಿನ ಬಿಕ್ಕಟ್ಟನ್ನು ಸ್ವಲ್ಪ ಮಟ್ಟಿಗಾದರೂ ನೀಗಿಸಬಹುದಾದ ಹಲವು ಮಾರ್ಗಗಳನ್ನು ಹೇಳುತ್ತಾ ಬಹುರಾಷ್ಟ್ರೀಯ ಕಂಪನಿಗಳ ಕಾಫಿ ಉತ್ಪನ್ನಗಳಿಗೆ ಪೈಪೋಟಿ ಒಡ್ಡುವಂತೆ ಇಲ್ಲಿ ಕಡಿಮೆ ದರದಲ್ಲಿಯೂ ಉತ್ಪಾದನೆ ಮಾರ್ಗ ಕಂಡುಕೊಳ್ಳುವುದು ಆಂತರಿಕ ಬೇಡಿಕೆ ಹೆಚ್ಚಿಸಬಲ್ಲುದು ಎಂದು ಸೂಚಿಸಿದರು. 'ಕಾಫಿ ಉದ್ದಿಮೆ ಉಳಿಸಿ, ಕಾರ್ಮಿಕರನ್ನು ರಕ್ಷಿಸಿ' ಎಂಬ ಘೋಷಣೆ ಅತ್ಯಂತ ಮಹತ್ವದ್ದಾಗಿದ್ದು, ಇಡೀ ದುಡಿವ ವರ್ಗದ ಪ್ರಬಲ ಆಂದೋಲನಕ್ಕೆ ಕರೆಯಿತ್ತು ಶುಭ ಹಾರೈಸಿದರು.

ಬಾಬಾಬುಡನ್ ಗಿರಿ ....

ಪುಟ 4 ರಿಂದ

ಈಗಲೂ ಇರುವಂತಹ ಪಾದುಕೆಯಾಗಿದೆ. ಸೂಫಿ ಸಂತರು ಅನುಸರಿಸುತ್ತಿರುವುದು ಭಕ್ತಿ ಮಾರ್ಗ. ಇದಕ್ಕೂ ಹಿಂದೂ ಭಕ್ತಿ ಮಾರ್ಗಗಳಿಗೂ ಸಮನ್ವಯತೆ ಕಂಡುಬರುತ್ತದೆ.

ಹೀಗಾಗಿ ಹಿಂದೂ ಭಕ್ತಿ ಮಾರ್ಗಿಗಳು ಮುಸಲ್ಮಾನರ ಸೂಫಿಗಳು ಪರಸ್ಪರ ಸಹಕರಿಸಿ ಕೊಂಡು ಅನ್ಯೋನ್ಯವಾಗಿ ನಡೆದುಕೊಂಡು ಬಂದದ್ದು ಇತಿಹಾಸ.

ವೈದಿಕಶಾಹಿಗೆ ಜಾಗವಿಲ್ಲ

ಇದು ವೈಧಿಕ ವಿರೋಧವಾದದ್ದು. ದತ್ತ ಪಂಥ ವೈದಿಕ ವಿರುದ್ಧ ನಡೆದ ಬಂಡಾಯ. ಆದ್ದರಿಂದ ಬಾಬಾಬುಡನ್‌ಗಿರಿಯ ಕಾರ್ಯಕ್ರಮಗಳಲ್ಲಿ ವೈದಿಕ ಷಾಹಿ ಹಿಂದೂಗಳು ಹಿಂದೆಂದೂ ಭಾಗವಹಿಸು ತ್ತಿರಲಿಲ್ಲ. ಪ್ರಕೃತಿಯ ರಮ್ಯ ರಮಣೀಯವಾದ ಪ್ರದೇಶ ಬಾಬಾಬುಡನ್ ಗಿರಿಯ ಆಸುಪಾಸಿನದು. ಇದು ಕೋಮು ಸೌಹಾರ್ದದ ಸಂಕೇತ. ಇದನ್ನು ಇದ್ದಂತೆಯೇ ಉಳಿಸಿಕೊಂಡು ನಡೆಸಿಕೊಂಡು ಬರಬೇಕಾದದ್ದು ರಾಷ್ಟ್ರಭಕ್ತರೆಲ್ಲರ ಕರ್ತವ್ಯವಾಗಿದೆ. ಇದನ್ನು ಬದಲಾಯಿಸಿ ಹಿಂದೂ ದೇವಸ್ಥಾನವನ್ನಾಗಿ ಪರಿವರ್ತಿಸುವುದು ರಾಷ್ಟ್ರಘಾತುಕ ಚಟುವಟಿಕೆಯಾಗಿದೆ.

ಕಾನೂನುಬಾಹಿರ


ಇಂತಹ ರಾಷ್ಟ್ರಘಾತುಕ ಚಟುವಟಿಕೆ ಸಂಘ ಪರಿವಾರದವರಿಂದ ಕೆಲವು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅಲ್ಲಿ ಹಿಂದೆಂದೂ ಇಲ್ಲದಿದ್ದ ದತ್ತ ಜಯಂತಿ ಎಂಬ ಹಬ್ಬವನ್ನು ಕೇವಲ ಐದು ವರ್ಷಗಳ ಹಿಂದೆ ಹುಟ್ಟುಹಾಕಲಾಯಿತು. ಇಂತಹ ರಾಜ್ಯಾಂಗ ಬಾಹಿರ ಕಾನೂನು ಬಾಹಿರ ದೇಶದ್ರೋಹ ಚಟುವಟಿಕೆಗಳಿಗೆ ಕಳೆದ ಮೂರು ವರ್ಷಗಳಿಂದ ಕಾಂಗ್ರೆಸ್ ಸರಕಾರ ಪೋಲೀಸ್ ರಕ್ಷಣೆ ನೀಡುತ್ತಿರುವುದು ಒಂದು ವಿಡಂಬನೆ.

ನಿಜ ಸ್ಥಿತಿಯಲ್ಲಿ ದತ್ತ ಜಯಂತಿಯನ್ನು ನಿರ್ಬಂಧಿಸಬೇಕು. ಆದರೆ ಪೋಲೀಸ್ ಬೆಂಗಾವಲಿನಲ್ಲಿ ಇದನ್ನು ನಡೆಸಲು ಸರಕಾರ ಅವಕಾಶ ನೀಡುತ್ತಾ ಬಂದಿದೆ. ದತ್ತ ಜಯಂತಿಯ ಹೆಸರಿನಲ್ಲಿ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಬಿ.ಚಂದ್ರೇಗೌಡರು ಸಹ ಬಾಬಾಬುಡನ್‌ಗಿರಿಯಲ್ಲಿ ಪೂಜೆ ಮಾಡಿದ್ದಾರೆ.

ಈಗಿನ ದತ್ತ ಜಯಂತಿಯ ಸಮಯದಲ್ಲಿ ಬಾಬಾಬುಡನ್‌ಗಿರಿ ಸಂಪೂರ್ಣ ಹಿಂದೂ ದೇವಾಲಯವಾಗಿ ಪರಿವರ್ತನೆಗೊಳ್ಳುತ್ತ ಬಂದಿದೆ. ಗುಹೆಯೊಳಗೆ ಪೂಜೆ ಸಲ್ಲಿಸುವ ಮುಜಾವರ್‌ರನ್ನು ಹೊರತಳ್ಳಿ ಹಿಂದೂ ಪೂಜಾರಿಗಳು ಒಳನುಗ್ಗಿ ಅಲ್ಲಿನ ಹಸಿರು ಶಾಲುಗಳನ್ನೆಲ್ಲಾ ಹೊರಗೆ ಎಸೆದು ದತ್ತಾತ್ರೇಯನ ಮೂರ್ತಿ ಇಟ್ಟು ಪೂಜೆ ಸಲ್ಲಿಸುವುದು ದತ್ತ ಜಯಂತಿಯ ಕಾರ್ಯಕ್ರಮ.

ಆಸ್ತಿ ಪ್ರಶ್ನೆ?

ಮೈಸೂರು ಗೆಜೆಟಿಯರ್‌ನಲ್ಲಿ ಬಾಬಾಬುಡನ್ ಗಿರಿಯ ಹೆಸರು ದಾದಾಹಯಾತ್ ಮೀರ್ ಖಲಂದರ್ ಬಾಬಾಬುಡನ್ ಸ್ವಾಮಿ ದರ್ಗ ಎಂದಿದೆ. ಈ ದರ್ಗಾದ್ ಸಜ್ಜದ್ ಆಗಿದ್ದ ಬಾಬಾಬುಡನ್ ಎನ್ನುವವರೇ ಅರಬ್‌ದೇಶದಿಂದ ಕಾಫಿ ಬೀಜಗಳನ್ನು ತಂದು ಇಲ್ಲಿ ಕಾಫಿ ಬೆಳೆ ಪ್ರಾರಂಭಿಸುವುದರ ಮೂಲಕ ಹೆಸರುವಾಸಿ ಯಾದರು. ಈತನಿಂದಲೇ ಈ ಪ್ರದೇಶಕ್ಕೆ ಬಾಬಾಬುಡನ್‌ಗಿರಿ ಎಂದು ಹೆಸರಾಯಿತು. ಬಾಬಾಬುಡನ್‌ಗಿರಿ ದರ್ಗಕ್ಕೆ ಸೇರಿದ ಅಪಾರ ಪ್ರಮಾಣದ ಇನಾಂ ಜಮೀನುಗಳಿವೆ. ಇನಾಂ



ರದ್ದಿಯಾತಿ ಕಾನೂನು ಜಾರಿಯಾದ ಮೇಲೆ ಈ ಜಮೀನುಗಳೆಲ್ಲವೂ ಸರಕಾರಿ ಜಮೀನುಗಳಾದವು. ಅದಕ್ಕೆ ಕಾನೂನು ಪ್ರಕಾರ ಬಾಬಾಬುಡನ್‌ಗಿರಿ ದರ್ಗಕ್ಕೆ ಸರಕಾರ ಪರಿಹಾರ ನೀಡಬೇಕಾಗಿದೆ. ಆದರೆ ಸರಕಾರ ಈ ಪರಿಹಾರವನ್ನು ಇದುವರೆಗೆ ನೀಡಿರುವುದಿಲ್ಲ.

ಈ ನಡುವೆ ಅಂದರೆ ಸುಮಾರು ಹತ್ತು ಇಪ್ಪತ್ತು ವರ್ಷಗಳ ಹಿಂದೆ ಬಾಬಾಬುಡನ್‌ಗಿರಿ ದರ್ಗ ಮತ್ತು ಅದರ ಎಲ್ಲಾ ಆಸ್ತಿಪಾಸ್ತಿಗಳನ್ನು ವಕ್ಫ್ ಆಸ್ತಿ ಎಂದು ಘೋಷಿಸಲಾಗಿತ್ತು. ಈ ಸಂಬಂಧದಲ್ಲಿ ಬಾಬಾಬುಡನ್‌ಗಿರಿಯ ಕೆಲವು ಹಿಂದೂ ಭಕ್ತರು ನ್ಯಾಯಾಲಯದ ಮೊರೆಹೊಕ್ಕು ವಕ್ಫ್ ಆಸ್ತಿಯೆಂದು ಮಾಡಿದ ಆಜ್ಞೆಯನ್ನು ರದ್ದುಪಡಿಸಿ ಮುಜರಾಯಿ ಆಸ್ತಿಯೆಂದೇ ಘೋಷಿಸಬೇಕೆಂದು ಚಿಕ್ಕಮಗಳೂರು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿದರು. ಬಾಬಾಬುಡನ್‌ಗಿರಿಯ ಅಂದಿನ ಸಜ್ಜದ್ ಈ ವ್ಯಾಜ್ಯವನ್ನು ವಿರೋಧಿಸಲಿಲ್ಲ. ಮಾತ್ರವಲ್ಲ ಇದು ಮುಜರಾಯಿ ಇಲಾಖೆಗೆ ಸೇರಿದ್ದರೆಂದು ಆತ ಸಹ ಒಪ್ಪಿಕೊಂಡ. ಆದ್ದರಿಂದ ನ್ಯಾಯಾಲಯ ಸಹ ಇದು ಮುಜಾರಾಯಿ ಆಸ್ತಿಯೆಂದು ಘೋಷಿಸಿ ಅಲ್ಲಿ ಹಿಂದೂಗಳಿಗೂ ಭಾಗವಹಿಸುವ ಅಧಿಕಾರ ಇದೆ ಎಂದು ಸಾರಿತು. ಮತ್ತು ಅಲ್ಲಿನ ಪೂಜಾ ವಿಧಾನಗಳನ್ನು ಕೂಡ ನ್ಯಾಯಾಲಯ ಸ್ಪಷ್ಟಪಡಿಸಿತ್ತು.

ತೀರ್ಪು ತಿರುಚಿದ ಚೆಡ್ಡಿಪಡೆ

ಹಿಂದೂಗಳಾಗಿ ಅಲ್ಲಿ ಭಾಗವಹಿಸುವ ಹಕ್ಕಿದೆ ಎಂಬ ನ್ಯಾಯಾಲಯದ ತೀರ್ಪನ್ನೇ ಸಂಘ ಪರಿವಾರದವರು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ ಅಲ್ಲಿ ಹಿಂದೂ ವಿಧಾನದಲ್ಲಿ ಪೂಜೆ ಮಾಡುವ ಅಧಿಕಾರವಿದೆ ಎಂದು ಪ್ರತಿಪಾದಿಸು ತ್ತಾರೆ. ಇದನ್ನೇ ಮುಂದಿಟ್ಟುಕೊಂಡು ದತ್ತ ಜಯಂತಿ ಎನ್ನುವ ಉತ್ಸವವನ್ನು ಬಲತ್ಕಾರದಿಂದ ಕಳೆದ ಮೂರು ವರ್ಷಗಳಿಂದ ಆಚರಿಸುತ್ತಿದ್ದಾರೆ.

ಮುಂದೊಂದು ದಿನ ಅಪಾರ ಸಂಖ್ಯೆಯಲ್ಲಿ ಜನರನ್ನು ಸೇರಿಸಿ ಅಲ್ಲಿನ ಮುಸ್ಲಿಂ ಗುರುತು ಗಳನ್ನೆಲ್ಲಾ ನಾಶಮಾಡಿ ಸಂಪೂರ್ಣ ಹಿಂದು ದೇವಾಲಯವಾಗಿ ಪರಿವರ್ತನೆ ಹಾಗೂ "ಅಯೋಧ್ಯೆ" ರೀತಿಯ ಕೃತ್ಯವೆಸಗುವುದು ಇವರ ಅಂತಿಮ ಗುರಿಯಾಗಿದೆ.(ಹಾಗೆಂದು ಅವರೇ ಘೋಷಿಸಿಯೂ ಇದ್ದಾರೆ)

ವಿಚಾರವಾದಿಗಳು ಹಾಗೂ ರಾಜ್ಯಾಂಗದಲ್ಲಿ ನಂಬಿಕೆಯುಳ್ಳವರು ಒಗ್ಗಟ್ಟಾಗಿ ಶಕ್ತಿ ಪ್ರದರ್ಶನ ಮಾಡುವುದರ ಮೂಲಕವೇ ಸಂಘ ಪರಿವಾರ ದವರ ಉದ್ದೇಶಿತ ಈ ದೇಶದ್ರೋಹಿ ಚಟುವಟಿಕೆ ಯನ್ನು ತಡೆಯಬೇಕಾದ ಅವಶ್ಯಕತೆ ಇದೆ.

ಪೂಜಾಸ್ಥಾನ - ಯಥಾಸ್ಥಿತಿ ಕಾಯಬೇಕು

1993ನೇ ಇಸವಿಯಲ್ಲಿ ಪಾರ್ಲಿಮೆಂಟಿನಲ್ಲಿ ಅಂಗೀಕೃತವಾದ ಕಾನೂನಿನ ಪ್ರಕಾರ ಎಲ್ಲಾ ಪೂಜಾಸ್ಥಾನಗಳನ್ನು 1947 ನೇ ಇಸವಿಯಲ್ಲಿ ಇದ್ದಂತಹ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರಬೇಕಾದದ್ದು ಎಲ್ಲರ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಯಾವುದೇ ಪೂಜಾ ಸ್ಥಾನದ ಸ್ಥಿತಿಯನ್ನು ಬದಲಾಯಿಸಿದರೆ ಅದು ಈ ಕಾನೂನಿನ ಅಡಿಯಲ್ಲಿ ಅಪರಾಧವಾಗುತ್ತದೆ. ಈ ಅಪರಾಧಕ್ಕೆ ಏಳು ವರ್ಷ ಕಠಿಣ ಶಿಕ್ಷೆ ಸಹ ನಿಗದಿಪಡಿಸಲಾಗಿದೆ.

ಅಕ್ರಮ ಜಯಂತಿ

ಬಾಬಾಬುಡನ್‌ಗಿರಿಯಲ್ಲಿ ದತ್ತ ಜಯಂತಿ ಯನ್ನು ಬಲತ್ಕಾರದಿಂದ ಮಾಡುತ್ತಿರುವುದು, ಇದಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಮತ್ತು ಪೋಲೀಸ್ ರಕ್ಷಣೆ ಕೊಡುತ್ತಿರುವುದು **ಮೇಲೆ ಹೇಳಿದ ಕಾನೂನಿನಡಿಯಲ್ಲಿ ಅಪರಾದ ವೆಸಗಿದಂತಾ ಗುತ್ತದೆ ಅವರೆಲ್ಲರೂ ಶಿಕ್ಷೆಗೆ ಒಳಪಟ್ಟು ಏಳು ವರ್ಷ ಜೈಲು ಸೇರಬೇಕಾಗುತ್ತದೆ.**

ಕಾನೂನನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವ ಸರಕಾರ ಅಸ್ತಿತ್ವಕ್ಕೆ ಬಂದರೆ ಮಾತ್ರ ಬಾಬಾಬುಡನ್‌ಗಿರಿಯ ಮೂಲ ಸ್ವರೂಪವನ್ನು ಕಾಪಾಡುವುದು ಸಾಧ್ಯವಾಗುತ್ತದೆ. ವಿಶೇಷವೆಂದರೆ ಸೂಫಿ ಪಂಥಕ್ಕೆ ಸೇರಿದವರು ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡುವ ಸ್ವಭಾವದವರಲ್ಲ.

ಬಾಬಾಬುಡನ್‌ಗಿರಿ ಮುಜರಾಯಿ ಆಸ್ತಿಯೆಂದು ಸಜ್ಜದ್ ಒಪ್ಪಿಕೊಂಡ ಕಾರಣ ಬೇರೆ ಮುಸಲ್ಮಾನರು ಅಷ್ಟಾಗಿ ಸಂಘ ಪರಿವಾರದವರ ಈ ದುಷ್ಕೃತ್ಯವನ್ನು ಪ್ರತಿರೋಧಿಸುತ್ತಿಲ್ಲ. ಇದು ದುಷ್ಕರ್ಮಿಗಳಿಗೆ ಅನುಕೂಲ ಮಾಡುತ್ತಿದೆ.

ಎಚ್ಚರಗೊಳ್ಳದಿದ್ದರೆ ಕರಾಳ ಕಳಂಕಿತ ದಿನಗಳು

ರಾಜ್ಯಾಂಗದಲ್ಲಿ ವಿಶ್ವಾಸ ಉಳ್ಳವರು ವಿಚಾರವಾದಿಗಳು ಇನ್ನೂ ಸಹ ಪೂರ್ಣವಾಗಿ ಎಚ್ಚೆತ್ತುಕೊಂಡಿಲ್ಲ. ಹೀಗಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಸಂಖ್ಯಾತ ತರುಣರನ್ನು ಬಜರಂಗದಳದಂತಹ ದುಷ್ಟ ಸಂಸ್ಥೆಗೆ ಆಕರ್ಷಿಸು ವುದರಲ್ಲಿ ಸಂಘ ಪರಿವಾರದವರು ಯಶಸ್ವಿ ಯಾಗಿದ್ದಾರೆ. ಹೀಗೆ ಆಕಡೆಗೆ ಆಕರ್ಷಿಸಲ್ಪಟ್ಟ ಚಿಕ್ಕಮಗಳೂರು ಜಿಲ್ಲೆಯ ಶೂದ್ರ ಸಮಾಜಕ್ಕೆ ಸೇರಿದ ಅಸಂಖ್ಯಾತ ತರುಣರು ಅಪರಾಧಿ ಗಳಾಗುತ್ತಾರೆ. ಅವರ ಬುದ್ಧಿ ಬೆಳವಣಿಗೆ ಕುಂಠಿತವಾಗುತ್ತದೆ. ಮತ್ತು ಅವರ ಮುಂದಿನ ಬಾಳು ಅಂಧಕಾರದಲ್ಲಿ ಮುಳುಗಿಹೋಗುತ್ತದೆ ಎನ್ನುವುದರ ಅರಿವು ಯಾರಿಗೂ ಇದ್ದಂತೆ ಇಲ್ಲ. ದೇಶಭಕ್ತರು ಎಚ್ಚೆತ್ತುಕೊಂಡು ಮುಂದಿನ ದಿನಗಳಲ್ಲಿ ದತ್ತ ಜಯಂತಿ ಕಾರ್ಯಕ್ರಮವನ್ನು ಪ್ರತಿರೋಧಿಸುವುದರ ಮೂಲಕ ತಡೆಯುವಂತಾದರೆ ಮಾತ್ರ ನಮ್ಮ ರಾಜ್ಯಾಂಗದ ಮರ್ಯಾದೆ ಮತ್ತು ಸಾರ್ವಭೌಮತ್ವ ಉಳಿಯಬಹುದು. ಇಲ್ಲದಿದ್ದರೆ ಚರಿತ್ರೆಯಲ್ಲಿ ಮತ್ತೊಂದು ಕರಾಳ ದಿನ ಹಾಗೂ ಮತ್ತೊಂದು ಕಳಂಕ ಸೇರಿ ಹೋಗುವ ಅಪಾಯವಿದೆ.

ಖಬರಸ್ಥಾನದಲ್ಲಿ ಹಿಂದುಗಳು ಪೂಜೆ ಮಾಡುವುದಾದರೂ ಹೇಗೆ?

ದತ್ತ ಪೂಜೆ ಭಕ್ತಿಯಿಂದ ಹಾಕಿಕೊಂಡ ಒಂದುಕಾರ್ಯಕ್ರಮವಲ್ಲ, ಬದಲಿಗೆ ಹಿಂದೂ ಮುಸ್ಲಿಂ ಆಧಾರದಲ್ಲಿ ಜನರನ್ನು ಒಡೆಯುವ ಒಂದು ಕುತಂತ್ರ. ಇದರಿಂದಾಗಿ ರಾಜ್ಯಾಂಗದ ಮೂಲಭೂತ ವಿಚಾರ ಏನಿದೆ ಅದು ನುಚ್ಚುನೂರಾಗುತ್ತದೆ. ಹಿಂದೂ ಮುಸ್ಲಿಂ ಎಂದು ಸಮಾಜ ಒಡೆಯುತ್ತದೆ. ಎಲ್ಲಾ ಕಡೆ ಗುಜರಾತ್‌ನ್ನು ಪುನರಾವರ್ತನೆಗೊಳಿಸುವ ಗುರಿಯತ್ತ ಸಾಗಲು ಸಂಘ ಪರಿವಾರದ ಕುತಂತ್ರ ಇದಾಗಿದೆ. ಇದನ್ನು ತಡೆಯಬೇಕು. ಎಲ್ಲರೂ ಒಗ್ಗಟ್ಟಾಗಿ ನಿಂತು ಎದುರಿಸಬೇಕು. ಜನಸಮೂಹವನ್ನು ಅಣಿನೆರೆಸಿ ಹಿಂದೂ ಮುಸ್ಲಿಂ ಐಕ್ಯತೆ ಸಾಧಿಸಿ ಕೋಮು ಸೌಹಾರ್ದತೆ ಸಾರಬೇಕು. ಹಿಂದೂ ಸಮಾಜದಲ್ಲಿ ಇಂತಹ ಕೃತ್ಯವೆಸಗುವವರು ಅಲ್ಪಸಂಖ್ಯಾತ ರಾಗಿದ್ದಾರೆ. ಆದ್ದರಿಂದ ಇವರನ್ನು ವಿರೋಧಿಸುವ ಬಹುಸಂಖ್ಯಾತ ಹಿಂದೂಗಳು ಸಂಘಟಿತರಾಗಿ ಒಗ್ಗಟ್ಟಾಗಿ ಎದುರಿಸುವುದು ಹಾಗೂ ಸಂಘಪರಿವಾರದ ವಿರುದ್ಧವಿರುವ ಬಹುಸಂಖ್ಯಾತ ಹಿಂದೂ ಜನರನ್ನು ಜಾಗೃತಿ ಮಾಡಿ ಅವರನ್ನು ಹಿಮ್ಮೆಟ್ಟಿಸಬೇಕಾಗಿದೆ. ಹಾಗೆ ಮಾಡಿದಾಗ ಸರಕಾರ ಈ ದತ್ತ ಜಯಂತಿಯನ್ನು ಬ್ಯಾನ್ ಮಾಡುತ್ತದೆ.

ಈ ದರ್ಗಾ ಎಂಬುದು ಒಂದು ಖಬರಸ್ಥಾನ. ಇಲ್ಲಿ ಹಿಂದೂಗಳು ಪೂಜೆ ಮಾಡುವುದಾದರೂ ಹೇಗೆ?

ಈ ಲೇಖನ ದೊರಕಿಸಲು ಸಹಕರಿಸಿದ ವರು ಸತ್ಯ ವಿರಾಜಪೇಟೆ ಮತ್ತು ಕೊಡಗು ಸಮಾಚಾರ ಪತ್ರಿಕೆ.

ಕೋರ್ಟ್ ತೀರ್ಪು

ಇಲ್ಲಿನ ದರ್ಗಾ ಅಥವಾ ಪೀಠಕ್ಕೆ ತಮ್ಮ ಭಕ್ತಿಯನ್ನು ತೋರಲು ಬರುವ ಹಿಂದುಗಳು ಮತ್ತು ಮುಸ್ಲಿಮರ ನಡುವೆ ಇರುವ ಬಾತೃತ್ವ ಪ್ರಶಂಸನೀಯವಾಗಿದೆ. ದೇಶದೆಲ್ಲೆಡೆ ಕೇವಲ ಹೇಳಿಕೆಯ ಮಟ್ಟದಲ್ಲೇ ಉಳಿದಿರುವ ರಾಮ-ರಹೀಮ-ಈಶ್ವರ-ಅಲ್ಲಾ ಎಲ್ಲರೂ ಒಂದೇ ಎಂಬ ತತ್ವ ಈ ಪವಿತ್ರ ಕ್ಷೇತ್ರದಲ್ಲಿ ದಿನನಿತ್ಯದ ಆಚರಣೆ ಹಾಗೂ ಕ್ರಿಯೆಯಾಗಿ ರೂಢಿಯಲ್ಲಿರುವುದು ಕಂಡುಬರುತ್ತಿದೆ. ಗುರು ದತ್ತಾತ್ರೇಯ ಬಾಬಾ ಬುಡನ್‌ಗಿರಿ ಹೆಸರಿನ ಈ ಪೀಠವು ಸಂಕುಚಿತ ಜಾತಿ ಧರ್ಮಗಳ ಹೆಸರಿನಲ್ಲಿ ಹೊಡೆದುಹೋಗಿರುವ ಇಂದಿನ ಸಮಾಜದಲ್ಲಿ ಜಾತ್ಯಾತೀತತೆ-ಸಹ ಧರ್ಮದ ಉಜ್ವಲ ಸಂಕೇತವಾಗಿ ಕಾಣುತ್ತಿದೆ. ಇದು ನ್ಯಾಯಮೂರ್ತಿ ಬಿ.ಪಿ.ಹಿರೇಮಠ್ ಹಾಗೂ ನ್ಯಾಯಮೂರ್ತಿ ಎನ್.ಡಿ.ವಿ. ಭಟ್ ಅವರು ನೀಡಿದ ತೀರ್ಪು. (1998 ರ ಆರ್‌ಎಫ್‌ಎ 119 ಇಂಡಿಯನ್ ಲಾ ರಿಪೋರ್ಟರ್‌ನಲ್ಲಿ ಸಂಪುಟ 41, ಪುಟ 467) ಹೀಗಿದ್ದರೂ ಪೂಜಾವಿಧಿ ನಡೆಸಲು ಅವಕಾಶ ಕೊಡುತ್ತಿಲ್ಲ, ಅದನ್ನು ವಿಮೋಚನೆ ಮಾಡಬೇಕು ಎಂದು ಬಜರಂಗದಳದ ಮುತಾಲಿಕ್ ಹೇಳುವುದು ಅರ್ಥಹೀನ.

ಆಡಳಿತ ಮಂಡಳಿ ಕಾನೂನು ಬಾಹಿರ

ಬಾಬಾಬುಡನ್‌ಗಿರಿಯ ದರ್ಗಾಕ್ಕೆ ಈಗ ಹಿಂದುತ್ವವಾದಿಗಳ ಒತ್ತಡಕ್ಕೆ ಮಣಿದು ರಾಜ್ಯ ಸರ್ಕಾರವು ಆಡಳಿತ ಮಂಡಳಿಯನ್ನು ರಚಿಸಿದೆ- ಇದು ಕಾನೂನುಬಾಹಿರ. ಈ ರೀತಿ ಆಡಳಿತ ಮಂಡಳಿ ರಚಿಸಲು ಕಾನೂನಿನಲ್ಲಿ ಅವಕಾಶವಿಲ್ಲ - ಇಲ್ಲಿ ಸಜ್ಜದ್‌ರವರಿಗೆ ಪರಮಾಧಿಕಾರ. ಏಕೆಂದರೆ ಇದು ಮಠದ ಕಾನೂನಿನಂತೆ ನಡೆಯುವ ಸ್ಥಳ. ಒಂದೊಮ್ಮೆ ಶೃಂಗೇರಿ ಮಠಕ್ಕೆ ಸರ್ಕಾರ ಆಡಳಿತ ಮಂಡಳಿ ರಚಿಸಲು ಯತ್ನಿಸಿದರೆ ಅದನ್ನು ಸಂಘಪರಿವಾರ ಅಥವಾ ಮಠದವರು ಒಪ್ಪುವರೆ? ಇದಕ್ಕೂ ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ಸಾಧ್ಯವಿಲ್ಲ. ಸಜ್ಜದ್‌ರವರು ಒಂದು ವೇಳೆ ಆಡಳಿತದಲ್ಲಿ ದುರುಪಯೋಗ ನಡೆಸಿದರೆ ಆ ಬಗ್ಗೆ ತನಿಖೆ ನಡೆಸಲು ಕಾನೂನಿನಲ್ಲಿ ಬೇರೆ ರೀತಿಯಲ್ಲಿ ಅವಕಾಶಗಳಿವೆ. ಈ ರೀತಿ ಸರ್ಕಾರ ಆಡಳಿತ ಮಂಡಳಿ ರಚಿಸಿದ್ದು ಕೇವಲ ಹಿಂದುತ್ವವಾದಿಗಳನ್ನು ಮೆಚ್ಚಿಸಲು ಮಾತ್ರ ಈಗ ಸರ್ಕಾರ ಮಾಡಬೇಕಾದುದೆಂದರೆ ರಚಿಸಿರುವ ಆಡಳಿತ ಮಂಡಳಿಗಯನ್ನು ರದ್ದುಗೊಳಿಸಿ, ಸಂಪೂರ್ಣ ಅಧಿಕಾರವನ್ನು ಸಜ್ಜದ್‌ರಿಗೆ ಕೊಡುವುದು.

ಯುರೋಪಿನ ಬೃಹತ್ ಯುದ್ಧ ವಿರೋಧಿ ಪ್ರತಿಭಟನೆ

ವಿಶ್ವಸಂಸ್ಥೆಯ 'ತನಿಖಾಧಿಕಾರಿಗಳ ತಂಡ ಇರಾಕ್‌ನಲ್ಲಿನ ಅಸ್ತ್ರಗಳ ಪರೀಕ್ಷೆ ಮಾಡುತ್ತಿರುವಂತೆಯೇ ಅಮೆರಿಕಾ ಬೊಬ್ಬೆ ಹೊಡೆದಂತಹ ಯಾವ ಅಸ್ತ್ರಗಳೂ ಕಾಣಸಿಗುತ್ತಿಲ್ಲ. ತಪಾಸಣೆಗೆ ಇನ್ನೂ ಕಾಲಾವಕಾಶ ಇದ್ದರೂ ಅಮೆರಿಕಾ ದಾಳಿ ತೀವ್ರಗೊಳಿಸಿದೆಯೆಂದು ಪತ್ರಿಕೆಗಳು ವರದಿ ಮಾಡುತ್ತಿವೆ. ಇರಾಕ್ ಮೇಲಿನ ಅಮೆರಿಕಾದ ಯುದ್ಧದ ವಿರುದ್ಧ ಜಗತ್ತಿನಾದ್ಯಂತ ಪ್ರತಿಭಟನೆಗಳ ಮಹಾಪೂರವೇ ಹರಿದಿದೆ. ಯುರೋಪಿನಲ್ಲಾದ ಅಂತಹ ಪ್ರತಿಭಟನಾ ಪ್ರದರ್ಶನದ ಇರಾಕ್ ಸೌಹಾರ್ದದ ವರದಿ ಇಲ್ಲಿದೆ.

ಕಳೆದ ತಿಂಗಳಲ್ಲಿ ಇಟಲಿಯ ಫ್ಲಾರೆನ್ಸ್ ನಗರದಲ್ಲಿ ಯುರೋಪ್‌ನ ಅತಿ ದೊಡ್ಡ ಯುದ್ಧವಿರೋಧಿ ಪ್ರತಿಭಟನೆ ನಡೆಯಿತು. ಜನಪೂರ್ತಿ ನಗರದೊಳಗೆ ಹರಿದು ಬಂದ ಯುದ್ಧವಿರೋಧಿ ಕಾರ್ಯಕರ್ತರಿಂದಾಗಿ ಫ್ಲಾರೆನ್ಸ್ ನಗರ ತನ್ನ ಎಂದಿನ ಜನಸಂಖ್ಯೆಗಿಂತ ಮೂರು ಪಟ್ಟು ಹೆಚ್ಚಾಗಿ ಜನರನ್ನು ತುಂಬಿಕೊಂಡಿತು. ಈ ಯುದ್ಧವಿರೋಧಿ ನಡೆ ದಿಟ್ಟ, ವರ್ಣರಂಜಿತ ಹಾಗೂ ಆವೇಷಭರಿತವಾಗಿತ್ತು ಹಾಗೂ ಬುಶ್ ಹಾಗೂ ಬ್ಲೇರ್ ಅವರು ಇರಾಕ್ ಮೇಲೆ ನಡೆಸಲಿರುವ ಧಾಳಿಗೆ ತೀವ್ರ ವಿರೋಧವನ್ನು ಸೂಚಿಸುತ್ತಿತ್ತು. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಸಭೆಯ ನಂತರ ನಡೆದ ಈ ಪ್ರದರ್ಶನ ಇರಾಕ್ ಮೇಲೆ ನಡೆಯುವ ಯುದ್ಧದ ವಿರುದ್ಧವಾಗಿ ಮಿಲಿಯಾಂತರ ಜನರು ಧ್ವನಿ ಎತ್ತುತ್ತಾರೆಂಬ ಸ್ಪಷ್ಟ ಸಂದೇಶ ಸಾರಿತು.

ಈ ಪ್ರದರ್ಶನದಲ್ಲಿ ಹದಿಹರೆಯದ ಯುವಜನರಿಂದ ಹಿಡಿದು 90 ವರ್ಷದ ವೃದ್ಧರು, ಕಾರ್ಮಿಕ ನಾಯಕರು, ರಾಜಕೀಯ ಪಕ್ಷಗಳ ಕಾರ್ಯಕರ್ತರು, ಇಟಲಿಯಾದ್ಯಾಂತದಿಂದ ಬಂದ ಜನರು ಹಾಗೂ ಯುರೋಪಿನ ವಿವಿಧ ದೇಶದ ಪ್ರತಿನಿಧಿಗಳು ಭಾಗವಹಿಸಿದ್ದರು. ಯುರೋಪಿಯನ್ ಸೋಷಿಯಲ್ ಫಾರಮ್ ಸಭೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಫ್ಲಾರೆನ್ಸ್ ನಲ್ಲಿ ನಡೆದ ಈ ಯುದ್ಧ ವಿರೋಧಿ ಪ್ರದರ್ಶನದ ಯಶಸ್ಸಿನಿಂದ ಉತ್ತೇಜನಗೊಂಡ ಯುರೋಪಿನ ಶಾಂತಿಕಾರ್ಯಕರ್ತರು ಯುರೋಪಿನಾದ್ಯಂತ ಇದೇ ರೀತಿಯಲ್ಲಿ ಇರಾಕ್ ವಿರುದ್ಧ ನಡೆಯುವ ಯಾವುದೇ ಯುದ್ಧವನ್ನು ಪ್ರತಿಭಟಿಸಿ ಬೃಹತ್ ಪ್ರದರ್ಶನ ನಡೆಸಲು ಯೋಜನೆ ರೂಪಿಸಿದ್ದಾರೆ.

ಮುಂಬರುವ ಮೂರು ತಿಂಗಳೊಳಗೆ ಯುರೋಪಿನಾದ್ಯಂತ ಯುದ್ಧವಿರೋಧಿ ಕಾರ್ಯಕ್ರಮದ ಅಲೆಗಳು ಎದ್ದೇಳುವುದಾಗಿ ಘೋಷಿಸಿರುತ್ತಾರೆ ಹಾಗೂ ತಕ್ಷಣವೇ ಇರಾಕ್ ವಿರುದ್ಧ ಧಾಳಿ ನಡೆಯುವ ಸೂಚನೆ ಕಂಡುಬಂದಲ್ಲಿ ಆ ಕ್ಷಣವೇ ಜನರನ್ನು ಪ್ರತಿಭಟನೆಗೆ ಅಣಿನೆರೆಸುವುದಾಗಿ ಹೇಳಿರುತ್ತಾರೆ. ಇಟಲಿಯ ಫ್ಲಾರೆನ್ಸ್‌ನಲ್ಲಿ ನಡೆದ ಈ ಯುದ್ಧವಿರೋಧಿ ಪ್ರತಿಭಟನೆಯಲ್ಲಿ ಮ್ಯಾಕ್‌ಡೊನಾಲ್ಡ್ ಬಹು ರಾಷ್ಟ್ರೀಯ ಕಂಪನಿಯನ್ನು ವಿರೋಧಿಸಿದ ಫ್ರೆಂಚ್ ಕಾರ್ಯಕರ್ತ ಬೋಸ್‌ಬೋವ್, ಇಟಲಿಯ ಅತಿದೊಡ್ಡ ಕಾರ್ಮಿಕ ಒಕ್ಕೂಟ ಆದ ಸಿ.ಜಿ.ಐ.ಎಲ್. ನ ಮಾಜಿ ಪ್ರಧಾನ ಕಾರ್ಯದರ್ಶಿ ಸರ್ಜಿಯೋ ಕೋಫ್‌ರೈಟ್ ಭಾಗವಹಿಸಿದ್ದದಲ್ಲದೆ ಇಟಲಿಯ ಬೃಹತ್ ಕಾರ್ಮಿಕ ಒಕ್ಕೂಟ ಸಿ.ಜಿ.ಐ.ಎಲ್.ನ ಒಂದು ಲಕ್ಷಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. 2001ರಲ್ಲಿ ಜಿನೇವಾದಲ್ಲಿ ಜಿ.8 ಶೃಂಗಸಭೆ ವಿರೋಧಿಸಿ ನಡೆದ ಪ್ರದರ್ಶನಕ್ಕಿಂತ ವಿಶೇಷವಾಗಿತ್ತು. ಈ ಯುದ್ಧವಿರೋಧಿ ಪ್ರದರ್ಶನ ಚೈತನ್ಯ ಪೂರ್ಣವಾದ ರಾಜಕೀಯ ಸಂದೇಶದಿಂದ ಕೂಡಿದ ಒಂದು ಜನಜಾತ್ರೆಯಾಗಿ ಪರಿವರ್ತನೆಯಾಯಿತು. ಸಾವಿರಾರು ಯುದ್ಧವಿರೋಧಿ ಘೋಷಣೆಯ ಬಿತ್ತಿಪತ್ರಗಳು, ಬ್ಯಾನರ್‌ಗಳು ರಾರಾಜಿಸುತ್ತಿದ್ದವು. "ಜಾಗತೀಕ ಯುದ್ಧ ನಿಲ್ಲಲಿ", "ಯುದ್ಧವಲ್ಲ ಶಾಂತಿ" "ಇರಾಕ್ ಮೇಲೆ ಧಾಳಿ ಬೇಡ", "ಬುಶ್, ಬ್ಲೇರ್, ಬುರ್ಲುಸ್ಕೋನಿ ಕೊಲೆಗಾರರು", ಇತ್ಯಾದಿ ಘೋಷಣೆಗಳು ಎಲ್ಲೆಲ್ಲೂ ಸಾವಿರ ಸಂಖ್ಯೆಯಲ್ಲಿ ಕಂಡು ಬಂದವು.

ಯುದ್ಧ ವಿರೋಧಿ ಪ್ರದರ್ಶನಕಾರರನ್ನು ಹೊತ್ತು ತಂದ ರೈಲು ಗಾಡಿಗಳಿಂದಾಗಿ ಸಂಚಾರ ಅಸ್ತವ್ಯಸ್ತವಾಗಿತ್ತು. ಈ ಪ್ರದರ್ಶನಕ್ಕಾಗಿ 20 ವಿಶೇಷ ರೈಲುಗಳು ಓಡಾಡಿದವು. ಪ್ರದರ್ಶನದಲ್ಲಿ ಪಾಲ್ಗೊಂಡ ಜನಸಂಖ್ಯೆ ವಿಪರೀತವಾಗಿ ಪ್ರದರ್ಶನ ಆರಂಭವಾಗಲು ಮೂರು ಗಂಟೆ ತಡವಾಯಿತು. ಅಂದು ಸಂಜೆ ಮೊದಲ ಪ್ರದರ್ಶನಕಾರರು ಯುದ್ಧವಿರೋಧಿ ನಡೆಯ ಕೊನೆ ಮುಟ್ಟುವ ಸಮಯದಲ್ಲಿ ತಂಡ ತಂಡವಾಗಿ ಲಕ್ಷಾಂತರ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ತಮ್ಮ ಯುದ್ಧವಿರೋಧಿ ಪ್ರದರ್ಶನ ನಡೆಯನ್ನು ಆಗತಾನೇ ಪ್ರಾರಂಭಿಸಿದರು. ಪ್ರದರ್ಶನ ನಡೆದ ಬೀದಿಗಳಾದ್ಯಂತ ಕಟ್ಟಡಗಳ ಮೇಲೆ ಶಾಂತಿ ಸಂದೇಶ ಸಾರುವ ಹಾಗೂ ಯುದ್ಧ ಬೇಡ ಎನ್ನುವ ಬಿತ್ತಿಪತ್ರಗಳು ಕಂಡು ಬಂದವು. ಅಂತರಾಷ್ಟ್ರೀಯ ಪ್ರತಿನಿಧಿಗಳು ಈ ನಡೆಯ ಮುಂಚೂಣಿಯಲ್ಲಿದ್ದರು. ಗ್ರೀಸ್, ಬ್ರಿಟನ್, ಸ್ಪೈನ್, ಜರ್ಮನಿ, ಫ್ರಾನ್ಸ್‌ನ ಜನರು ಇಟಲಿಯ ಜನತೆಯ ಜೊತೆಗೂಡಿ "ಅಂತರಾಷ್ಟ್ರೀಯ ಗೀತೆಯನ್ನು" ಒಕ್ಕೊರಲಿನಿಂದ ಹಾಡಿದರು. ಈ ಪ್ರದರ್ಶನದಲ್ಲಿ ಭಾಗವಹಿಸಿದ ಜನರಲ್ಲಿ ಕಾರ್ಮಿಕರೇ ಬಹುಪಾಲು. ಫಿಯಟ್‌ಕಾರ್ ಕಂಪನಿಯ ಕಾರ್ಮಿಕರು ಈ ನಡೆಯ ಮುಂಚೂಣಿಯಲ್ಲಿದ್ದರು.



ಅನೇಕ ದೊಡ್ಡ ಹಾಗೂ ಸಣ್ಣ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ಸಾವಿರಾರು ಉಕ್ಕಿನ ಕಾರ್ಖಾನೆಯ ನೌಕರರು ಸಹಾ ಪಾಲ್ಗೊಂಡಿದ್ದರು. ಇಟಲಿಯ ರೋಮನ್ ಕಾರ್ಮಿಕ ನಾಯಕ ಈ ಸಂದರ್ಭದಲ್ಲಿ ಹೀಗೆ ಉದ್ಗರಿಸಿದರು. "ಯಾವ ಜನತೆಯ ಜೊತೆ ಜೊತೆಯಾಗಿ ಈ ಯುದ್ಧವಿರೋಧಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ನನಗೆ ಅತಿ ಹೆಮ್ಮೆಯ ವಿಷಯ. ನಾವು ಎಲ್ಲರೂ ಯುದ್ಧ ವಿರೋಧಿಗಳು, ಯುದ್ಧ ಯಾವತ್ತು ಶ್ರೀಮಂತರಿಗೆ ಸಹಾಯ. ಈ ಕಾರ್ಯಕ್ರಮದ ಉತ್ತೇಜನ ದೊಂದಿಗೆ ಯುದ್ಧ ತಡೆಗೆ ಎಲ್ಲರೂ ಮುಂದಾಗಬೇಕು".

ಈ ಪ್ರದರ್ಶನದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು" ಯುದ್ಧ ನಡೆಯುವುದು ನಮಗೆ ಸಿಟ್ಟು ತಂದಿದೆ. ಈ ಯುದ್ಧ ವಿರೋಧಿ ಕಾರ್ಯಕ್ರಮದಲ್ಲಿ ಇಷ್ಟೊಂದು ಜನತೆ ಭಾಗವಹಿಸಿರುವುದು ಸಂತೋಷದ ವಿಷಯ" ಎಂದು ಹೇಳಿದರು.

"ನಾವು ಯುದ್ಧವಿರೋಧಿಗಳು ಎಂದೂ ಬಹು ಸಂಖ್ಯೆಯಲ್ಲಿದ್ದೇವೆ, ಯಾರಿಗೂ ನಮ್ಮನ್ನು ಯುದ್ಧದೆಡೆಗೆ ಕೊಂಡೊಯ್ಯುವ ಹಕ್ಕು ಇಲ್ಲ. ಫ್ಲಾರೆನ್ಸ್ ನಗರ ಹಾಗೂ ಬೀದಿಗಳು ನಮ್ಮವು. ಇವು ಬುಶ್ ಹಾಗೂ ಬರ್ಲುಸ್ಕೋನಿ ಇವರಿಗೆ ಸೇರಿದ್ದಲ್ಲ" ಎಂಬ ಘೋಷಣೆ ಈ ಪ್ರದರ್ಶನದಲ್ಲಿ ಮೂಡಿ ಬಂದಿತು.

ಇಡೀ ಫ್ಲಾರೆನ್ಸ್ ಅನ್ನು ಸ್ತಬ್ದಗೊಳಿಸಿದ ಈ ಯುದ್ಧವಿರೋಧಿ ಪ್ರದರ್ಶನ ಯುರೋಪಿನಾದ್ಯಂತ ಮೂಡಿ ಬರುತ್ತಲಿವೆ.

ಸಂಗ್ರಹ: **ಮೆಲ್ಕಿಯೋರ್. ಆರ್.ಡಿ.**



ಪುಣ್ಯ ಕ್ಷೇತ್ರವನ್ನು ಮಸಣ ಮಾಡಿದ ಕೋಮುವಾದಿಗಳು

"ಬಾಬ್ರಿ ಮಸೀದಿ ಕೆಡಹುವ ಮೊದಲು ಪ್ರತಿದಿನ ಮೂವತ್ತು ಸಾವಿರ ಯಾತ್ರಾರ್ಥಿಗಳು ಅಯೋಧ್ಯೆಗೆ ಬರುತ್ತಿದ್ದರು.ಆರುಸಾವಿರ ದೇವಾಲಯಗಳು ಇರುವ ಅಯೋಧ್ಯೆ ಪುಣ್ಯಕ್ಷೇತ್ರವಾಗಿತ್ತು. ಈಗ ಇಲ್ಲಿ ಬರುವುದು ಕರಸೇವಕರು ಮಾತ್ರ. ಅವರು ಬಂದು ಹೋದಾಗಲ್ಲೆಲ್ಲ ನಮ್ಮ ಹೊಟ್ಟೆಗೆ ಇನ್ನೊಂದು ಲಾತು ಬೀಳುತ್ತದೆ. ಈ ವಿಹೆಚ್‌ಪಿ ಜನ ಅಯೋಧ್ಯೆಯನ್ನು ಪುಣ್ಯಕ್ಷೇತ್ರದಿಂದ ಮಸಣ ಮಾಡಿದರು' ಎಂದು ತನ್ನ ಕೋಪ ತೋಡಿಕೊಳ್ಳುತ್ತಾಳೆ ಅಯೋಧ್ಯೆಯ ಕಲಾವತಿ ಮಿಶ್ರ. ಯಾತ್ರಾರ್ಥಿಗಳೋ ಮುಖ್ಯ ಆರ್ಥಿಕ ಮೂಲವಾಗಿದ್ದ ಅಯೋಧ್ಯೆಯಲ್ಲಿ ಕಲಾವತಿಯದ್ದು ಒಂಟಿ ದನಿಯಲ್ಲ. ಇಡೀ ಅಯೋಧ್ಯೆ ಆಕೆಯ ಮಾತಿಗೆ ಮಾರ್ದನಿ ಕೊಡುತ್ತದೆ. ಕಲಾವತಿ ರಾಮಮಂದಿರದ ಚಳುವಳಿಯ ಬೆಂಬಲಿಗಳೊಬ್ಬಳಾಗಿದ್ದು, ಈಗ ಕೋಪದಿಂದ ಕುದಿಯುತ್ತಿರುವಳು.

. ಆ ಗೂಂಡಾ ಮುದುಕ (ದಿಗಂಬರ ಅಖಾಡಾದ ಮಹಂತ ಪರಮಹಂಸ ದಾಸ್ ವಿಹೆಚ್‌ಪಿಯ ಬೆಂಬಲಿಗ) ಮತ್ತು ವಿಹೆಚ್‌ಪಿ ದೆವ್ವಗಳು (ಪ್ರವೀಣ್) ತೊಗಾಡಿಯಾ ಮತ್ತು (ಅಶೋಕ) ಸಿಂಘಾಲ್ ದೇವಾಲಯದ ಗುರಿಯನ್ನು ಹಾಳುಗೆಡವಿದ್ದಾರೆ. ಅವರಿರುವವರೆಗೆ ರಾಮಮಂದಿರ ಯಾವತ್ತೂ ಆಗುವುದಿಲ್ಲ... ರಾಮಮಂದಿರಕ್ಕೆ ಸಂಗ್ರಹಿಸಿದ ಕೋಟ್ಯಾಂತರ ಹಣದ ಅಕೌಂಟ್ ಯಾರ ಬಳಿಯೂ ಇಲ್ಲ. ಯಾರೂ ಅಕೌಂಟು ಕೊಡುವುದೂ ಇಲ್ಲ. ವಿಹೆಚ್‌ಪಿ ಮತ್ತು ಪರಮಹಂಸ ಹಿಂದೂಗಳಿಗೆ ಮಾಡಿದ ಮಹಾ ಮೋಸ ಇದು"

- ನಿವಾರಣ ಅಖಾಡಾದ ಮಹಂತ ಗ್ಯಾನದಾಸ್ ಮತ್ತು ನಿರ್ಮೋಹಿ ಅಖಾಡಾದ ಜಗನ್ನಾಥ್ ದಾಸ್. ಈ ಅವಾಂತರ ಮಾಡುವುದು ಇವರು ಮಾತ್ರವಲ್ಲ. ನೂರಾರು - ಅಖಾಡಾಗಳಲ್ಲಿ, ಪಟ್ಟಣದ ಜನರಿಂದಲೂ 'ರಾಮಮಂದಿರದ ದುಡ್ಡುಗುಳುಂ ಮಾಡಿರುವುದು' 'ದಾರ್ಮಿಕ ರೇತರ ರಾಜಕಾರಣಿಗಳು' ಎಂದೆಲ್ಲಾ ಬಿರುದುಗಳನ್ನು ವಿಹೆಚ್‌ಪಿ ಗಳಿಸಿದೆ.

'ಪ್ರತಿ ಬಾರಿ ವಿಹೆಚ್‌ಪಿ ಅಯೋಧ್ಯೆಯಲ್ಲಿ ಕಾರ್ಯಕ್ರಮ ಹಾಕಿದಾಗಲೆಲ್ಲ ನಾವುಮನೆ ಬಿಟ್ಟು ಓಡಿ ಹೋಗುತ್ತೇವೆ. ಕೆಲವು 'ಸುರಕ್ಷಿತ' ಮನೆಗಳಲ್ಲಿ ಅಡಗಿಕೊಳ್ಳುತ್ತೇನೆ. ಅಯೋಧ್ಯೆಯಲ್ಲಿದ್ದ ಸಾಮರಸ್ಯವನ್ನು ಇವರು ಹಾಳು ಮಾಡಿದರು. ಗಲಭೆ ಮಾಡುವವರು ಸ್ಥಳೀಯರಲ್ಲ. ಹೊರಗಿಂದ ಬಂದ ವಿಹೆಚ್‌ಪಿ, ಭಜರಂಗ ದಳದ ಕಾರ್ಯಕರ್ತರು"

- ಅಯೋಧ್ಯೆಯ ಅಮೀನಾ ಖತೂನ್ ಮತ್ತು ಶಹೀರಾ ಬೇಗಂ ಸಹ ಈ ಪುಣ್ಯಕ್ಷೇತ್ರದ ಮುಸ್ಲಿಮರ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.


ನಮ್ಮಿಂದಾಗಿ ಇಡಿ ದೇಶಕ್ಕೆ ಕಷ್ಟವಾಯಿತು ಎಂದು ನಮಗೆ ದುಃಖವಾಗುತ್ತದೆ. 1992 ರಲ್ಲಿ ಆದ ಮುಂಬಯಿ ಗಲಭೆಗಳು, ಇತ್ತೀಚಿನ ಗೋಧ್ರಾ, ಅಹಮದಾಬಾದ್ ಗಲಭೆಗಳಿಗೆ ಒಂದು ರೀತಿಯಲ್ಲಿ ಅಯೋಧ್ಯೆಯೇ ಕಾರಣ ಎಂದಾಗ ನಮಗೆ ನಾಚಿಕೆ ಆಗುತ್ತದೆ" ಅಯೋಧ್ಯೆಯ ಜನ ಇದನ್ನೂ ಎಂದೂ ಬಯಸಲಿಲ್ಲ ಎಂದು ಬರೆಯಿರಿ.

- ಎಂದಿದ್ದು ರಾಮ್ ಜತನ್ ಸಾಹ್ನಿ ಎಂಬ ಅಯೋಧ್ಯೆವಾಸಿ ಇಡೀ ಪಟ್ಟಣದ ಪರವಾಗಿ ಕ್ಷಮಾಪಣೆ ಕೇಳಿದ್ದ, 'ಔಟ್‌ಲುಕ್' ಪತ್ರಕರ್ತರ ಬಳಿ.

ಮತ ಮೌಢ್ಯಗಳ ನಿತ್ಯ ರೋಗ

ವೈಚಾರಿಕ ಸಮರ ಸಾರಿದ ಕುವೆಂಪು

ಡಿಸೆಂಬರ್ 29 ರಾಷ್ಟ್ರಕವಿ ಕುವೆಂಪು ರವರ ಜನ್ಮದಿನ. ಅಂಧಶ್ರದ್ಧೆ ಮತಾಂಧತೆ, ಜಾತೀಯ ವ್ಯವಸ್ಥೆ ವಿರುದ್ಧ ಪ್ರಬಲ ವೈಚಾರಿಕ ಸಮರ ಸಾರಿದವರು. ಪುರೋಹಿತಶಾಹಿಗಳ, ಸ್ಥಾಪಿತ ಹಿತಾಸಕ್ತಿಗಳ ಕೆಂಗಣ್ಣಿನ ಧಾಳಿ ಎದುರಿಸಿದವರು. ಮತಾಂಧತೆಯ ಕರಾಳ ಶಕ್ತಿಗಳು ಹೂಂಕರಿಸುತ್ತಿರುವ ಈ ಸಂದರ್ಭದಲ್ಲಿ ಅವರ ಚಿಂತನೆಗಳಲ್ಲಿ ಕೆಲವನ್ನು ಹೆಕ್ಕಲಾಗಿದೆ. 'ವಿಚಾರಕ್ರಾಂತಿಗೆ ಆಹ್ವಾನ' ಪುಸ್ತಕದಿಂದ.



ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಹುಟ್ಟುವಾಗ 'ವಿಶ್ವಮಾನವ'ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿಸಿ ಅವನನ್ನು 'ಬುದ್ಧ'ನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ ಅನಿಕೇತನರಾಗಬೇಕು, ಲೋಕ ಉಳಿದು, ಬಾಳಿ ಬದುಕಬೇಕಾದರೆ!

ಸಾವಿರಾರು ವರುಷ ಹಿಂದೆ ಮೌಢ್ಯ

.....ನಮ್ಮ ದೇಶ, (ಹಿಂದೆ)ಯಾವತ್ತೂ ಪ್ರಜಾಸತ್ತೆಯ ಗಾಳಿಯನ್ನು ಮೂಸಿ ನೋಡದಿದ್ದ ದೇಶ. ರಾಜರನ್ನು ಪ್ರತ್ಯಕ್ಷ ದೇವರೆಂದು ಪೂಜಿಸಿದ ದೇಶ; ಪುರೋಹಿತರನ್ನು ಭೂಸುರರೆಂದು ಆರಾಧಿಸಿದ ದೇಶ! ಮತಮೌಢ್ಯ ಎಂಬ ನಿತ್ಯರೋಗವು ಅದರ ನಾಡಿನಾಡಿಗಳಲ್ಲಿ ಮಾತ್ರವಲ್ಲದೆ ಎಲುಬಿನಲ್ಲಿಯೂ ಐದು ಸಾವಿರ



[illegible] ವರ್ಣ, ಮತ, ಜಾತಿ, ಪಂಥ, ಪಂಗಡ ಎಂಬ ನೂರಾರು ಭೇದಗಳಿಂದ ನರಳುತ್ತಿರುವ ದೇಶ.

ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೇ ಕಾರಣವೆಂದು ತಿಳಿಯುವುದು ತಪ್ಪಾಗುತ್ತದೆ. ಅದಕ್ಕಿಂತಲೂ ಮಹತ್ತಾದ ಮತ್ತು ಮೂಲಭೂತವಾದ ಮತ್ತೊಂದು ಕಾರಣವೂ ಇದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ ಅದು ಒಂದು ಅಮೂರ್ತ ವಸ್ತು. ಅದು ಹಾಕಿಕೊಂಡಿರುವ ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ. ಅದು ಭಾವರೂಪಿ ಯಾದುದರಿಂದ ಅತಿಸೂಕ್ಷ್ಮವಾಗಿ ಹೃದಯ ಪ್ರವೇಶಮಾಡಿ ನಮ್ಮನ್ನು ಆಕ್ರಮಿಸಿಸುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ ಅತ್ಯಂತ ಅಂತರತಮ ಸತ್ಯಸ್ಯ ಸತ್ಯವಾದ ಸನಾತನ ತತ್ವಕ್ಕೆ (ಅದನ್ನು ಆಧ್ಯಾತ್ಮ ಎಂದು ಹೆಸರಿಸುತ್ತೇವೆ) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದರಿಂದಲೂ ಮತ್ತು ಅದನ್ನೇ ತಾನು ಪೋಷಿಸುತ್ತಿರುವುದಾಗಿ ಹೇಳುತ್ತಲೂ ಇರುವುದರಿಂದಲೂ ಅದರ ಪ್ರಚ್ಛನ್ನವಂಚನೆಯ ಮುಷ್ಟಿಯಿಂದ ತಪ್ಪಿಸಿಕೊಳ್ಳುವುದೂ ಕಷ್ಟಸಾಧ್ಯವಾಗಿದೆ. ಅದರ ಹೆಸರು 'ಮತ'! ಈ ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ.

★★★

ಆದ್ದರಿಂದ ಸಮಾಜವಾದದ ಪ್ರಜಾಸತ್ತೆ ನಿಮ್ಮ ಗುರಿಯಾಗಿದ್ದರೆ ಮತಭಾವನೆಯ ಶನಿ ಸಂತಾನವಾದ ಜಾತಿಪದ್ಧತಿಯ ಸಂಪೂರ್ಣ ವಿನಾಶಕ್ಕೆ ನೀವು ಕಂಕಣ ಕಟ್ಟಿಕೊಂಡು ಹೋರಾಡಬೇಕು.

★★★

ತಪ್ಪದು ಕೇಡು

ಇನ್ನು ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು.

★★★

ಹೊರಬನ್ನಿ

ಗುಡಿ, ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ,
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ,
ಓ, ಬನ್ನಿ, ಸೋದರರೆ, ಬೇಗ ಬನ್ನಿ!
ಸಿಲುಕದಿರಿ ಮತವೆಂಬ ಮೋಹದಜಾಲಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ
ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ,
ಓ ಬನ್ನಿ, ಸೋದರರೆ,
ವಿಶ್ವಪಥಕೆ!

ಎಲ್ಲಾ ಮತಗಳಲ್ಲಿ ಪುರೋಹಿತ ಶಾಹಿ

ನಮ್ಮ ದೇಶದಲ್ಲಿ ಪುರೋಹಿತಶಾಹಿ, ಪುರೋಹಿತ ವರ್ಗ ಎಂದರೆ ಸಾಮಾನ್ಯವಾಗಿ ಬ್ರಾಹ್ಮಣವರ್ಗ ಅಂತ. ಆದರೆ ವಾಸ್ತವವಾಗಿ ಪುರೋಹಿತ ಶಾಹಿ, ಪುರೋಹಿತವರ್ಗ ಎಂದರೆ ಬರೀ ಬ್ರಾಹ್ಮಣವರ್ಗವಲ್ಲ. ಹಿಂದೂಗಳಲ್ಲಿ ಬ್ರಾಹ್ಮಣ ವರ್ಗವಾಗುತ್ತದೆ. ಕ್ರೈಸ್ತರಲ್ಲೂ ಪುರೋಹಿತಶಾಹಿ ಇದೆ. ಅಲ್ಲಿ ಅದನ್ನು ಯಾವ ಜಾತಿ ಎಂದು ಕರೆಯುವುದು? ಮುಸ್ಲಿಮರಲ್ಲೂ ಪುರೋಹಿತ ಶಾಹಿ ಇದೆ. ಬೌದ್ಧರಲ್ಲೂ ಪುರೋಹಿತಶಾಹಿ ಇದೆ. ಎಲ್ಲಾ ಮತಗಳಲ್ಲೂ ಪುರೋಹಿತಶಾಹಿ ಇದ್ದೇ ಇದೆ.




★★★

ನೂಕಾಚಿ...

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ!
ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು
ಪಾವ್ಗಳಿಗೆ ಪಾಲೆರೆದು ಪೋಷಿಸಾಯ್ತು
ಬಿಸಿಲು ಮಳೆ ಗಾಳಿ ಬೆಂಕಿಯನ್ನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೆ ದಾಸ್ಯವಾಯ್ತು.
ಗುಡಿಯೊಳಗೆ ಕಣ್ಮುಚ್ಚಿ ಬೆಚ್ಚಗಿರುವವನೆಲ್ಲ
ಭಕ್ತ ರಕ್ತವಹೀರಿ ಕೊಬ್ಬಹರನೆಲ್ಲ
ಗಂಟೆ ಜಾಗಟೆಗಳಿಂದ ಬಡಿದು ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಕದಿಂ ನುಡಿದು.

○

ರಾಮರಾಜ್ಯದ ಶಂಕಿತರು



ಅಕ್ಕ ಸೀತಾ
ಈ ಹ-ರಾಮ
ರಾಜ್ಯದಲ್ಲಿ
ನಿನ್ನಂತೆಯೇ ನಾನೂ
ಶಂಕಿತ
ನಿನ್ನ ಪಾತಿವ್ರತ್ಯದಂತೆಯೇ ನನ್ನ ದೇಶಭಕ್ತಿ
ಸಾಬೀತು ಪಡಿಸುವುದಾದರೂ ಹೇಗೆ ಹೇ
ಯಾವ ಸಾಕ್ಷಿಗಳನ್ನು ತರುವುದೆಲ್ಲಿಂದ
ನಮ್ಮ ಮನೆಯಲ್ಲೇ ನಾವು ನಿರಾಶ್ರಿತರು
ತುಂಬಿದ ನಾಡೊಳಗೆ ಪರಕೀಯರು
ನಮ್ಮ ನೆತ್ತರಿನಿಂದ ನೆಮ್ಮದಿಯನ
ಕಸಿಯಲಾಗಿದೆ.
ನಮ್ಮ ಹೃದಯಗಳನ್ನು ತ್ರಿಶೂಲಗಳಿಂ
ಗಾಯಗೊಳಿಸಲಾಗಿದೆ.

ಅಕ್ಕ ಸೀತಾ
ಶಂಕೆಯ ಸಾಮ್ರಾಜ್ಯದಲ್ಲಿ ಬೇಹುಗಾರರದ
ಮೇಲುಗೈ
ನಿನ್ನನ್ನು ಕಾಡಿಗಟ್ಟಿದ ಗೂಢಚಾರರೇ
ನನ್ನ ಕನಸುಗಳಿಗೂ ಕಾವಲಿದ್ದಾರೆ
ರಾಮರಾಜ್ಯದ ರಾಜಧರ್ಮ
ನಮ್ಮನ್ನು ನಡುಬೀದಿಯಲ್ಲಿ ಸುಡುತ್ತಿದೆ
ಕಳಂಕದ ಕಿರೀಟ ತೊಡಿಸಿ
ನಮ್ಮನ್ನು ಗಡಿದಾಟಿಸಲಾಗುತ್ತಿದೆ
ಇವರ ಕ್ರೌರ್ಯದೆದುರು ಕಾಡಿನ ವಿಷಜಂತು
ಕ್ರೂರ ಪ್ರಾಣಿಗಳೂ ಎಷ್ಟೊಂದು ಸೌಮ್ಯವಲ್ಲವ

ಅಕ್ಕ ಸೀತಾ
ಈ ನರಕದೊಡೆಯರ ಅಶ್ವಮೇಧದ ಕುದುರ
ಕಟ್ಟಲು ಇನ್ನೆಷ್ಟುದಿನ ಕಾಯುವುದು
ನಿನ್ನ ನೋವು ನಿನ್ನಲ್ಲಲ್ಲದೇ ಇನ್ನಾರಬ
ಹೇಳಲಾದೀತು.

ಅಕ್ಕ ಸೀತಾ
ನಾವು ಈ ನೆಲದ ಮಕ್ಕಳು
ಪರೀಕ್ಷೆಯೆಂಬ ಪಿತೂರಿಯ ಬೆಂಕಿಯಲ್ಲೇಕೆ
ನಾವು ಬೇಯಬೇಕು.
ಬೆನ್ನಿಗೆ ಬಾಣ ಬಿಡುವ ಕಾರ್ಯವೇಕೆ
ನಮ್ಮನ್ನಾಳಬೇಕು.

ಅಕ್ಕ
ನೀನು ದುಷ್ಟರನ್ನು ಇದ್ದಂತೆಯೇ ಬಿಟ್ಟು
ಹೊರಟು ಬಿಟ್ಟೆ
ನೀ ಬಿಟ್ಟು ಹೋದ ಕೆಲಸ ನಾ ತೀರಿ
ಬರುತ್ತೇನೆ
ಬೆಂಕಿಮಕ್ಕಳನ್ನು ಬೂದಿಯಾಗಿಸಿ
ಈ ನೆಲದಾಯಿಯ
ಮಡಿಲೊಳಗೆ ಮಲಗುತ್ತೇನೆ.

ನನ್ನ ಮನೆಯಲ್ಲೇ ನಾನು ಪರಕೀಯನಾಗುವ
ಬದಲು
ಆಡಿದ ಅಂಗಳದಲ್ಲೇ ನನ್ನ ಗೋರಿಯಾಗಲಿ
ತಾಯಂದಿರ ಬಸಿರುಗಳ ಕೊಲ್ಲುವ ರಕ್ಕಸತ
ಭ್ರೂಣದಲ್ಲೇ ತೀರಿಹೋಗಲಿ.

ಕಾಲವೇ
ಏಳೇಳು ಕಾಲಕ್ಕೂ
ನನ್ನ ಅಕ್ಕಂದಿರನ್ನು ಸೀತೆಯರನ್ನಾಗಿಸಬೇಡ
ಕಳಂಕದ ಬೆಂಕಿಯಲ್ಲಿ
ನಮ್ಮನ್ನು ಸುಡಬೇಡ.

ಬಿ. ಪೀರ್ ಬಾಷ
ಹೂವಿನಹಡಗಲಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH